ಹೋಗುತ್ತಿದೆ. ಈ ಪರಿಶಿಷ್ಟ ಪಂಗಡದ ಆಲೆಮಾರಿ ಜನರಿಗೆ ಯಾವುದೇ ಸೌಲಭ್ಯಗಳು ಸಿಗುತ್ತಿಲ್ಲ.

**ಅಧ್ಯಕ್ಷರು :** – ಮಾನ್ಯ ಸಚಿವರು ಉತ್ತರ ಹೇಳಲಿ.

**ಶ್ರೀ ಎಂ.ಪಿ. ಕುಮಾರಸ್ವಾಮಿ :** – ಆದ್ದರಿಂದ ಮಾನ್ಯ ಸಚಿವರು ಅವರ ಅಭಿವೃದ್ಧಿಗಾಗಿ ಏನಾದರೊಂದು ವಿಶೇಷವಾದ ಕಾರ್ಯಸೂಚಿ ಮಾಡಿ ಅವರ ಅಭಿವೃದ್ಧಿಗೆ ಪ್ರಯತ್ನ ಮಾಡಬೇಕೆಂದು ಹೇಳಿ ನಾನು ಈ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎ. ನಾರಾಯಣಸ್ವಾಮಿ :** – ರಾಜ್ಯದಲ್ಲಿ ಎಲ್ಲಾ ಜಾತಿಗಳಿಗೂ ನಿಗಮಗಳನ್ನು ಸ್ಥಾಪನೆ ಮಾಡುವುದಕ್ಕೆ ಆಗುವುದಿಲ್ಲ. ಅಲೆಮಾರಿ ಜನಾಂಗಕ್ಕೆ ವಿಶೇಷ ಕಾಳಜಿಯನ್ನು ಕೊಡುವ ಜವಾಬ್ದಾರಿ ಸರ್ಕಾರದ್ದು ಇದೆ. ಈಗಾಗಲೇ ನಾನು ಈ ವಿಷಯದ ಬಗ್ಗೆ ಮಾನ್ಯ ಶಾಸಕರಿಗೆ ಹೇಳಿದ್ದೇನೆ ಹಾಗೂ ಇಲಾಖೆಯಲ್ಲಿಯೂ ಕೂಡಾ ಚರ್ಚೆಯನ್ನು ಮಾಡಿದ್ದೇನೆ. ಆಲೆಮಾರಿಗಳಲ್ಲಿ ಇನ್ನೂ ಹೆಚ್ಚು ಆಲೆಮಾರಿಗಳು ಇರತಕ್ಕನವರಿಗೆ ವಿಶೇಷವಾದ ಯೋಜನೆಯನ್ನು ರೂಪಿಸಿ, ಅವರಿಗೆ ಅಭಿವೃದ್ಧಿ ಆಗುವುಧಕ್ಕೆ ಯಾವ್ಯಾವ ಯೋಜನೆಗಳನ್ನು ನೀಡಬೇಕು. ಎಲ್ಲಿಂದ ನೀಡಬೇಕು ಎನ್ನುವುದನ್ನು ಖಂಡಿತವಾಗಿಯೂ ಕಾರ್ಯರೂಪಕ್ಕೆ ತರುತ್ತೇನೆ.

## 3. ವಿತ್ತೀಯ ಕಾರ್ಯಕಲಾಪ

## 2012–13ನೇ ಸಾಲಿನ ಆನುದಾನ ಬೇಡಿಕೆಗಳ ಮೇಲೆ ಚರ್ಚೆ.

**ಅಧ್ಯಕ್ಷರು :** – ಈಗ ವಿತ್ತೀಯ ಕಲಾಪ. ಮಾನ್ಯ ಗೂಳಿಹಟ್ಟಿ ಡಿ. ಶೇಖರ್ ಮಾತನಾಡಿ. 15 ನಿಮಿಷದಲ್ಲಿ ಮುಗಿಸಿ.

**ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) :** – ಆಯಿತು, ಮಾನ್ಯ ಅಧ್ಯಕ್ಷರೆ, ವಿತ್ತೀಯ ಕಲಾಪ ಬೇಡಿಕೆಯ ಮೇಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಿಶೇಷವಾದ ಧನ್ಯವಾದಗಳಲನ್ನು ತಿಳಿಸುತ್ತೇನೆ. ಇವತ್ತು ರಾಜ್ಯದಲ್ಲಿ ಬಹಳಷ್ಟು ಬರ ಇದೆ. ಮಳೆ ಇಲ್ಲ. ಕುಡಿಯಲಿಕ್ಕೆ ನೀರಿಲ್ಲ. ಜಾನುವಾರುಗಳಿಗೆ ಮೇವು ಇಲ್ಲ. ನಮ್ಮ ಕ್ಷೇತ್ರವಾದ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕು ಇಡೀ ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದ ತಾಲ್ಲೂಕಾಗಿದ್ದು ಡಾ॥ ನಂಜುಂಡಪ್ಪ ವರದಿಯ ಪ್ರಕಾರ ಕೂಡ ಅತ್ಯಂತ ಹಿಂದುಳಿದ ತಾಲ್ಲುಕಾಗಿರುತ್ತದೆ.

(ಈ ಹಂತದಲ್ಲಿ ಉಪ ಸಭಾಧ್ಯಕ್ಷರು ಪೀಠವನ್ನು ಆಲಂಕರಿಸಿದರು)

ಈಗ ಕುಡಿಯುವ ನೀರಿಗೆ ಸಹ ಕಷ್ಟವಾಗಿದೆ. ಇಲ್ಲಿ ಯಾವುದೇ ನದಿಮೂಲಗಳು ಇರುವುದಿಲ್ಲ. ಇರುವ ಒಂದು ವೇದಾವತಿ ನದಿ ಏನು ಹರಿಯುತ್ತದೆ ? ಅದೂ ಕೂಡಾ ನೀರಿಲ್ಲದೆ ಬತ್ತಿ ಹೋಗಿರುತ್ತದೆ. ಕುಡಿಯುವ ನೀರಿಗೋಸ್ಕರ 400 ರಿಂದ 700 ಅಡಿಯವರೆಗೆ ಬೋರ್‌ವೆಲ್ ಕೊರೆದರೂ ಕೂಡಾ ಕುಡಿಯುವುದಕ್ಕೆ ಶುದ್ಧವಾದ ನೀರು ಸಿಗುತ್ತಿಲ್ಲ. ಜೊತೆಗೆ ತಾಲ್ಲೂಕಿನಲ್ಲಿ floride ಅಂಶ ಇರುವ ನೀರು ಹೆಚ್ಚಿನ ಪ್ರಮಾಣದಲ್ಲಿದ್ದು ಸುಮಾರು 98 ಕ್ಕಿಂತ ಅಧಿಕ ಹಳ್ಳಿಗಳಲ್ಲಿ ಅಂಶ ಇದೆ. ಜೊತೆಗೆ ತಾಲ್ಲೂಕಿನಲ್ಲಿ ಬಹಳಷ್ಟು ಸುಮಾರು 25 ರಿಂದ 30 ಸಾವಿರ ಜನ ಉದ್ಯೋಗ ಅರಸಿ ಗುಳೆ ಹೋಗಿದ್ದಾರೆ. ಅದರಲ್ಲೂ ಹೆಚ್ಚಿನದಾಗಿ ಬೆಂಗಳೂರು ಮತ್ತು ಕಾಫಿ ಎಸ್ಟೇಟ್‌ಗಳಲ್ಲಿ ಎಲ್ಲೆಲ್ಲಿ ಕೆನಲ್ ಲೈನಿಂಗ್ ವರ್ಕ್ ಮಾಡುತ್ತಾರೋ, ಅಂತಹ ಕಡೆ ಜನ ಗುಳೆ ಹೋಗುವಂತಹ ಕೆಲಸ ಆಗುತ್ತಿದೆ. ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಉದ್ಯೋಗ ಕೊಡುವಂತಹ ಒಂದು scheme ಏನಿದೆ. ಕೇಂದ್ರ ಸರ್ಕಾರದ NREG Scheme ಇದೆ. ಈ scheme ಸಮರ್ಪಕವಾಗಿ ನಮ್ಮ ತಾಲ್ಲೂಕ್‌ನಲ್ಲಿ ಮತ್ತು ಜಿಲ್ಲೆಯಲ್ಲಿ ಯಾವ ರೀತಿ ಇದೆಯೋ ಗೊತ್ತಿಲ್ಲ. ಸಾಮಾನ್ಯವಾಗಿ ಇಡೀ ರಾಜ್ಯದಲ್ಲಿ ಯಾವುದೇ ರೀತಿಯಲ್ಲಿ ಸರಿಯಾಗಿ ಅನುಷ್ಠಾನವಾಗುತ್ತಿಲ್ಲ. ಆದರಲ್ಲೂ ವಿಶೇಷವಾಗಿ ನಮ್ಮ ಕ್ಷೇತ್ರದ ಹೊಸದುರ್ಗ ಕ್ಷೇತ್ರದಲ್ಲಿ NREG Work ಸಮರ್ಪಕವಾಗಿ ನಡೆಯುತ್ತಿಲ್ಲ. ಆದರಿಂದ ಯಾರಿಗೂ ಸಹ ಉದ್ಯೋಗ ಸಿಗುತ್ತಿಲ್ಲ. ಬರಿ ಅಂಕಿ ಅಂಶಗಳನ್ನು ಪತ್ರಿಕೆ, ಟಿವಿ, ಲ್ಯಾಪ್‌ಟಾಪ್ ಮತ್ತು ಕಂಪ್ಯೂಟರ್‌ಗಳಲ್ಲಿ ಮಾತ್ರ ಅಂಕಿ ಅಂಶಗಳನ್ನು ಅಧಿಕಾರಿಗಳು ಕೊಡುತ್ತಾರೆ ಹೊರತು. ಭೌತಿಕವಾಗಿ, ಫಿಸಿಕಲ್ ಆಗಿ ಇಲ್ಲಿ ಯಾರಿಗೂ ಕೂಡಾ ಉದ್ಯೋಗ ಸಿಗುವಂತಹ ಕೆಲಸ ಆದರಿಂದ ಆಗಿಲ್ಲ. ಅದರಲ್ಲಿ ಒಂದು ಕ್ರಿಯಾ ಯೋಜನೆ ಮಾಡುವುದು ಕೂಡಾ ಗ್ರಾಮ ಪಂಚಾಯಿತಿಯಲ್ಲಿ ಮಾಡುತ್ತಾರೆ. ಆ ಗ್ರಾಮ ಪಂಚಾಯತಿಯಲ್ಲಿರುವ ಸದಸ್ಯರು ಅವರೇ ಕ್ರಿಯಾ ಯೋಜನೆಯನ್ನು ತಯಾರಿಸಿಕೊಂಡು ಅವರೇ ಒಂದೊಂದು work ಗಳನ್ನು ಹಾಕಿಕೊಂಡು contract ರೂಪದಲ್ಲಿ ಮಾಡುತ್ತಾರೆ. ಉದ್ಯೋಗ ಕಾರ್ಡ್‌ಗಳನ್ನು ಹೊಂದಿರುವಂತಹ ಯಾರಿಗೂ ಕೂಡಾ ಉದ್ಯೋಗ ಸಿಗುತ್ತಿಲ್ಲ. ಅದರಲ್ಲಿ ನಿಜಕ್ಕೂ ಉದ್ಯೋಗ ಖಾತ್ರಿ ಎಂದು ಇರುವುದು ಅವತ್ತಿನ ಕೂಲಿ ಮಾಡತಕ್ಕಂತಹ ಜನರಿಗೆ, ಅವತ್ತು ಬೆಳಿಗ್ಗೆಯಿಂದ ಸಂಜೆಯವರೆಗೆ ಕೂಲಿ ಮಾಡತಕ್ಕ ಜನರು ಸಾಯಂಕಾಲ ಆದ ತಕ್ಷಣ ಅವರಿಗೆ ಕೂಲಿ ಹಣ ಬೇಕಾಗುತ್ತದೆ. ಆದರೆ, ಕೆಲವು ಕಡೆ ಉದ್ಯೋಗಕ್ಕೆ ಕರೆದುಕೊಂಡು ಹೋಗುವಂತಹ atleast ಮೇಸ್ತ್ರಿಗಳು ಇದ್ದಂತಹ ಸಂದರ್ಭದಲ್ಲಿ ಅವರಿಗೆ

ಒಂದು ವಾರಕ್ಕೆ ಆಗುವಷ್ಟು ಬಟವಾಡೆಯನ್ನು ಕೊಟ್ಟು ಬಿಟ್ಟು ಕೂಲಿಗೆ ಕರೆದುಕೊಂಡು ಹೋಗುತ್ತಾರೆ. ವಾಸ್ತವಾಂಶ ಇರುವುದು. ಆ ಕೂಲಿ ಇವತ್ತು 155 ರೂ.ಗಳಾಗಿವೆ. ಹಾಗಾಗಿ ಯಾರೂ ಕೂಡ ಬರುತ್ತಾ ಇಲ್ಲ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ :** – ಸನ್ಮಾನ್ಯ ಅಧ್ಯಕ್ಷರೆ, ನಾನು in-charge Minister ಆಗಿದ್ದಾಗ ಅಲ್ಲಿ review ಮಾಡಿದ್ದೇನೆ. ನಮ್ಮ ಸದಸ್ಯರು ಏನು ಹೇಳಿದರೋ, ಆ ವಿಚಾರವನ್ನು ನಾನು ಅಲ್ಲಿಗೆ ಅಧಿಕಾರಿಗಳಿಗೆ ಹೇಳಿದ್ದೇನೆ. ಎಷ್ಟೇ ಜನ ಕೆಲಸಕ್ಕೆ ಬಂದರೂ, ಅವತ್ತಿನಿಂದಲೇ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಸೂಚಿಸಿದ್ದೇನೆ. Payment ಮಾಡುವುದಕ್ಕೆ ಹಣವಿದೆ ಎನ್ನತಕ್ಕಂಥ ಮಾತನ್ನು ಆ ಮೀಟಿಂಗ್‌ನಲ್ಲೇ ಹೇಳಿದ್ದೇನೆ. ಮಾನ್ಯ ಸದಸ್ಯರೂ ಆ ಸಂದರ್ಭದಲ್ಲಿ ಅಲ್ಲಿದ್ದರು. But, ಹಿಂದೆ ಏನಾದರೂ ಸಆಗಿದೆಯೋ, ಏನೋ ಗೊತ್ತಿಲ್ಲ. ಈಗಂತೂ, ಎಷ್ಟೇ ಜನ ಕೆಲಸ ಕೇಳಿಕೊಂಡು ಬಂದರೂ ಸಹಾ, ಅವರಿಗೆ ಕೆಲಸ ಕೊಡುವುದಕ್ಕೆ ತಮ್ಮ ಎದುರಿಗೇ ಆದೇಶ ಕೊಟ್ಟಿದ್ದೇನೆ. ಅವರು ಒಪ್ಪಿಕೊಂಡಿದ್ದಾರೆ.

**ಶ್ರೀ ಗೂಳಿಹಟ್ಟಿ ಡಿ. ಶೇಖರ್ :** – ನೀವು ಆದೇಶ ಕೊಟ್ಟು, ಅದು ಸಮರ್ಪವಾಗಿ ಕಾರ್ಯರೂಪಕ್ಕೆ ಬಂದರೆ,

**ಶ್ರೀ ಬಿ.ಜೆ. ಪುಟ್ಟಸ್ವಾಮಿ :** – ಆ ತರಹದ್ದು ಏನಾದರೂ ಇದ್ದರೆ, ದಯವಿಟ್ಟು ನನ್ನ ಗಮನಕ್ಕೆ ತನ್ನಿ, ಈಗಲೇ ನಾನು ಸಂಬಂಧಿಸಿದವರನ್ನು contact ಮಾಡುತ್ತೇನೆ.

**ಶ್ರೀ ಗೂಳಿಹಟ್ಟಿ ಡಿ. ಶೇಖರ್ :** – ಖಂಡಿತಾ ತರುತ್ತೇನೆ. ಉದ್ಯೋಗ ಕೊಟ್ಟರೆ ಖಂಡಿತವಾಗಿಯೂ ಕೂಡ ನಿಮಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಏಕೆಂದರೆ, ಇರುವ ವಾಸ್ತವಾಂಶವನ್ನು ನಾವು ಮಾತನಾಡಬೇಕೇ ಹೊರತು. ಅಂಕಿ ಅಂಶಗಳಿಂದ ನಾವು ಮಾತನಾಡಲಿಕ್ಕೆ ಕಷ್ಟವಾಗುತ್ತದೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ, ಹಿಂದಿನ ವರ್ಷಗಳಿದ್ದನ್ನು compare ಮಾಡಿಕೊಂಡರೆ, ಸುಮಾರು 5–6 ತಿಂಗಳಿನಿಂದ 1 ವರ್ಷಗಳಾದರೂ ಕೂಡ payment ಗಳಾಗಿಲ್ಲ. ಹಾಗಾಗಿ, ವಾಸ್ತವಿಕೆಯಿಂದ ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ನಾವು ತಿಳಿಸುತ್ತಿದ್ದೇವೆ. ದಯಮಾಡಿ NREGS ಜೊತೆಗೆ, ಗುಳೇ ಹೋಗತಕ್ಕಂಥ ಸಂದರ್ಭದಲ್ಲಿ, ಆ ಜನಗಳಿಗೆ ಉದ್ಯೋಗ ನೀಡಲಿಕ್ಕೆ ಬರದ ಕಾಮಗಾರಿಗಳನ್ನು ಕೈಗೆತ್ತಿಕೊಂಡರೆ, ಆದರಿಂದ ತುಂಬಾನೇ ಅನುಕೂಲವಾಗುತ್ತದೆ ಎನ್ನುವ ಮಾತನ್ನು ತಿಳಿಸುತ್ತೇನೆ. ಗ್ರಾಮೀಣಾಭಿವೃದ್ಧಿ

ಇಲಾಖೆಯ ಕುಡಿಯುವ ನೀರು ಸರಬರಾಜು ಯೋಜನೆಗಾಗಿ ಇವತ್ತು ಯಥೇಚ್ಛವಾಗಿ ಅನುದಾನಗಳು ಬರುತ್ತಿದೆ. ಅದರಲ್ಲಿ surface water ನಿಂದ ಅಂದರೆ ನದಿ ಮೂಲ ಅಥವಾ ಹಳ್ಳ ಮೂಲಗಳಿಂದ ನಾವೇನು ನೀರು ತೆಗೆದುಕೊಳ್ಳುತ್ತೇವೆಯೋ, ಆ ಕುಡಿಯುವ ನೀರಿಗೆ ಹೆಚ್ಚಿಗೆ ಆದ್ಯತೆ ಸಿಗುತ್ತದೆ. ಅದರೆ ಎಲ್ಲೋ ಒಂದು ಕಡೆ ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ನಿಯಂತ್ರಣ ಎನ್ನವುದು ಇಲ್ಲ. ಸರ್ಕಾರ ಬೇಕಾದಷ್ಟು ಅನುದಾನವನ್ನು ಕೊಟ್ಟರೂ ಕೂಡ, ಸಮರ್ಪವಕಾಗಿ ಅದನ್ನು ನಿರ್ವಹಣೆ ಮಾಡುವಂತಹ ಜವಾಬ್ದಾರಿ ಇಲಾಖೆಯ ಅಧಕಾರಿಗಳಿಗೆ ಇರುವುದಿಲ್ಲ. ಎಲ್ಲದಕ್ಕೂ ಕೊಕ್ಕೆಗಳನ್ನು ಹಾಕುತ್ತಾರೆ. Estimate ಗಳು, ಹೋದ ವರ್ಷ 1 ಕೋಟಿ ರು.ಗಳು ಇದ್ದದ್ದು, ಈ ವರ್ಷ 2 ಕೋಟಿ ರೂ.ಗಳಾಗಿರುತ್ತದೆ. ಯಾವುದೋ ಸಣ್ಣ ಸಣ್ಣ ಕಾರಣಗಳನ್ನು ಇಟ್ಟುಕೊಂಡು, ಅದನ್ನು ವಿಳಂಬ ಮಾಡಿಕೊಂಡು, ಅದು ಸಮರ್ಪಕವಾಗಿ ಜಾರಿಯಾಗದೆ, 3–4 ವರ್ಷಗಳವರೆಗೆ ತಳ್ಳಿಕೊಂಡು ಹೋಗುವಂತಹ ಕೆಲಸ RDPR ನಲ್ಲಿ ನಡೆಯುತ್ತಿದೆ. ಇದಕ್ಕೆ ಸಾಕ್ಷಿ ಎಂದರೆ, ನಮ್ಮ ಜಿಲ್ಲೆಯಲ್ಲಿ ಕಳೆದ ವರ್ಷ ಮತ್ತು ಆಚೆ ವರ್ಷ. RDPR ನಿಂದ ಜಾರಿಯಾಗಿರುವಂತಹ ಕೆಲಸಗಳು. ಹಿಂದಿನ ಅಧಿಕಾರಿಗಳಿಗೆ ನಾವು ಈ ಮೂಲಕ ಧನ್ಯವಾದಗಳನ್ನು ತಿಳಿಸಬೇಕಾಗುತ್ತದೆ. ಹಿಂದೆ ನಮ್ಮ ಜಿಲ್ಲೆಯಲ್ಲಿ ಈಗ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇರತಕ್ಕಂಥ, ರಂಗೇಗೌಡ ಎನ್ನುವವರು CEO ಆಗಿದ್ದರು. ಅವರು ಇದ್ದಂತಹ ಸಂದರ್ಭದಲ್ಲಿ ಚೆನ್ನಾಗಿತ್ತು. ರಾಜ್ಯದಲ್ಲಿ ಕೆಲವು ಅಧಿಕಾರಿಗಳು, ಅವರು ಜಿಲ್ಲಾಧಿಕಾರಿಗಳು ಇರಬಹುದು, CEOs ಇರಬಹುದು. ಅವರೆಲ್ಲಾ ಚೆನ್ನಾಗಿಯೇ CEO ಮಾಡಿದ್ದಾರೆ. ಅವರು ಇದ್ದಂತಹ ಸಂದರ್ಭದಲ್ಲಿ ಚೆನ್ನಾಗಿತ್ತು. ರಾಜ್ಯದಲ್ಲಿ ಕೆಲವು ಅಧಿಕಾರಿಗಳು, ಅವರು ಜಿಲ್ಲಾಧಿಕಾರಿಗಳು ಇರಬಹುದು. CEOs ಇರಬಹುದು. ಅವರೆಲ್ಲಾ ಚೆನ್ನಾಗಿಯೇ work ಮಾಡಿದ್ದಾರೆ. ಕೆಲವರು ಬರೇ ಕೊಕ್ಕೆ ಹಾಕುವುದಕ್ಕೇ ಬಂದಿರುತ್ತಾರೆ. ಆದರಿಂದ ನಿಜಕ್ಕೂ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಹಿಂದೆ ನಮ್ಮಲ್ಲಿ ಇದ್ದಂತಹ CEO ರವರು ಬಹಳಷ್ಟು ಸಮರ್ಪಕವಾಗಿ ಕಾರ್ಯವನ್ನು ನಿರ್ವಹಿಸಿದ್ದರು. ಅವರು ಬಂದ ಅನುದಾನವನ್ನು ಕೂಡ ಖರ್ಚು ಮಾಡಿದ್ದರು. ಆದರೆ, ಕಳೆದ ವರ್ಷ ಮತ್ತು ಈ ವರ್ಷದ progress report ಗಳನ್ನು ನೋಡಿದರೆ, ಅದರಲ್ಲಿ ಗಿಡ ನೆಟ್ಟಿದ್ದು, ರೈತರಿಗೆ ಸಸಿ ಕೊಟ್ಟಿದ್ದು, ಇದರ ಅಂಕಿ ಅಂಶಗಳನ್ನು ಮಾತ್ರ ಕೊಟ್ಟು, ಸರ್ಕಾರಕ್ಕೆ ತಪ್ಪು ತಪ್ಪು ಲೆಕ್ಕಗಳನ್ನು ಕೊಡುವಂತಹ ಕೆಲಸವನ್ನು ಅಧಿಕಾರಿಗಳು

ಮಾಡುತ್ತಿದ್ದಾರೆ. ಇಂಧನ ಇಲಾಖೆಯಲ್ಲಿ ಚೆನ್ನಾಗಿ ಕೆಲಸವಾಗುತ್ತಿದೆ. ಅದಕ್ಕೆ ಆ ಇಲಾಖೆಯ ಸಚಿವರಿಗೆ ಇರತಕ್ಕಂಥ ಕಾಳಜಿ ಮತ್ತು ಅದರಲ್ಲಿ ಇರತಕ್ಕಂಥ ಅಧಿಕಾರಿವರ್ಗ ಕಾರಣರಾಗಿದ್ದಾರೆ. ಅವರನ್ನು ನಿಜಕ್ಕೂ ನಾವು ಅಭಿನಂದಿಸಬೇಕು. ಇಂಧನ ಇಲಾಖೆಯ BESCOM ನಲ್ಲಿ ಇರತಕ್ಕಂಥ MD ಇರಬಹುದು. ಬೇರೆ ಬೇರೆ ಅಧಿಕಾರಿಗಳು ಇರಬಹುದು. ಅವರು ಯಾವುದೇ ಸಮಸ್ಯೆ ಇದ್ದರೂ ಬಹಳ ಚೆನ್ನಾಗಿ ಸ್ಪಂದಿಸುತ್ತಾರೆ. ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಾರೋ, ಆ ಇಲಾಖಾ ಸಚಿವರಿಗೆ ಒಳ್ಳೆಯ ಹೆಸರು ಬರುತ್ತದೆ. ಇಲಾಖಾ ಸಚಿವರಿಗೆ ಹೆಸರು ಬಂದರೆ, automatic ಆಗಿ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಯಾವುದೇ ಸಮಸ್ಯೆಗಳನ್ನು ಇಂಧನ ಇಲಾಖೆಯಲ್ಲಿ ಸಮರ್ಪಕವಾಗಿ ನಿರ್ವಹಣೆ ಮಾಡಲಾಗುತ್ತಿದೆ. ಇವತ್ತು ನಮ್ಮ ತಾಲ್ಲೂಕಿನಲ್ಲಿ ಕಳೆದ ಒಂದೂವರೆ ವರ್ಷಗಳಲ್ಲಿ ಬಹಳಷ್ಟು ಸಮಸ್ಯೆಗಳಿದ್ದವು. ಮಾನ್ಯ ಸಚಿವರಗೆ ಮನವಿ ಮಾಡಿದ ಮೇಲೆ, ಆವರಿಂದ ಮತ್ತು MD ಮಣಿವಣ್ಣನ್ ಎಂಬುವವರು ಯಾರಿದ್ದಾರೆ. ಅವರಿಂದ ಎಲ್ಲಾ ಸಮಸ್ಯೆ ಬಗೆಹರಿದಿದೆ. ನಿಜಕ್ಕೂ ನಾವು ಈ ಸಂದರ್ಭದಲ್ಲಿ ಇಬ್ಬರಿಗೂ ಕೂಡ thanks ಹೇಳಬೇಕಾಗುತ್ತದೆ. ಒಂದು ಸಣ್ಣ ಒಂದು ಮನವಿ ಮಾಡಿದರೆ ಸಾಕು. ಯಾವುದೇ transformer ಕೊರತೆ ಇರಲಿ. ವಿದ್ಯುತ್ ಸಮಸ್ಯೆ ಇರಲಿ. ಅಂತಹ ಸಮಸ್ಯೆಗಳನ್ನು ಶಾಶ್ವತವಾಗಿ ದೂರ ಮಾಡುವಂತಹ ಕೆಲಸವನ್ನು ಅವರು ಮಾಡಿದ್ದಾರೆ. ಅಲ್ಲದೆ ರೈತರು ಮತ್ತು ಜನಪ್ರತಿನಿಧಿಗಳೊಂದಿಗೆ ನಿರಂತರವಾಗಿ ಸಂಪರ್ಕ ಇಟ್ಟುಕೊಂಡು. ಆ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಆ ಇಲಾಖೆಯಲ್ಲಿ ಕೆಲಸವಾಗುತ್ತಿದೆ. ಇನ್ನಷ್ಟು ಚೆನ್ನಾಗಿ ಆ ಇಲಾಖೆ ಸಮರ್ಪಕವಾಗಿ ಕೆಲಸ ಮಾಡುವುದರ ಜೊತೆಗೆ ಅವರಿಗೆ ಉತ್ತೇಜನ ಕೂಡ ನೀಡಬೇಕೆಂದು ಕೋರುತ್ತೇನೆ. ಇನ್ನು ನಮ್ಮ ಜವಳಿ ಇಲಾಖೆ ಬಗ್ಗೆ ಹೇಳುವುದಾದರೆ, ಹಿಂದೆ ನಾನು ಜವಳಿ ಇಲಾಖೆಯಲ್ಲಿ ಕೆಲಸ ಮಾಡಿ ಬಂದವರು. ಮಾನ್ಯ ಯಡಿಯೂರಪ್ಪ ಸಾಹೇಬರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಜವಳಿ ಇಲಾಖೆಯಲ್ಲಿ ಸುವರ್ಣ ವಸ್ತ್ರ ನೀತಿ ಎಂಬ ಉದ್ಯೋಗ ಸಿಗುವಂತಹ ಯೋಜನೆಗೆ ಸುಮಾರು 500 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಘೋಷಣೆ ಮಾಡಿದರು. 500 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಬಜೆಟ್‌ನಲ್ಲಿ ಘೋಷಣೆ ಮಾಡಿದರು. 500 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದರೂ ಕೂಡ, ಅದು ಕಾರ್ಯಗತವಾಗಿಲ್ಲ. ಈ ವರ್ಷ ನಾವು last year ನಲ್ಲಿದ್ದೇನೆ. ಪ್ರತಿ ವರ್ಷ 100–150 ಕೋಟಿ ರೂ.ಗಳನ್ನು ಸುವರ್ಣ ವಸ್ತ್ರ ನೀತಿಗೆ ಬಿಡುಗಡೆ

ಮಾಡಬೇಕಾಗಿತ್ತು. ಅದರೆ ಇವತ್ತು ಬಿಡುಗಡೆ ಮಾಡಿರುವುದು ಕೇವಲ 120 ಕೋಟಿ ರೂ.ಗಳು ಮಾತ್ರ. 500 ಕೋಟಿ ರೂ.ಗಳನ್ನು announce ಮಾಡಿದ್ದರು. ಬಿಡುಗಡೆ ಮಾಡಿದ್ದು ಮಾತ್ರ 120 ಕೋಟಿ ರೂ.ಗಳು ಮಾತ್ರ. ಆದರಿಂದ ಸಾಕಷ್ಟು ಅನುಕೂಲವಾಗುತ್ತಿತ್ತು. ರಾಜ್ಯದ ಬೆಂಗಳೂರಲ್ಲದೆ, ಬೇರೆ ಬೇರೆ ಜಿಲ್ಲೆಗಳು ಮತ್ತು ತಾಲ್ಲೂಕು ಕೇಂದ್ರಗಳಲ್ಲಿಯೂ ಕೂಡ ಗಾರ್ಮೆಂಟ್ ತರಬೇತಿ ಕೇಂದ್ರ ಇರಬಹುದು. factory ಗಳನ್ನು ಸ್ಥಾಪಿಸುವ ಸಂದರ್ಭದಲ್ಲಿ ಇರಬಹುದು. ನೇಕಾರರ ನೆರವಿಗೆ ಬರುವಂತಹ ಕೆಲಸಗಳೂ ಕೂಡ ಇದರಿಂದ ಆಗುತ್ತಿತ್ತು. ಆದರೆ ಎಲ್ಲೋ ಒಂದು ಕಡೆ ಸರ್ಕಾರ ಅಂತಹ ಸಣ್ಣ ಸಣ್ಣ ಇಲಾಖೆಗಳಿಗೆ ಅನುದಾನ ಕಡಿಮೆ ಕೊಡುತ್ತಿದೆ. ಜೊತೆಗೆ ಜವಳಿ ಇಲಾಖೆ ವ್ಯಾಪ್ತಿಗೆ Spinning Mills ಬರುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ಅತಿ ಹೆಚ್ಚಾಗಿ ನಾವು ಹತ್ತಿಯನ್ನು ಬೆಳೆಯುತ್ತೇವೆ. ಈ ಹತ್ತಿಯನ್ನು ನಾವು ಬೇರೆ- ಬೇರೆ ರಾಜ್ಯಗಳಿಗೆ ಮಾರಾಟ ಮಾಡಿ, ಬೇರೆ ಕಡೆಗೆ export ಮಾಡಿ, ಆ ರಾಜ್ಯಗಳಿಂದ ಮತ್ತೆ ಬಟ್ಟೆಯ ರೂಪದಲ್ಲಿ ನಾವು ವಾಪಸ್ ತರಿಸಿಕೊಳ್ಳುತ್ತಿದ್ದೇವೆ. Spinning Mills ಇವತ್ತು ಏನಿತ್ತು. ಆ cotton ಜವಳಿ ಗಿರಾಣಿಗಳು, ಅವೆಲ್ಲವೂ ಮುಚ್ಚಿ ಹೋಗಿವೆ. ಅಂತಹ ಜವಳಿ ಗಿರಣಿಗಳು ಏನು ಮುಚ್ಚಿ ಹೋಗಿದೆಯೇ, ಅಂತಹವರಿಗೆ ಸರ್ಕಾರದವರು ನೆರವನ್ನು ಕೊಟ್ಟರೆ, ಸ್ಥಳೀಯವಾಗಿ ನಮಗೆ ಕಡಿಮೆ ದರದಲ್ಲಿ ಬಟ್ಟೆ ಸಿಗುವಂತಹ ಕೆಲಸವಾಗುತ್ತದೆ. ಇವತ್ತು ನೇಕಾರ ಯಾವ ಪರಿಸ್ಥಿತಿಗೆ ತಲುಪಿದ್ದಾರೆ ಎಂದರೆ, ಬಹಳಷ್ಟು ನಿಕೃಷ್ಟ ಜೀವನವನ್ನು ಇವತ್ತು ನೇಕಾರರು ಅನುಭವಿಸುತ್ತಿದ್ದಾರೆ. ಆ ನೇಕಾರರ ನೆರವಿಗೆ ಶಿಕ್ಷಣ ಇಲಾಖೆಯೂ ಬರುತ್ತಿಲ್ಲ. ಸರ್ಕಾರ ಶಿಕ್ಷಣ ಇಲಾಖೆಯ ವಿದ್ಯಾ ವಿಕಾಸ ಯೋಜನೆ ಅಡಿಯಲ್ಲಿ ಸ್ಕೂಲ್ ಮಕ್ಕಳಿಗೆ ಸಮವಸ್ತ್ರ ಸರಬರಾಜು ಮಾಡಲಿಕ್ಕೆ ಸರ್ಕಾರ ಆದೇಶ ಕೊಟ್ಟರೆ ನೇಕಾರರಿಗೆ ಅನುಕೂಲವಾಗುತ್ತದೆ. ಅದಕ್ಕಾಗಿ ವರ್ಷಕ್ಕೆ ಸುಮಾರು 80 ಕೋಟಿ ರೂ.ಗಳನ್ನು ಶಿಕ್ಷಣ ಇಲಾಖೆ ಭರಿಸಬೇಕಾಗುತ್ತದೆ. ಆದರೆ ಶಿಕ್ಷಣ ಇಲಾಖೆ ಸಮವಸ್ತ್ರ ಖರೀದಿಗೆ ಆದೇಶ ಕೊಡುತ್ತಿಲ್ಲ. ಶಿಕ್ಷಣ ಇಲಾಖೆಯವರು ಜವಳಿ ಇಲಾಖೆಗೆ in-time ನಲ್ಲಿ orders ಕೊಡುವುದಿಲ್ಲ. ಅದನ್ನು ಯಾವುದೋ ಬೇರೆ ರಾಜ್ಯದಿಂದ ಖರೀದಿ ಮಾಡುತ್ತಿದ್ದಾರೆ. ಇದರಿಂದ ನೇಕಾರರಿಗೆ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ ಹಾಕಿದಂತಾಗುತ್ತದೆ. ಇದರಿಂದಾಗಿ ಯಾವುದೇ ಸಮರ್ಪಕವಾದ ಕೆಲಸ ಆಗುತ್ತಿಲ್ಲ. ನಿಜಕ್ಕು ಇದರಿಂದ ಬದುಕುತ್ತಿರುವವರು ಯಾರೆಂದರೆ, ಉದ್ದಿಮೆದಾರರು ಅಷ್ಟೆ. ವ್ಯಾಪಾರಸ್ಥರು ಮತ್ತು ದೊಡ್ಡ ದೊಡ್ಡ ಉದ್ದಿಮೆದಾರರು

ಮಾತ್ರ ಬದುಕಿತ್ತಿದ್ದಾರೆ. ನಿಜಕ್ಕೂ ಬಡ ನೇಕಾರರಿಗೆ ಅನುಕೂಲವಾಗುವುದಕ್ಕಾಗಿ ಆ VVS ಯೋಜನೆ ಜಾರಿಗೆ ತರಲಾಗಿತ್ತು. ಆ ನೇಕಾತರರು ಇವತ್ತೇನು ಕರ್ನಾಟಕ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ, ಅದರ ಮುಖಾಂತರ ಅದರಲ್ಲಿ ಇರತಕ್ಕಂಥ ನೇಕಾರರೇ ನೇಯ್ಗೆ ಮಾಡಿ. ಆ ಬಟ್ಟೆಗಳನ್ನು ಸರಬರಾಜು ಮಾಡುವಂತಹ ಆದೇಶವಿದೆ. ಆದರೆ ಶಿಕ್ಷಣ ಇಲಾಖೆಯವರು ಮಾತ್ರ ಯಾವುದೋ ಒಂದು ಸಬೂಬು ಹೇಳಿ. ನಮಗೆ in-time ನಲ್ಲಿ supply ಮಾಡುವುದಿಲ್ಲ. intime ನಲ್ಲಿ ಕೊಡುವುದಿಲ್ಲ ಎನ್ನುವಂತಹ ಕಾರಣವೊಂದನ್ನು ಇಟ್ಟುಕೊಂಡು. ವಿದ್ಯಾ ವಿಕಾಸ ಯೋಜನೆಯಲ್ಲಿ ಆಡೆತಡೆಗಳನ್ನು ಮಾಡಿ, ಬೇರೆ ರೀತಿಯಲ್ಲಿ ನೇರವಾಗಿ ಅವರೇ ಟೆಂಡರ್ ಕರೆಯುವುದರ ಮೂಲಕ ಸಮವಸ್ತ್ರ ಖರೀದಿ ಮಾಡುತ್ತಿದ್ದಾರೆ. ಅವರಿಗೆ ಕೊಟ್ಟಿರುವುದು ನೇರವಾಗಿ ಟೆಂಡರ್ ಕರೆಯಲಿಕ್ಕಿಲ್ಲ. ವಿದ್ಯಾ ವಿಕಾಸ ಯೋಜನೆಯಲ್ಲಿ ಜವಳಿ ಇಲಾಖೆಯಿಂದಲೇ ಸಮವಸ್ತ್ರ ಖರೀದಿಸಲು ಶಿಕ್ಷಣ ಇಲಾಖೆಯವರು ಮತ್ತು ಸರ್ಕಾರ ಮನಸ್ಸು ಮಾಡಬೇಕು. ಇದರಿಂದ ನೇಕಾರರ ನೆರವಿಗೆ ಬರಬೇಕು. ನೇಕಾರ ಉತ್ಪಾದನೆ ಮಾಡತಕ್ಕಂಥ ಬಟ್ಟೆಗಳನ್ನು ಖರೀದಿ ಮಾಡಿ, ಮಕ್ಕಳಿಗೆ ಕೊಡಿ ಎಂದಿದ್ದರೆ, ಶಿಕ್ಷಣ ಇಲಾಖೆ ಮಾತ್ರ ನಮಗೇನೂ ಜವಾಬ್ದಾರಿಯಲ್ಲ. ನಾವು ಬೇರೆ ರಾಜ್ಯದಿಂದಲಾದರೂ ಖರೀದಿ ಮಾಡುತ್ತೇವೆ. ಅಲ್ಲದೆ ಇವತ್ತು ಬೇರೆ ರಾಜ್ಯದಿಂದ ಖರೀದಿ ಸಹಾ ಮಾಡಿದೆ. ಮೊನ್ನೆ ಮುಂಬೈನ ಮಫತ್‌ಲಾಲ್ ಕಂಪನಿಯಿಂದ ವಿದ್ಯಾ ವಿಕಾಸ ಯೋಜನೆಯಲ್ಲಿ ಶಿಕ್ಷಣ ಇಲಾಖೆಯವರು ಬಟ್ಟೆ ಖರೀದಿ ಮಾಡಿದ್ದಾರೆ. ದಯಮಾಡಿ ನೇಕಾರರ ನೆರವಿಗೆ ಸರ್ಕಾರ ಬರಬೇಕಾಗುತ್ತದೆ. ಇನ್ನಷ್ಟು ಹೆಚ್ಚಿನ ಅನುದಾನವನ್ನು ಕೂಡ ಅದರಲ್ಲಿ ನೀಡಬೇಕಾಗುತ್ತದೆ. ಜೊತೆಗೆ ಜವಳಿ ಇಲಾಖೆಯ ವ್ಯಾಪ್ತಿಯಲ್ಲಿ ಬೆಂಗಳೂರಿನಲ್ಲಿ ಕಾವೇರಿ ಹ್ಯಾಂಡ್‌ಲೂಮ್ಸ್ ಇದೆ. ನೇಕಾರರು ಉತ್ಪಾದಿಸುವಂತಹ ಮಾಡತಕ್ಕಂಥ ಬಟ್ಟೆಗಳನ್ನು ಅವರೇ ಮಾರಾಟ ಮಾಡಿಕೊಳ್ಳುವುದಕ್ಕಾಗಿ ಆ Show room ತೆರೆಯಲಾಗಿದೆ. ಸುಮಾರು 50 ಕೋಟಿ ರೂ.ಗಳಷ್ಟು property ಆ ಕಾವೇರಿ ಹ್ಯಾಂಡ್‌ಲೂಮ್ಸ್‌ನಲ್ಲಿದೆ. ಸುಮಾರು ಸೊಸೈಟಿಗಳೆಲ್ಲಾ ಸೇರಿ, ಆ ಕಾವೇರಿ ಹ್ಯಾಂಡ್‌ಲೂಮ್ಸ್‌ನ ಅಧೀನ ಬರುವಂತಹ ಸಂದರ್ಭದಲ್ಲಿ. ಸರ್ಕಾರ ಇವತ್ತಿನವರೆಗೂ ಅವರ ನೆರವಿಗೆ ಹೋಗಿಲ್ಲ. ಅವರ ಸಹಾಯಕ್ಕೆ ಹೋಗಿಲ್ಲ. ಅದರಲ್ಲಿ ಇರತಕ್ಕಂಥ, ಕೆಲಸ ಮಾಡತಕ್ಕಂಥ ಸುಮಾರು 60–70 ಜನ ನೌಕರರಿಗೆ ಸುಮಾರು 40–50 ತಿಂಗಳಿನಿಂದ ಸಂಬಳ ಕೊಟ್ಟಿಲ್ಲ. ನಿಜಕ್ಕೂ ಅವರಿಗೆ ಆತ್ಮಹತ್ಯೆ ದಾರಿ ಒಂದೇ

ಇದೆ. ಹಾಗಾಗಿ, ಅಂತಹವರ ನೆರವಿಗೆ ಕೂಡ ಸರ್ಕಾರ ಅಂತಹವರ ನೆರವಿಗೆ ಕೂಡ ಸರ್ಕಾರ ಹೋಗಬೇಕಾಗುತ್ತದೆ. ಕೇಂದ್ರ ಸರ್ಕಾರದ ಹಲವಾರು ಯೋಜನೆಗಳನ್ನು ಅದರಲ್ಲಿ ಬಳಕೆ ಮಾಡಿಕೊಳ್ಳಬೇಕು. ನಾವು ಸಮರ್ಪಕವಾಗಿ ಬಳಕೆ ಮಾಡಿಕೊಂಡರೆ, ನಿಜಕ್ಕೂ ಜವಳಿ ಇಲಾಖೆ ಅತ್ಯುತ್ತಮವಾಗಿ ನಡೆಯುತ್ತದೆ. ಇವತ್ತು ನಕ್ಸಲಿಸಂ ಇಡೀ ರಾಜ್ಯದಲ್ಲಿ ಬೇರೆ ಬೇರೆ ಕಡೆಗಳಲ್ಲಿ ಇದೆ. ಆದರೆ ಆದು ನಮ್ಮಲ್ಲಿ ಕಡಿಮೆ Western ghats ಏನಿದೆ. ಆಲ್ಲಿಯ ಕಾಡು ಪ್ರದೇಶಗಳೇನಿವೆ. ಅಂತಹ ಪ್ರದೇಶಗಳಲ್ಲಿ ನಕ್ಸಲಿಸಂ ಚಟುವಟಿಕೆ ನಡೆಯುತ್ತಿದೆ. ಅಂತಹ remote area ಗಳಲ್ಲಿ SCP/TSP ಯೋಜನೆಯಲ್ಲಿ ಉದ್ಯೋಗ ಕೊಡಬಹುದು. NREGS ಗಿಂತ ಜಾಸ್ತಿ ಉದ್ಯೋಗವನ್ನು ಈ ನೇಕಾರಿಕೆ ಉದ್ಯಮದಲ್ಲಿ ಮಾತ್ರ ಜವಳಿಗೆ ಕೊಡಬಹುದಾಗಿದೆ. SCP/TSP ಯೋಜನೆಯಲ್ಲಿ ರಿಮೋಟ್ ಏರಿಯಾದಲ್ಲಿರುವ ಗ್ರಾಮದ ಜನರಿಗೆ ತರಬೇತಿಯನ್ನು ಕೊಟ್ಟು ಮಗ್ಗಗಳನ್ನು ಕೊಟ್ಟು ಉತ್ತಮವಾದ ಸೌಲಭ್ಯವನ್ನು ಕೊಟ್ಟು ನೇಕಾರ ಕೆಲಸ ಮಾಡುವವರಿಗೆ ಅಲ್ಲೇ ಉದ್ಯೋಗವನ್ನು ಕೊಟ್ಟು. ಅವರು ನೇಯ್ಗೆ ಮಾಡಿದ ಬಟ್ಟೆಗಳನ್ನು ಸರ್ಕಾರ ಖರೀದಿ ಮಾಡಿ ಸರ್ಕಾರಕ್ಕೆ ಸಪ್ಲೈ ಮಾಡಿದರೆ ನಿಜಕ್ಕೂ ಅವರಿಗೆ ಉದ್ಯೋಗವನ್ನು ಅಲ್ಲೇ ಕೊಟ್ಟಂತಾಗುತ್ತದೆ. ಕಾಡಿನ ಮಧ್ಯದಲ್ಲಿ ವಾಸ ಮಾಡುವ ಜನರಿಗೆ, ಅವರನ್ನು ಕಾಡಿನಿಂದ ಹೊರದಬ್ಬದ ಹಾಗೆ, ಅದೇ ಜಾಗದಲ್ಲಿ ಉದ್ಯೋಗ ಕೊಟ್ಟು ಅವರಿಗೆ ಅತ್ಯುತ್ತಮವಾಗಿರುವ ಕೆಲಸವನ್ನು ಈ ಜವಳಿ ಇಲಾಖೆಯಿಂದ ಮಾಡಬಹುದಾಗಿದೆ. ಇವತ್ತು ಈ ಉದ್ಯಮ ಬಹಳಷ್ಟು ಚೆನ್ನಾಗಿರುವ ಸಂದರ್ಭದಲ್ಲಿ ಅವರ ನೆರವಿಗೂ ಕೂಡ ಹೆಚ್ಚಿನ ಒತ್ತನ್ನು ನೀಡಬೇಕಾಗುತ್ತದೆ. ಹಾಗಾಗಿ ಜವಳಿ ಇಲಾಖೆಯಲ್ಲೂ ಕೂಡ ನೇಕಾರರ ನೆರವಿಗೆ ಇನ್ನಷ್ಟು ನೆರವಿನ ಹಸ್ತ ಚಾಚಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇವೆ.

ಜೊತೆಗೆ, ಯುವಜನ ಸೇವಾ ಕ್ರೀಡಾ ಇಲಾಖೆ ರಾಜ್ಯದಲ್ಲಿ ಏನಿದೆ, ಅದರಲ್ಲಿ ಇವತ್ತು ಖಾಲಿ ಹುದ್ದೆಗಳ ಸಂಖ್ಯೆ ಬಹಳಷ್ಟು ಇದೆ. ಸುಮಾರು 176 ತಾಲ್ಲುಕುಗಳಲ್ಲಿ ತಾಲ್ಲೂಕು ಯುವಜನ ಸೇವಾಧಿಕಾರಿಗಳು ಯಾರಿಲ್ಲ. ಎಲ್ಲರೂ ಎರವಲು ಸೇವೆಯಿಂದ ಬಂದಂಥವರು, ಹಾಗಾಗಿ ಆ ಎಲ್ಲಾ ಹುದ್ದೆಗಳನ್ನು ತುಂಬುವಂಥ ಕೆಲಸವಾಗಬೇಕಾಗಿದೆ. 15–20 ವರ್ಷಗಳಿಂದ ಕೆಲಸ ಮಾಡದಂಥ ಸುಮಾರು 40–45 ಜನ ಕೋಚರ್ಸ್ ಮಾತ್ರ ಎರವಲು ಸೇವೆ ಮೇಲೆ ಕೆಲಸ ಮಾಡುತ್ತಿದ್ದಾರೆ. ಅವರ ಸೇವೆಯನ್ನು ರೆಗ್ಯುಲರ್

ಮಾಡಿಕೊಡುವುದಕ್ಕೆ ಸರ್ಕಾರ ನೆರವಿಗೆ ಬರಬೇಕು. ಇವತ್ತು ಕ್ರೀಡಾ ಇಲಾಖೆಯಲ್ಲಿ ಪ್ರತಿ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಇವತ್ತು ಬಹಳಷ್ಟು ಖಾಲಿ ಜಾಗವಿದೆ. ಅಂಥ ಖಾಲಿ ಜಾಗದಲ್ಲಿ ಕ್ರೀಡಾಂಗಣಗಳನ್ನು ನಿರ್ಮಾಣ ಮಾಡುವುದಕ್ಕೆ ಇದುವರೆವಿಗೂ ಸರ್ಕಾರ ಹೆಚ್ಚಿನ ಅನುದಾನವನ್ನು ಇಲಾಖೆಗೆ ಕೊಟ್ಟಿಲ್ಲ. ನಾನು ಸಚಿವರಾಗಿದ್ದಂಥ ಸಂದರ್ಭದಲ್ಲೂ ಕೂಡ 2008–09ರಲ್ಲಿ ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಸುಮಾರು 22 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಘೋಷಣೆ ಮಾಡಿದರು, ಆದರೆ ಬಿಡುಗಡೆ ಮಾಡಿದ್ದು ಕೇವಲ 4 ಕೋಟಿ ಮಾತ್ರ. ಆ 4 ಕೋಟಿಯನ್ನು ಕೂಡ split over works ಎಂದು ಉಪಯೋಗಿಸಿದಾಗ ಇವತ್ತು ಯಾವುದೇ ಕ್ರೀಡಾಂಗಣ ಕೂಡ ಸಮರ್ಪಕವಾಗಿ ನಮ್ಮ ರಾಜ್ಯ ಸರ್ಕಾರದಿಂದ ಒಂದು ಪೂರ್ಣ ಪ್ರಮಾಣದಲ್ಲಿ ಕಟ್ಟಿಲ್ಲ. ಹಾಗಾಗಿ ಆ ಸಮಯದಲ್ಲಿ ನೆರವಿಗೆ ಬಂದದ್ದು, ಕೇಂದ್ರ ಸರ್ಕಾರ. ಇವತ್ತು ಕೇಂದ್ರ ಸರ್ಕಾರದಿಂದ ಹಣವೇನು ಬರುತ್ತಿದೆ. ಇಡೀ ಕ್ರೀಡಾ ಇಲಾಖೆಯಲ್ಲಿ ಕೆಲಸಗಳಾದ, ಸಮರ್ಪಕ ಕ್ರೀಡಾಂಗಣ ನಿರ್ಮಾಣ, ಹಾಸ್ಟೆಲ್‌ಗಳ ನಿರ್ಮಾಣ ಸೇರಿದಂತೆ ಯಾವುದೇ ಕೆಲಸಗಳ ಆಗಿದೆ ಎಂದರೆ, ಅದು 12ನೇ ಹಣಕಾಸಿನ ಕೇಂದ್ರ ಸರ್ಕಾರದ ಅನುದಾನದಿಂದ ಮಾತ್ರ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ನಮ್ಮ ಸರ್ಕಾರ ಸುಮಾರು 8–9 ವರ್ಷಗಳ ಹಿಂದೆ ಶಂಕುಸ್ಥಾಪನೆ ಮಾಡಿದಂಥ ಕ್ರೀಡಾಂಗಣಗಳನ್ನು ಇದುವರೆವಿಗೂ ಉದ್ಘಾಟನೆ ಮಾಡುವುದಕ್ಕಾಗಲಿಲ್ಲ. ಶಂಕುಸ್ಥಾಪನೆ ಮಾಡುವುದು. ಉದ್ಘಾಟನೆ ದಿನಾಂಕ ನೋಡಿದರೆ ಹತ್ತೊತ್ತು ವರ್ಷ ಗ್ಯಾಪ್, ಅಲ್ಲಿ ಸರ್ಕಾರ ಏನು ಮಾಡುತ್ತದೆಂದರೆ, ಒಂದು ಕೋಟಿ ಹಣ ಕೊಟ್ಟು, ಒಂದು ಕೋಟಿ ಎಂದು ಪ್ರಕಟಣೆ ಮಾಡಿ foundation ಹಾಕಿ ಕೊಟ್ಟರೆ. ಅಲ್ಲಿಗೆ ಕೇವಲ 10 ಲಕ್ಷ ಕೊಟ್ಟು ಮುಂದಿನ ವರ್ಷ spill over works ಎಂದು ಇಟ್ಟುಕೊಳ್ಳುವುದು. ಮತ್ತೆ ಮುಂದಿನ ವರ್ಷ 10 ಲಕ್ಷ ಕೊಟ್ಟರೆ, ಸ್ವಲ್ಪ ಫೌಂಡೇಶನ್, ಸ್ವಲ್ಪ ಮೇಲೆ ಹೋಗುತ್ತದೆ. ಈ ರೀತಿ ಮಾಡುವುದರಿಂದ ಒಂದು ಪ್ರಾಜೆಕ್ಟ್ ಮುಗಿಯುವುದಕ್ಕೆ ನಿಜಕ್ಕೂ 9–10 ವರ್ಷ ತೆಗೆದುಕೊಳ್ಳುತ್ತದೆ. ಹಾಗಾಗಿ ಸರ್ಕಾರ ಯಾವುದೇ ಒಂದು structure work ಇರಬಹುದು. ಒಂದು ಸಾರಿ ಫುಲ್ ಟೈಂ ಹಣ ಕೊಟ್ಟರೆ, ಆ ಪ್ರಾಜೆಕ್ಟ್ ಆ ವರ್ಷವೇ ಮುಗಿಯುತತದೆ ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮ ಬೆಂಗಳೂರಿನಲ್ಲೂ ಕೂಡ ಸಾಕಷ್ಟು ಖಾಲಿ ಜಾಗಗಳಿವೆ. ಅವನ್ನು ಸಮರ್ಪಕವಾಗಿ ಬಳಕೆ ಮಾಡಿದರೆ ಅಲ್ಲಿ ಕ್ರೀಡಾಂಗಣಗಳನ್ನು ನಿರ್ಮಾಣ ಮಾಡುವುದರ ಜೊತೆಗೆ ವಾಣಿಜ್ಯ ಸಂಕೀರ್ಣ

ಮಾಡಿದರೆ, ಆದರಿಂದ ಬರುವ ಆದಾಯವನ್ನು ಸರ್ಕಾರವನ್ನು ಹಣ ಕೇಳದೆ ಇಲಾಖೆಗೆ ಸ್ವಂತ ಆದಾಯದ ಮೂಲವಾಗುತ್ತದೆ. ಆ ಬಗ್ಗೆಯ ಸರ್ಕಾರ ಗಮನಹರಿಸಬೇಕು.

ಇನ್ನು ಇವತ್ತು ರಾಜ್ಯ ಎಲ್ಲಾ ಪುರಸಭೆ ಮತ್ತು ನಗರಸಭೆಗಳಲ್ಲಿ ಖಾಲಿ ಜಾಗಗಳು ಬಹಳಷ್ಟು ಇವೆ. ಎಲ್ಲಾ ಎನ್‌ಕ್ರೋಚ್ ಆಗುತ್ತಿದೆ. ಹೆಚ್ಚಿನದಾಗಿ ಎನ್‌ಕ್ರೋಚ್ ಆಗುತ್ತಿರುವುದು, ನಾನು ಉದಾಹರಣೆ ಹೇಳಬೇಕೆಂದರೆ, ನಮ್ಮ ಹೊಸದುರ್ಗಾ ಪುರಸಭೆಯನ್ನೇ ತೆಗೆದುಕೊಂಡರೆ, ಸುಮಾರು 58 ನಿವೇಶನಗಳು ಸಿ.ಎ. ಸೈಟುಗಳಾಗಿವೆ. ಸಿಎ ಮತ್ತು ಪಾರ್ಕ್‌ಗಳಿಗೆ ಇಟ್ಟಿರುವ ಸೈಟುಗಳನ್ನು ಅಲ್ಲಿರುವ ಹಾಲಿ ಮತ್ತು ಮಾಜಿ ಸದಸ್ಯರು ಮತ್ತು ಅಧ್ಯಕ್ಷರುಗಳು ಸೇರಿಕೊಂಡು ಅವರ ಹೆಸರಿಗೆ ರಿಜಿಸ್ಟರ್ ಮಾಡಿಕೊಂಡಿರುತ್ತಾರೆ. ಆ ಅಂಕಿ–ಅಂಶಗಳನ್ನು ತೆಗೆದುಕೊಂಡರೆ ಇಡೀ ರಾಜ್ಯಕ್ಕಿಂತ ನಮ್ಮ ತಾಲ್ಲೂಕಿನಲ್ಲೇ ಹೆಚ್ಚಿನದಾಗಿ ಈ ರೀತಿಯಾಗಿ ಆಗಿದೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಹಾಗಾಗಿ ಅಂಥ ಜಾಗಗಳನ್ನು ಸರ್ಕಾರ ವಶಪಡಿಸಿಕೊಂಡು ಅಂಥವನ್ನು ಹರಾಜು ಮಾಡುವುದರ ಮೂಲಕ ಸರ್ಕಾರಕ್ಕೆ ಹೆಚ್ಚಿನ ಲಾಭ ಬರುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ತಾಲ್ಲೂಕಿಗೆ ಕುಡಿಯುವ ನೀರು ಮತ್ತು ಇತರೆ ಸೌಲಭ್ಯಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಜೊತೆಗೆ ಇವತ್ತು ಮ್ಯಾಂಗನಿಸ್ ಮತ್ತು ಕಬ್ಬಿಣ ರಫ್ತು ಮಾಡುವುದನ್ನು ನಿಷೇಧ ಮಾಡಲಾಗಿದೆ. ಇದನ್ನು ಮಾಡಿರುವುದರಿಂದ ಇಡೀ ರಾಜ್ಯಕ್ಕಲ್ಲ. ಇಡೀ ದೇಶಕ್ಕೆ ಕಷ್ಟ ಬಂದಿದೆ. ಏಕೆಂದರೆ, ರಫ್ತು ನಿಷೇಧ ಮಾಡಿರುವುದರಿಂದ Export-Import Policy ಏನಿತ್ತು. foriegn exchange ಕೂಡ ನಮ್ಮಲ್ಲಿ ಕಡಿಮೆಯಾಗಿ ಡಾಲರ್ ರೇಟ್ ಕೂಡ ಜಾಸ್ತಿಯಾಗಿದೆ. ಈ ರಫ್ತು ನಿಷೇಧದಿಂದ ಇಡೀ ದೇಶದ ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡಿದೆ. ಹಾಗಾಗಿ ಇವತ್ತು ಮಧ್ಯಮವರ್ಗದ ಜನ ಸ್ಟೀಲ್ ಖರೀದಿ ಮಾಡುವಾಗ ಒಳ್ಳೆಯ ಕಬ್ಬಿಣಕ್ಕೆ ಇವತ್ತು ರೂ. 47,000 ಒಂದು ಟನ್ನಿಗೆ ಇದೆ. ಹಿಂದೆ ರಫ್ತು ಇದ್ದಂಥ ಸಂದರ್ಭದಲ್ಲಿ ಸುಮಾರು ರೂ. 30,000 ಅಮದು ಸ್ಟೀಲ್ ಸಿಗುತ್ತಿತ್ತು. ಇವತ್ತು ಜಿಂದಾಲ್ ಕಂಪನಿಯವರಿಗೆ ಒಂದು ಟನ್ ಕಬ್ಬಿಣ ಮೈನ್ಸ್ ಜಾಗ ಕೂಡ ಇಲ್ಲಿ ಇರಲಿಲ್ಲ. ಯಾವುದೊ ಕಾರ್ಪೊರೇಟ್ ಸಂಸ್ಥೆಗಳಿಗೆ ಅನುಕೂಲ ಮಾಡುವ ಒಂದೇ ಒಂದು ಉದ್ದೇಶದಿಂದ ರಫ್ತು ನಿಷೇಧ ಮಾಡಿ ಇಡೀ ರಾಜ್ಯದಲ್ಲಿ ಸಣ್ಣ ಸಣ್ಣ ಫ್ಯಾಕ್ಟರಿ ಇಟ್ಟುಕೊಂಡಿರುವ ಮಧ್ಯಮ ವರ್ಗದ ಜನರಿಗೆ ತೊಂದರೆಯಾಗಿದೆ. ಸಾಕಷ್ಟು ಕೂಲಿ ಕಾರ್ಮಿಕರಿಗೆ, ಟ್ರಾನ್ಸ್‌ಪೋರ್ಟ್‌ಗಳಿಗೆ ತೊಂದರೆಯಾಗಿದೆ. ರಫ್ತು ನಿಷೇಧ ಮಾಡಿದ್ದರಿಂದ ಯಾರೋ ಕೆಲವರಿಗೆ ಅನುಕೂಲವಾಗಿರಬಹುದು. ಉದ್ಧಾರವಾಗಿರಬಹುದು.

ಆದರೆ ಸಣ್ಣ ಸಣ್ಣ ಪ್ರಮಾಣದ ಮಧ್ಯವವರ್ಗದ ಕೂಲಿ ಕಾರ್ಮಿಕರು ಆದರಿಂದ ಬದುಕುತ್ತಿದ್ದರು. ನಿಜಕ್ಕೂ ರಫ್ತು ನಿಷೇಧ ಮಾಡಿದ್ದರಿಂದ ರೈಲ್ವೆಗೂ ಕೂಡ ತೊಂದರೆಯಾಗಿದೆ. ಯಾರೋ ಒಂದು ಜೆಸಿಬಿ ಇಟಾಚಿ ಇಂಪೋರ್ಟ್ ಹೊಸ ಮೆಷನರಿ ತೆಗೆದುಕೊಳ್ಳಬೇಕಾದರೆ Export-Import Policy license ಕೇಳುತ್ತಾರೆ. ಇಲ್ಲಿಂದ ನಾವು ರಫ್ತು ಮಾಡಿದರೆ ಅಲ್ಲಿಂದ ಅಥವಾ ಬೇರೆ ಬೇರೆ ವಸ್ತುಗಳನ್ನು ಆಮದು ಮಾಡಿಕೊಳ್ಳುವುದಕ್ಕೆ ಸಾಧ್ಯ. ಹಾಗಾಗಿ ಅದನ್ನು ಕೂಡ ಸರ್ಕಾರ ಪುನರ್ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನವರಿಕೆ ಮಾಡುತ್ತೇನೆ. ನಿನ್ನೆ ಸನ್ಮಾನ್ಯ ಮುಖ್ಯಮಂತ್ರಿಗಳು ರೈತರ ಸಾಲ ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿದರು. ಅದು ಸ್ವಾಗತಾರ್ಹವೆಂದು ಹೇಳುತ್ತಾ ಇನ್ನಷ್ಟು ಕೆಲಸಗಳು ನಮ್ಮ ಕ್ಷೇತ್ರಕ್ಕೆ ಬರಲೆಂದು ಹೇಳಿ ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನು ಮುಗಿಸುತ್ತೇನೆ.

**ಡಾ॥ ಎ.ಬಿ. ಮಲಕರೆಡ್ಡಿ (ಯಾದಗಿರಿ) :** – ಮಾನ್ಯ ಅಧ್ಯಕ್ಷರೆ, ಒಟ್ಟು 25 ಬೇಡಿಕೆಗಳನ್ನು ಸರ್ಕಾರ ಮಂಡಿಸಿದೆ ನಾನು ಮಾತನಾಡಬೇಕೆಂದಿರುವ ಇಲಾಖೆಯ ಸಚಿವರು ಈಗ ಕಾಣುತ್ತಿಲ್ಲ. ದಯಮಾಡಿ ಅವರನ್ನು ಕರೆಸಿದರೆ ಉತ್ತಮ. ಆರೋಗ್ಯ ಇಲಾಖೆಯ ಬಗ್ಗೆ ಮಾತನಾಡಿದರೆ ಚೆನ್ನಾಗಿರುತ್ತದೆಂದು ತಾವು ಕೂಡ ಬಯಸುತ್ತೀರಿ. ಅವರು ಬರುವವರೆಗೆ PWD ಇಲಾಖೆಯ ಬಗ್ಗೆ ಮಾತನಾಡುತ್ತೇನೆ. ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಇಲಾಖೆಯಲ್ಲಿ ಕೆಲಸ ಮಾಡಲಾಗುತ್ತಿದೆ. ಆದರೆ ಎಲ್ಲೆಲ್ಲಿ ಅವಶ್ಯಕತೆ ಇದೆ. ಯಾವ್ಯಾವ ಜಿಲ್ಲೆಗಳಲ್ಲಿ ಅವಶ್ಯಕತೆ ಇದೆ ಅದನ್ನು ಸ್ವಲ್ಪ ಸ್ಟಡಿ ಮಾಡಿ ಆ ದಿಸೆಯಲ್ಲಿ ಕೆಲಸ ಮಾಡಿದರೆ ಒಳ್ಳೆಯದು. ಬದಲಾಗಿ ಪಕ್ಷದ ಶಾಸಕರನ್ನು ಪರಿಗಣಿಸಿ, ಅಥವಾ ಪ್ರಭಾವನ್ನು ಪರಿಗಣಿಸಿ ಕೆಲಸ ಮಾಡಿದರೆ ಅದು ಸಮಗ್ರ ಕರ್ನಾಟಕ ಅಭಿವೃದ್ಧಿಗೆ ಭಾದಕವಾಗುತ್ತದೆ. Development of roads ಮೂಲಭೂತ ಸೌಕರ್ಯದಲ್ಲಿ ಒಂದು ಆರ್ಥಿಕ ಭಾಗವಾಗಿದೆ. ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಯಾಗಿದ್ದಾಗ ಯಾದಗಿರಿ ಜಿಲ್ಲೆಗೆ ಉದಾರ ಮನಸ್ಸಿನಿಂದ ಅನುದಾನವನ್ನು ಕೊಟ್ಟರು. ಅದನ್ನು ವಿಶೇಷವಾಗಿ ಗಮನಕೊಟ್ಟು ಉತ್ತಮ ಜಿಲ್ಲೆಯನ್ನಾಗಿ ಅಭಿವೃದ್ಧಿ ಮಾಡಬೇಕೆನ್ನುವ ಕನಸ್ಸನ್ನು ಇಟ್ಟುಕೊಂಡು 300 ಕೋಟಿ ರೂಪಾಯಿಗಳ special package ಕೊಟ್ಟರು. ರೆಗ್ಯುಲರ್ ಬಜೆಟ್‌ನಲ್ಲಿ 50 ಕೋಟಿ ರೂ. ಬಿಡುಗಡೆ ಮಾಡಿದ್ದರು ಖರ್ಚಾಯಿತು. Special package announce ಮಾಡಿದ್ದೇವೆ ಎಂದು ಗುಲ್ಬರ್ಗ

ಕ್ಯಾಬಿನೆಟ್‌ನಲ್ಲಿ ಘೋಷಣೆ ಮಾಡಿದ್ದರು. ಅವತ್ತೇ ಅಲ್ಲಿ ಕ್ಯಾಬಿನೆಟ್ ಮೀಟಿಂಗ್ ಮುಗಿಯಿತು ಇಲ್ಲಿ ಬಂಡಾಯ ಪ್ರಾರಂಭವಾಯಿತು. ಅವರಿಗೆ ಧನ್ಯವಾದಗಳನ್ನು ಹೇಳಬೇಕೆಂದು ಇದ್ದೆ. ಅವರು ಇಲ್ಲರೀ ಇಲ್ಲಿ ಭಿನ್ನಮತ ಉಲ್ಭಣಾವಸ್ತೆಗೆ ಬಂದಿದೆ ಎಲ್ಲಾ ಮಂತ್ರಿಗಳು ಹೊರಟು ಹೋದರು ಎಂದು ಹೇಳಿದರು. ಆ ಮೇಲೆ ಬಂದ ಮುಖ್ಯ ಮಂತ್ರಿಗಳು 300 ಕೋಟಿ ರೂಪಾಯಿ ಪ್ಯಾಕೇಜ್ ಮರೆತೇ ಬಿಟ್ಟರು. ಎಲ್ಲರೂ ಹೇಳುತ್ತಾರೆ. ಮಾನ್ಯ ಸದಾನಂದಗೌಡರು ಉತ್ತಮ ಆಡಳಿತ ಮಾಡಿದರು ಎಂದು. ಏನು ಉತ್ತಮ ಆಡಳಿತ ಮಾಡಿದರೋ ನನಗಂತೂ ಅರ್ಥವಾಗುತ್ತಿಲ್ಲ. ಬಹಳ ಸಜ್ಜನರು, ಯಾವಾಗಲೂ ಹಸನ್ಮುಖದಿಂದ ಇರುತ್ತಿದ್ದರು. ಅವರು ಏನು ಅಭಿವೃದ್ಧಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನಮ್ಮಲ್ಲಿ ಇತ್ತೀಚೆಗೆ ಏನಾಗಿದೆ ಎಂದರೆ, ವಾತಾವರಣ ಎಷ್ಟು ಕೆಟ್ಟಿದೆ ಯಾರಾದರೂ ಸ್ವಲ್ಪ ಒಳ್ಳೆಯವರು ಇದ್ದರೆ ಸಾಕು ಅವರನ್ನು ಎಲ್ಲಿಗೋ ಮುಗಿಲಿಗೇರಿಸಿಬಿಡುತ್ತಾರೆ. ಒಳ್ಳೆಯತನ ಇದೆ. Basically all are supposed to be good unless proud otherwise. Thomas Aquinas ಹೇಳಿದ್ದಾನೆ. 'Man is essentially moral and rational' ಪ್ರಪಂಚದಲ್ಲಿ ಹುಟ್ಟಿದ ಮೇಲೆ ನಾವು ಡೀವಿಯೇಟ್ ಆಗುವುದಕ್ಕೆ ಪ್ರಾರಂಭ ಮಾಡುತ್ತೇವೆ. ಪ್ರತಿಯೊಬ್ಬರೂ ಒಳ್ಳೆಯವರೇ, ಆದರೆ ಒಳ್ಳೆಯ ಕೆಲಸ ಮಾಡಿದ್ದು ಏನೆಂದು ನನಗಂತೂ ಅರ್ಥವಾಗುತ್ತಿಲ್ಲ. ಕಳೆದ ಒಂದು ವರ್ಷ ಕರ್ನಾಟಕದಲ್ಲಿ ಸರ್ಕಾರವೇ ಇಲ್ಲ. ಸರ್ಕಾರದ ಚಟುವಟಿಕೆಗಳೇ ಇಲ್ಲ. ಯಾದಗಿರಿ ಜಿಲ್ಲೆ ಆಗಿ ಡಿಸೆಂಬರ್ ತಿಂಗಳಿಗೆ ಮೂರು ವರ್ಷವಾಯಿತು. Special package 300 ಕೋಟಿ ನಿಮ್ಮ ಸಚಿವ ಸಂಪುಟದಲ್ಲಿ ಅನೌನ್ಸ್ ಮಾಡಿದರು. ಮೂರು ಪೈಸೆ ಖರ್ಚು ಮಾಡಿಲ್ಲ. ಎಲ್ಲಾ ಕಡೆ ಜಿಲ್ಲೆ ಎಂಬ ಬೋರ್ಡ್, ಜಿಲ್ಲಾ ಕಚೇರಿ, ಜಿಲ್ಲಾ ಆಸ್ಪತ್ರೆ, ಜಿಲ್ಲಾ ಆಸ್ಪತ್ರೆ ಬಗ್ಗೆ ನಾನು ಒಂದು ಪ್ರಶ್ನೆ ಕೇಳಿದ್ದೆ ಅದಕ್ಕೆ ಸರಿಯಾದ ಉತ್ತರ ಬರಲಿಲ್ಲ. ಮಾನ್ಯ ಸಚಿವರು ಹೊಸದಾಗಿ ಬಂದಿದ್ದಾರೆ ಏನೋ ಅವಡು-ಸವಡು ಉತ್ತರ ಕೊಟ್ಟರು. ಜಾಗದ ಕೊರತೆ ಇದೆ ಎಂದು ಹೇಳಿದ್ದಾರೆ. ಜಾಗದ ಕೊರತೆ ಇಲ್ಲ. foundation ಕೂಡ ಹಾಕಿಲ್ಲ. ನಿಮ್ಮ BPL PWD ಇಲಾಖೆಯಿಂದ ಅಭಿವೃದ್ಧಿ ಹೊಂದಿರತಕ್ಕಂತಹ ಜಿಲ್ಲೆ. ಅಲ್ಲಿ ಸಕ್ಕರೆ ಕಾರ್ಖಾನೆ ಬಂದಿದೆ. ನನ್ನ ಮತಕ್ಷೇತ್ರದಲ್ಲಿ ಭೀಮ ನದಿ ಹಾಗೂ ಕೃಷ್ಣ ನದಿ ಎರಡು ನದಿಗಳು ಬರುತ್ತವೆ. ಸಾಕಷ್ಟು ಉಸುಕು ಸಂಗ್ರಹವಾಗುತ್ತದೆ. ಲಾರಿಗಳ ಕಾಟ ಎಷ್ಟು ವಿಪರೀತ ಇದೆ Global Standard ನಲ್ಲಿ ನೀವು road ಮಾಡಿದರೂ ಕೂಡ ಆ ರೋಡ್ ಮುಚ್ಚಿಸುವುದಕ್ಕೆ ಸಾಧ್ಯವಿಲ್ಲ. ಸಾಮಾನ್ಯ ಒಂದು

ತಾಲ್ಲೂಕಿನಲ್ಲಿ ಇಂತಹ ಪ್ರಮಾಣದ ಜನ, 200, 300 ಲಾರಿಗಳು ಓಡಾಡುತ್ತವೆ, ಅದು ಸಿಮೆಂಟ್ ಲಾರಿಗಳು ಓಡಾಡುತ್ತವೆ. ಒಂದು ಫೂಟ್, ಎರಡು ಫೂಟ್ ಹಳ್ಳಗಳಾಗಿವೆ. ನೀವು ಐದು ಸಾರಿ MLA ಆಗಿದ್ದೀರಿ. ಹಿಂದೆ ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದ್ದಿರಿ ಈ ಸಾರಿ ಏಕೆ ನಿಮಗೆ ಮಾಡುವುದಕ್ಕಾಗುತ್ತಿಲ್ಲವೆಂದು ಜನ ನಮಗೆ ಕೇಳುತ್ತಿದ್ದಾರೆ. ನಿಮ್ಮಂತಹ ಹಿರಿಯ ಶಾಸಕರಿಂದ ರೋಡ್ ರಿಪೇರಿ ಮಾಡಿಸುವುದಕ್ಕಾಗುತ್ತಿಲ್ಲ. ಉತ್ತಮ ದರ್ಜೆಯ ರೋಡ್‌ಗಳನ್ನು ಮಾಡುವುದಕ್ಕಾಗುತ್ತಿಲ್ಲ ಆ ಭಾಗದ ಶಾಸಕರು, ಅವರೇ ಸರ್ವಸ್ವ ಅಲ್ಲಿಯವರೆಗೆ, ಸರ್ಕಾರದಲ್ಲಿ ಗಲಾಟೆ ನಡೆದಿದೆ. ಗದ್ದಲ ನಡೆದಿದೆ. ಲಕ್ಷ್ಯ ಕೊಡುವುದಕ್ಕಾಗುತ್ತಿಲ್ಲ. ಅವರಷ್ಟಕ್ಕೆ ಅವರೇ ಸಂತೆ ಮಾಡಿಕೊಂಡಿದ್ದಾರೆ, ಅವರೇ ಜಾಣರು. ಬುದ್ಧಿಪೂರ್ವಕವಾಗಿ ಗಂಭೀರ ರೀತಿಯಿಂದ ಕೆಲಸ ಮಾಡಿದ್ದು ನಾನಂತೂ ಕಾಣೆ. ಅಧಿಕಾರಿಗಳು ನೇರವಾಗಿ ವಿಧಾನಸೌಧದ ಕಂಟ್ರೋಲ್‌ನಲ್ಲಿ ಇದ್ದಾರೆಯೇ ಹೊರತು ಸ್ಥಳೀಯವಾಗಿ ಶಾಸಕರಿಗೆ ಜನಪ್ರತಿನಿಧಿಗಳಿಗೆ ಮಾನ್ಯತೆ ಮಾಡತಕ್ಕಂತಹ ಸಹಾನುಭೂತಿಯಿಂದ ಕೇಳಿ ಅದನ್ನು ಅಟೆಂಡ್ ಮಾಡತಕ್ಕಂತಹ ಪ್ರವೃತ್ತಿ ಯಾವ ಅಧಿಕಾರಿಗಳಲ್ಲಿ ಕಂಡಿಲ್ಲ. ಇದು ಯಾವ ಆಡಳಿತ ಎಂದು ನನಗಂತೂ ಅರ್ಥವಾಗುತ್ತಿಲ್ಲ. ಒಂದೊಂದು ಫೀಟ್ ತಗ್ಗು ಗುಂಡಿಗಳಿವೆ. ಅದರ ಮೇಲೆ ಲಾರಿಗಳು ಹೋಗುತ್ತದೆ. ಯಡಗೇರಿ, ಅದು ಒಂದು ತಾಲ್ಲೂಕು ಹೆಡ್ ಕ್ವಾರ್ಟರ್, ಅಲ್ಲಿ ಸ್ಪೆಷಲ್ ತಹಶೀಲ್ದಾರ್ ಇದ್ದಾರೆ. 17 ಕಿ.ಮೀ. ಮುಟ್ಟಬೇಕಾದರೆ ಒಂದು ತಾಸು ಬೇಕಾಗುತ್ತದೆ. ಯಾವ ಪ್ರಮಾಣದಲ್ಲಿ ಆ ರೋಡ್ ಇರಬೇಕು ತಾವೇ ಆಲೋಚನೆ ಮಾಡಿ. PWD ರೋಡ್ ಈ ರೀತಿ ಆದರೆ, ನ್ಯೂ ZP ರೋಡ್‌ಗಳ ಬಗ್ಗೆ ಹೇಳುವುದೇ ಬೇಡ. ನಾವು ಯಾವುದೇ ಒಂದು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ, ಅದನ್ನು ಪೂರೈಸುತ್ತೇವೆ. ಅದರ maintenance ಕಡೆ ನಾವು ಲಕ್ಷ್ಯ ಕೊಡುತ್ತಿಲ್ಲ. ಈ ಸದನದಲ್ಲಿ ನಾನು compliment ಕೊಡಬೇಕಾಗುತ್ತದೆ. ಮಾನ್ಯ ಕೌಜಲಗಿಯವರು PWD ಸಚಿವರಾಗಿದ್ದರು. ಅವರು ಕೇವಲ ಒಂದು ವರ್ಷ ಆರು ತಿಂಗಳು ಸಚಿವರಾಗಿದ್ದರು ಅಷ್ಟೆ. ಆ ಮೇಲೆ ಅವರಿಗೆ ಪಾರ್ಲಿಮೆಂಟಿಗೆ ಕಳುಹಿಸಿದರು. ಯಾರು ಕಳುಹಿಸಿದರು ಗೊತ್ತಿಲ್ಲ. ಅವರು ನಮ್ಮ ಕಾಂಗ್ರೆಸ್ ಪಕ್ಷದ ಮಂತ್ರಿಗಳೇನಲ್ಲ. ನಾನು ಅವರನ್ನು ಅಪ್ರಿಷಿಯೇಟ್ ಮಾಡುತ್ತೇನೆ. ಅವರು ಎಲ್ಲಾ ಶಾಸಕರಿಗೆ ಒಂದೇ ಒಂದು ಪತ್ರ ಬರೆದು ನಿಮ್ಮ ನಿಮ್ಮ ಮತಕ್ಷೇತ್ರದಲ್ಲಿ ಯಾವ್ಯಾವ ರೋಡ್‌ಗಳು ಕೆಟ್ಟಿವೆ ಮತ್ತು ಎಷ್ಟು ಪಾಟ್‌ಹೋಲ್‌ಗಳಿವೆ ಎಂದು ಲೋಕೋಪಯೋಗಿ ಸಚಿವರಾದ ಮೇಲೆ ಎಲ್ಲರಿಗೂ ಒಂದು ಪತ್ರ ಬರೆದರು.

ಎಲ್ಲಾ Executive Engineers, A.E.E., ಗಳು ಹಲವಾರು ಜನ ಬಂದು ಸರಿಯಾಗಿವೆ ಎಂದು ಬರೆದು ಬಿಡಿ ನಾವು ಗುಂಡಿಗಳನ್ನು ತುಂಬಿ ಬಿಡುತ್ತೇವೆಂದು ಹೇಳಿದರು. ಸರಿಯಾಗಿ ಇದೆ ಎಂದು ಬರೆದರೆ ಸಾಕು ನಿಮಗೆ ಕೈ ಜೋಡಿಸುತ್ತೇನೆ. ಸರ್ಕಾರ ರೋಡ್ ಮೇಂಟೇನ್ ಮಾಡುವುದಕ್ಕೆ ಸುಸ್ಥಿತಿಯಲ್ಲಿ ಇಡುವುದಕ್ಕೆ ನೀವು ಸಾಕಷ್ಟು ಹಣ ಕೊಡುತ್ತೀರಿ. ಇತ್ತೀಚಿನ ಎರಡು–ಮೂರು ವರ್ಷಗಳಲ್ಲಿ ಈ ಹಣ ಏನಾಗುತ್ತಿದೆ. ಕೆಲಸವೇ ಮಾಡುವುದಿಲ್ಲ. ಸುಮ್ಮನೆ ಬಿಲ್ ಎತ್ತಿಬ್ಬಿಡುವುದು. ನಾನು ನನ್ನ ಕ್ಷೇತ್ರದ್ದು ಹೇಳುತ್ತೇನೆ. ಉಳಿದ ಕಡೆ ವಿಷಯ ಹೇಳುವುದಿಲ್ಲ. ಒಂದು ಪುಟ್ಟಿ ಮಣ್ಣು ಹಾಕುತ್ತಿಲ್ಲ. ಅವರಿಗೆ ಏಕೆ ಹಣ ಕೊಡುತ್ತೀರಿ ? ಹಣ ದುರ್ಬಳಕೆ ಮಾಡುವುದಕ್ಕಾ ? ಒಂದು ಕಡೆ 60 ಲಕ್ಷ ರೂಪಾಯಿ ಬಿಲ್ ತೆಗೆದುಕೊಂಡಿದ್ದಾರೆ. ರೋಡ್ ಬಹಳ ಚೆನ್ನಾಗಿದೆ. ಕನ್ನಡಿ ಇದ್ದ ಹಾಗೆ ಇದೆ. ಇಂಜಿನಿಯರ್‌ರವರಿಗೆ ಕರೆದುಕೊಂಡು ಹೋಗಿ ತೋರಿಸಿದೆ. ಕನ್ನಡ ಇದ್ದ ಹಾಗೂ ಇದೆ. ರಿಪೇರಿ ಇದೆ ಎಂದು ಹೇಳಿ 40 ಲಕ್ಷ ರೂ. ಬಿಲ್ ತೆಗೆದುಕೊಂಡಿದ್ದಾರೆ. ಯಾರೂ ಹೇಳುವವರು ಕೇಳುವವರು ಇಲ್ಲ. ಅಂತಹ ಅಧಿಕಾರಿಯನ್ನು ಬೇರೆ ಕಡೆ ಶಿಫ್ಟ್ ಮಾಡತಕ್ಕಂತಹ ಶಕ್ತಿ ನನಗಿಲ್ಲ. ವಿಧಾನಸೌಧದ ಮಟ್ಟದಲ್ಲಿ ಅವರು ಬಹಳ ಚೆನ್ನಾಗಿದ್ದಾರೆ. ಇನ್ನು ನಮ್ಮ ಗೋಳು ಕೇಳುವವರ್‍ಯಾರು ? ನನ್ನ ಹೆಸರು ಬಹಳ ಕೆಟ್ಟಿದೆ. ಹಾರಾಟ ಬಿದ್ದಿದೆ ಅದಕ್ಕೇ ಹೇಳುತ್ತಿದ್ದೇನೆ. ಅವರು ನನಗೆ ಕೇಳುತ್ತಿದ್ದಾರೆ. ಒಂದು ಸಲ ಅಲ್ಲ ಎರಡು ಸಲ ಕ್ಯಾಬಿನೆಟ್ ಸಚಿವರಾಗಿ ಕೆಲಸ ಮಾಡಿದ್ದೀರಿ. ನಿಮಗೆ ನಾಚಿಕೆ ಬರುವುದಿಲ್ಲವಾ ಈ ರೋಡ್‌ಗಳು ಈ ಸ್ಥಿತಿಯಲ್ಲಿವೆಯಲ್ಲ ಎಂದು ಕೇಳುತ್ತಿದ್ದಾರೆ. ನಾನು ಏನೆಂದು ಹೇಳಬೇಕು ಅವರಿಗೆ ? ಎಲ್ಲಾ ಕಡೆ ಹೋಗಿ ಮನೆ ಕಾಯುವುದು ನನಗೆ ಗೊತ್ತಿಲ್ಲ. ಆ ಕೆಲಸ ನನಗೆ ಮಾಡುವುದಕ್ಕೆ ಬರುವುದಿಲ್ಲ. ಅದು ಒಳ್ಳೆಯದೂ ಅಲ್ಲ. ಅದು decent ಅಲ್ಲ ಈ ವಯಸ್ಸಿನಲ್ಲಿ ಮಾಡತಕ್ಕಂತಹ ಕೆಲಸವೂ ಅಲ್ಲ ಅದು. ಒಂದು ಸಾರಿ ಫೋನ್ ಮಾಡಿ ಹೇಳಿದರೆ ಸಾಕು. ಆ ರೀತಿ ನಾವು ಪರಸ್ಪರ ವಿಶ್ವಾಸ ಉಳಿಸಿಕೊಳ್ಳಬೇಕು. ನೀವು ಆಡಳಿತ ಪಕ್ಷದಲ್ಲಿರುವವರು ಇವತ್ತು ನೀವು ಕರ್ನಾಟಕ ರಾಜ್ಯವನ್ನು ಆಳತಕ್ಕಂಹವರು. ಅಲ್ಲಿ ಪಕ್ಷದ ಪ್ರಶ್ನೆ ಬರುವುದಿಲ್ಲ. ಅಧ್ಯಕ್ಷರಿಗೆ ನಾವು ಪ್ರಶ್ನೆಗಳನ್ನು ಹಾಕುತ್ತೇವೆ ಅವರು ಪ್ರಶ್ನೆಗಳ ಪಟ್ಟಿಯಲ್ಲಿ ಯಾವ ಪಕ್ಷ ಎಂದು ಹಾಕುವುದಿಲ್ಲ. ಯಾವ ಮತಕ್ಷೇತ್ರ ಎಂದು ಹಾಕುತ್ತಾರೆ ಅಷ್ಟೆ. ಯಾದಗಿರಿ ಮತಕ್ಷೇತ್ರಕ್ಕೆ ಎರಡು ಕೋಟಿ ಮೂರು ಕೋಟಿ ಕೊಡುತ್ತೀರಿ. ಪಕ್ಕದ ಮತಕ್ಷೇತ್ರಕ್ಕೆ 25 ಕೋಟಿ ಕೊಡುತ್ತೀರಿ.

30 ಕೋಟಿ, 19 ಕೋಟಿ ಯಾರೂ ಈ ರೀತಿ ಮಾಡಿರಲಿಲ್ಲ. 35 ವರ್ಷಗಳಾದವು ನಾನು ಶಾಸಕನಾಗಿ, ಯಾರೂ ಈ ರೀತಿ ಮಾಡಲಿಲ್ಲ.

**ಶ್ರೀ ಸಿ.ಎಂ. ಉದಾಸಿ :** – ಮಾನ್ಯ ಅಧ್ಯಕ್ಷರೆ, ತಾವು ಮಾತನಾಡುವಾಗ ಆರೋಪ ಮಾಡುವುದಕ್ಕಿಂತ ಪೂರ್ವದಲ್ಲಿ ಯೋಚನೆ ಮಾಡಬೇಕಾಗಿತ್ತು ಎಂದು ಹೇಳುವುದಕ್ಕೆ ಬಯಸುತ್ತೇನೆ. ನಾನು ಎಲ್ಲಾ ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಸ್ತಾವನೆಯನ್ನು CRF ದಲ್ಲಿ ರೋಡ್‌ಗೆ ಕಳುಹಿಸಿದೆ. CRF ರೋಡ್‌ಗೆ ಕಳುಹಿಸಿದಾಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ತಮ್ಮ ಕ್ಷೇತ್ರಕ್ಕೆ ಮೇಜರ್ ಹಣವನ್ನು ಮಂಜೂರಾತಿ ಪಡೆದುಕೊಂಡು ಉಳಿದವರಿಗೆ ಯಾರಿಗೂ ದೊರೆಯದೆ ಹಾಗೆ ಮಾಡಿದರು ಎಂದು ತಮ್ಮ ಗಮನಕ್ಕೆ ಬಂದಿರಬಹುದು ಎಂದು ಹೇಳವುದಕ್ಕೆ ಬಯಸುತ್ತೇನೆ. ಇದನ್ನು ನೋಡಿದಾಗ ನೀವು ವಿವರವನ್ನು ತಮ್ಮ ಎದುರಿಗೆ ಕೊಡುತ್ತಿದ್ದೀರಿ ಗುಲ್ಬರ್ಗ ಡಿವಿಷನ್‌ನಲ್ಲಿ ನಾವು ಬರುವುದಕ್ಕಿಂತ ಮೊದಲು ಏನು ಕೆಲಸ ಆಗಿತ್ತು. ನಾವು ಬಂದ ಮೇಲೆ ಏನಾಗಿದೆ ಎಂದು ಹೋಲಿಕೆ ಮಾಡಿಕೊಳ್ಳಬೇಕಾದ ಅವಶ್ಯಕತೆಯೂ ಇದೆ ಎಂದು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಿಮಗೆ 135 ಕಿಮಿ ರಸ್ತೆ ವಾಗ್ದರಿ ಮತ್ತು ರಿಪ್ಪನ್ ಪಾಳ್ಯ ರಸ್ತೆ ಬರುವ ತಿಂಗಳು ಆಗಸ್ಟ್‌ನಲ್ಲಿ ನಾವು ಉದ್ಘಾಟನೆ ಮಾಡಲಿದ್ದೇವೆ. ಆ ರಸ್ತೆಗೆ ಹೋಗಬೇಕಾದರೆ 12 ಗಂಟೆ ಬೇಕಾಗುತ್ತಿತ್ತು. ಇವತ್ತು ಎರಡು ಗಂಟೆಯಲ್ಲಿ ಹೋಗಬಹುದಾದ ರಸ್ತೆಯನ್ನು ಮಾಡಿರುವುದು ನೀವು ನೋಡಿರಬಹುದು ಎಂದು ನಾನು ಭಾವಿಸಿಕೊಂಡಿದ್ದೇನೆ. ಗುಲ್ಬರ್ಗಾ....

**ಡಾ॥ ಎ.ಬಿ. ಮಲಕರೆಡ್ಡಿ :** – ನಾನು ಮಾತನಾಡುತ್ತಿರುವುದು ಯಾದಗಿರಿ ಜಿಲ್ಲೆಯ ಬಗ್ಗೆ. ಅವರು ಗುಲ್ಬರ್ಗಾ ಜಿಲ್ಲೆಯ ಬಗ್ಗೆ ಹೇಳುತ್ತಿದ್ದಾರೆ.

**ಶ್ರೀ ಸಿ.ಎಂ. ಉದಾಸಿ :** – ಯಾವುದೋ ಒಂದು ರಸ್ತೆಗೆ 60 ಲಕ್ಷ ಖರ್ಚು ಮಾಡಿದ್ದಾರೆ ಎಂದು ಹೇಳಿದಿರಿ. ಸ್ಪೆಸಿಫಿಕ್ ಆಗಿ ರಸ್ತೆಗಳ ಹೆಸರು ಹೇಳಿದರೆ ವಿಚಾರಣೆ ಮಾಡಬೇಕಾದ ಕೆಲಸವನ್ನು ಮಾಡುತ್ತೇವೆ. ತಮ್ಮ ಬಗ್ಗೆ ನನಗೆ ಅತ್ಯಂತ ಗೌರವವಿದೆ. ನೀವು ನಾನು 1983 ರಿಂದ ಇಲ್ಲಿಯವರೆಗೆ ನೋಡುವಾಗ ಅಲ್ಲಿಂದ ಇಲ್ಲಿಯವರೆಗೆ ನೋಡಿದಾಗ ಏಕೆ ಒಮ್ಮಿಂದೊಮ್ಮೆಲೆ ನಿಮಗೆ ಸಿಟ್ಟು ಬಂದಿತು ಎಂದು ನನಗೆ ಗೊತ್ತಾಗಲಿಲ್ಲ. ದೂರುಗಳನ್ನು ಹೇಳಬೇಕಾದಾಗ ಸ್ಪೆಸಿಫಿಕ್ ಆಗಿ ನೀವು ಹೇಳಿದರೆ ವಿಚಾರಣೆ ಮಾಡಿ ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕಾದ ಕೆಲಸವನ್ನು ನಾವು ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ತನ್ವೀರ್ ಸೇಠ್ :** – ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು CRF ಬಗ್ಗೆ ಮಾತನಾಡಿದರು. ಸದನದಲ್ಲಿ ಇಲ್ಲದೆ ಇರುವ ವ್ಯಕ್ತಿಗಳ ಹೆಸರುಗಳನ್ನು ತೆಗೆದುಕೊಂಡರು. CRF ಹಣ ಬರುವುದು, ಅಲ್ಲಿ ಹಣ ಬರುವುದು ಅಲ್ಲಿಂದ ಅವರು ಒಪ್ಪಿಗೆ ಪಡೆದುಕೊಳ್ಳಬೇಕಾಗಿರುವುದು ಸಹಜವಾಗಿ ಮಾನ್ಯ ಸಚಿವರು ಹೇಳುತ್ತಿದ್ದಾರ. ಆದರೆ 3054, 5054 ನಬಾರ್ಡ್‌ನವರು ಮಾಡುವಂತಹ ಕೆಲಸಗಳಲ್ಲಿ ಮಾನ್ಯ ಸಚಿವರ ಕೈಯಲ್ಲಿಯೇ ಇರುವುದು. ಆದರಲ್ಲಿ ಆಗಿರುವಂತಹ ತಾರತಮ್ಯಗಳು ಮತ್ತು ಆಗುತ್ತಿರುವಂತಹ ವಾಸ್ತವ ಸ್ಥಿತಿಯನ್ನು ಡಾ॥ ಮಲ್ಲಕರೆಡ್ಡಿಯವರು ಸದನದ ಮುಂದೆ ಸರ್ಕಾರಕ್ಕೆ ಹೇಳುತ್ತಿದ್ದಾರೆ. ತಾವು ಆ ಅಂಶಗಳನ್ನು ತೆಗೆದುಕೊಂಡು ನಂತರ ಅದನ್ನು ಯಾವ ರೀತಿ ಸರಿಪಡಿಸಬೇಕೋ ಅದನ್ನು ಮಾಡಿ.

**ಶ್ರೀ ವೈ.ಎನ್. ರುದ್ರೇಶ್‌ಗೌಡ :** – ಮಾನ್ಯ ಅಧ್ಯಕ್ಷರೆ, CRF ನಲ್ಲಿ ಒಂದೇ ವರ್ಷ ಹಣ ಬಂದಿರುವುದು. CRF ನಲ್ಲಿ ಮೂರು ವರ್ಷಗಳಿಂದ ಹಣ ಬಂದಿಲ್ಲ. ನಂಜುಂಡಪ್ಪ ವರದಿಯಲ್ಲಿ ಎರಡು ವರ್ಷ ಹಣ ಬಂದಿಲ್ಲ.

**ಶ್ರೀ ಸಿ.ಎಂ. ಉದಾಸಿ :** – CRF ಹಣ ಕೊಡಬೇಕಾದಾಗ ಸಹಿತ ಸ್ವ ಇಚ್ಛೆಯಿಂದ ಕೊಡುವುದಿಲ್ಲ. ಪೆಟ್ರೋಲ್ ಮತ್ತು ಡೀಸೆಲ್ consumption ಆದ ಮೇಲೆ ಅವರ ಮೇಲೆ ಬಂದಿರುವಂತಹ ತೆರಿಗೆ ಹಣವನ್ನು ರಾಜ್ಯ ಸರ್ಕಾರದ ಹಕ್ಕು ರಾಜ್ಯ ಸರ್ಕಾರದವರು ಏನು ಸಲಹೆ ಮಾಡಿರುತ್ತಾರೆ ಅದನ್ನೇ ಕೊಡಬೇಕೇ ಹೊರತು, ಬೇಕಾ ಬಿಟ್ಟಿ ಮಾಡುವುದಕ್ಕೆ ಅವಕಾಶವಿಲ್ಲ.

**ಶ್ರೀ ಬಂಡೆಪ್ಪ ಕಾಶ್ಯಂಪೂರ್ :** – ಹೀಗಾದರೆ ಅವರ ಮುಖಾಂತರವೇ ಡೆಲಿಗೇಶನ್ ಕರೆದುಕೊಂಡು ಹೋಗುವಂತಿದೆ. ಒಬ್ಬರು ಸಚಿವರು ನೇರವಾಗಿ ಅವರ ಕಳಕಳಿ ಈ ರಾಜ್ಯದ ಜನರಿಗೆಲ್ಲರಿಗೂ ಸಂಬಂಧಪಟ್ಟಂತಿರುವಾಗ, ಕೇವಲ ಎರಡೇ ಎರಡು ಕ್ಷೇತ್ರಕ್ಕೆ ಸೀಮಿತವಾಗಿದೆಯೆಂದು ಹೇಳುವುದು ಬಹಳ ಗಂಭೀರವಾದಂಥದ್ದು. ಆದುದರಿಂದ ಆ ರೀತಿಯಲ್ಲಿ ತಾರತಮ್ಯ ಮಾಡಬಾರದು ಎನ್ನುವ ದೃಷ್ಟಿಯಿಂದ ...

**(ಗೊಂದಲ)**

**ಉಪಾಧ್ಯಕ್ಷರು :** – ಎಲ್ಲರೂ ಕುಳಿತುಕೊಳ್ಳಿ, ಡಾಕ್ಟ್ರೆ, ನೀವು ಮುಂದುವರೆಸಿ.

**(ಗೊಂದಲ)**

**ಶ್ರೀ ಪಿ.ಎಂ. ಅಶೋಕ್ : –** ಆಡಳಿತ ಪಕ್ಷದ ಶಾಸಕರು ಕೇಳಿದರೆ ಹಣವನ್ನು ಬಿಡುಗಡೆ ಮಾಡುತ್ತಾರೆ. ಆದರೆ ವಿರೋಧ ಪಕ್ಷದ ಶಾಸಕರು ಕೇಳಿದರೆ ಹಣವನ್ನು ಬಿಡುಗಡೆ ಮಾಡುವುದಿಲ್ಲ.

**(ಗೊಂದಲ)**

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : –** ಬೇರೆಯವರ ಬಗ್ಗೆ ಆರೋಪ ಮಾಡುವುದಕ್ಕೆ ಪೂರ್ವದಲ್ಲಿ ಯೋಚನೆ ಮಾಡಬೇಕು ಎನ್ನುವ ಸಲುವಾಗಿ ಹೇಳಿದೆನೆಯೇ ಹೊರತು ಹಣದ ಬಗ್ಗೆ ನಾನು ಹೇಳಲಿಲ್ಲ. ಹಣವನ್ನು ಯಾವ ರೀತಿಯಲ್ಲಿ ಉಪಯೋಗ ಮಾಡಿಕೊಂಡರು ಎಂಬ ಬಗ್ಗೆ ಗೊತ್ತಾಗಬೇಕಲ್ಲ. ಆದುದರಿಂದ ನಾನು ಅದರ ಬಗ್ಗೆ ಹೇಳಬೇಕಾಯಿತು.

**ಶ್ರೀ ಬಿ. ರಮಾನಾಥ ರೈ : –** ಕರ್ನಾಟಕ ರಾಜ್ಯದ ಮಂತ್ರಿಮಂಡಲದಲ್ಲಿ ನೀವು ಇದ್ದಿರಿ. ನೀವು ಲೋಕೋಪಯೊಗಿ ಇಲಾಖೆಯ ಸಚಿವರಾಗಿದ್ದೀರಿ.

**(ಗೊಂದಲ)**

**ಉಪಾಧ್ಯಕ್ಷರು : –** ರಮಾನಾಥ ರೈರವರೆ, ತಾವು ಕುಳಿತುಕೊಳ್ಳಿ, ಡಾಕ್ಟ್ರೆ ತಾವು ಮುಂದುವರೆಸಿ. ರೈರವರೆ ತಾವು ಆಮೇಲೆ ಮಾತನಾಡುವಿರಂತೆ, ತಮಗೆ ಆಮೇಲೆ ಅವಕಾಶ ಕೊಡುತ್ತೇನೆ. ಡಾ॥ ಮಲ್ಲಕರೆಡ್ಡಿಯವರೆ, ತಾವು ಮುಂದುವರೆಸಿ.

**ಶ್ರೀ ಬಿ. ರಮಾನಾಥ ರೈ : –** ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ. ಲೋಕೋಪಯೋಗಿ ಸಚಿವರೆ, ತಾವು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮನ್ನೂ ಕೂಡ ನಿಮ್ಮ ಜೊತೆ ಸೇರಿಸಿಕೊಂಡು ಪ್ರಯತ್ನ ಮಾಡಬೇಕು. ಇದು ಮುಖ್ಯವಾಗಿರತಕ್ಕಂಥದ್ದು. ಪೆಟ್ರೋಲ್ ಮತ್ತು ಡೀಸೆಲ್‌ನ ಸೆಸ್‌ನ ಹಣವನ್ನು ಕೊಡತಕ್ಕಂಥದ್ದು ಸರಿಯಾಗಿರತಕ್ಕಂಥ ವಿಚಾರ. ಆದರೆ ಅದನ್ನು ಕೊಡುವಾಗ ಸಮಗ್ರ ಕರ್ನಾಟಕ ರಾಜ್ಯದ ಎಲ್ಲಾ ಕ್ಷೇತ್ರಕ್ಕೆ ಆ ಹಣ ಹೋಗುವ ರೀತಿಯಲ್ಲಿ ಆಗಬೇಕು. ಎನ್ನುವಂಥದ್ದು ನಮ್ಮ ಮನವಿ. ಈ ವಿಚಾರದಲ್ಲಿ ಬೇಕಾದರೆ ನಾವು ನಿಮ್ಮ ಜೊತೆ ಬರುತ್ತೇವೆ.

**ಉಪಾಧ್ಯಕ್ಷರು : –** ಇದೇ ಚರ್ಚೆ ಮುಂದುವರೆಸುವುದು ಬೇಡ. ಡಾ. ಮಲಕರೆಡ್ಡಿಯವರೆ ತಾವು ಚರ್ಚೆ ಮುಂದುವರೆಸಿ.

**ಶ್ರೀ ಬಂಡೆಪ್ಪ ಖಾಶಂಪೂರ್ : –** ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರದಿಂದ ಬರುವುದನ್ನು ಇವರು ತೆಗೆದುಕೊಳ್ಳುವುದು, ರಾಜ್ಯ ಸರ್ಕಾರದಿಂದ ಬರುವುದನ್ನು ಆ ಎಂಎಲ್‌ಎ.ಗಳು ತೆಗೆದುಕೊಳ್ಳುವುದು. ಆದರೆ ನಮ್ಮ ಗತಿ ಹೇಗಾಗಿದೆ ನೋಡಿ.

(ಗೊಂದಲ)

**ಉಪಾಧ್ಯಕ್ಷರು** : – ರಮಾನಾಥ ರೈರವರೆ, ಕಾಶಂಪೂರ್‌ರವರೆ ತಾವು ಕುಳಿತುಕೊಳ್ಳಿ ತಮಗೆ ಆಮೇಲೆ ಅವಕಾಶ ಕೊಡುತ್ತೇನೆ. ವಿವರವಾಗಿ ಈ ಬಗ್ಗೆ ಹೇಳುವಿರಂತೆ, ಡಾ. ಮಲಕಾರೆಡ್ಡಿಯವರೆ, ತಾವು ಮುಂದುವರೆಸಿ ಚರ್ಚೆಗೆ ಬೇರೆ ವಿಷಯಗಳು ಇವೆ. ತಮಗೆ ಆಮೇಲೆ ಅವಕಾಶ ಕೊಡುತ್ತೇನೆ. ಆಗ ನೀವು ಮಾತನಾಡುವಿರಂತೆ.

**ಶ್ರೀ ತನ್ವೀರ್ ಸೇಠ್** : – ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸೆಸ್ ಹಣವನ್ನು ಕೇಳುವುದು ನಮ್ಮ ಹಕ್ಕು ಎಂದು ಹೇಳಿದರು. ಹಾಗಾದರೆ ನಮ್ಮ ವಾಹನಗಳ ಮೇಲೆ ಏನು ತೆರಿಗೆಯನ್ನು ವಸೂಲು ಮಾಡುತ್ತೇವೆ ಅದನ್ನು ಕೇಳುವುದು ಆ ಜಿಲ್ಲೆಯ ಹಕ್ಕು ಆದುದರಿಂದ ಇದನ್ನೂ ಕೂಡ ಅದೇ ಪ್ರಕಾರ ಸಮಾನವಾಗಿ ಇವರು ಕೊಡುತ್ತಿದ್ದಾರೆಯೇ ? ಮಾನ್ಯ ಸಚಿವರು ಮಾತನಾಡುವಾಗ ಹೇಳಿದರು. ನಿಜ, ಯಾರು ಅಧಿಕಾರದಲ್ಲಿರೋ ಅವರು ಹೆಚ್ಚಿನ ಪಾಲನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿದರೆ ಇವರೂ ಕೂಡ ಅದೇ ರೀತಿ ಮಾಡುತ್ತಿದ್ದಾರೆ. ಆದುದರಿಂದ ತಾರತಮ್ಯವಾಗದಂತೆ ಏನು ಮಾಡಬೇಕು ಎಂಬ ಬಗ್ಗೆ ಚರ್ಚೆ ಮಾಡೋಣ.

**ಉಪಾಧ್ಯಕ್ಷರು** : – ಆಯಿತು. ಈಗ ಡಾ. ಮಲಕಾರೆಡ್ಡಿಯವರೆ ತಾವು ಚರ್ಚೆಯನ್ನು ಮುಂದುವರೆಸಿ.

**ಡಾ. ಎ.ಬಿ. ಮಲಕಾರೆಡ್ಡಿ** : – ಮಾನ್ಯ ಉಪಾಧ್ಯಕ್ಷರೆ, ನಾನು ಮೊದಲೇ ಹೇಳಿದೆ, ಲೋಕೋಪಯೋಗಿ ಇಲಾಖೆ ವತಿಯಿಂದ ಸಾಕಷ್ಟು ಚಟುವಟಿಕೆಗಳು ನಡೆದಿದೆ. ಸಾಕಷ್ಟು ಹಣ ಖರ್ಚಾಗುತ್ತಿದೆ. ಆದರೆ ಯಾವ ಯಾವ ಭಾಗದಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಹಣವನ್ನು ಖರ್ಚು ಮಾಡುತ್ತಿಲ್ಲ. ಪ್ರಭಾವದ ಆಧಾರದ ಮೇಲೆ ಮತ್ತು ಇನ್ನಿತರ ಬೇರೆ ಬೇರೆ ಆಧಾರದ ಮೇಲೆ ಕೆಲಸಗಳು ನಡೆದಿದೆಯೇ ಹೊರತು ಅವಶ್ಯಕತೆ ಆಧಾರದ ಮೇಲೆ ಕೆಲಸಗಳು ನಡೆದಿಲ್ಲವೆಂಬುದನ್ನು ನಾನು ಹೇಳುತ್ತಿದ್ದೇನೆ. ನಾನು ಬೇರೆ ಜಿಲ್ಲೆಗಳ ಬಗ್ಗೆ ಮಾತನಾಡುತ್ತಿಲ್ಲ. ಕೇವಲ ಯಾದಗಿರ್ ಜಿಲ್ಲೆ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಯಾದಗಿರಿ ಜಿಲ್ಲೆಯಲ್ಲಿ ಎರಡು ನದಿಗಳು ಹರಿದು ಹೋಗಿರುವುದರಿಂದ ಅಲ್ಲಿ ಎರೆಭೂಮಿ ಹೆಚ್ಚಾಗಿದೆ. ಸಾದಾ ರೋಡ್‌ಗಳನ್ನು ಅಲ್ಲಿ ನಿರ್ಮಾಣ ಮಾಡಿದರೆ ಅಂಥ ರೋಡ್‌ಗಳು ಹೆಚ್ಚು ದಿನ ಬಾಳಿಕೆ ಬರುವುದಿಲ್ಲ. ಸಾದಾ ರೋಡ್‌ಗಳು ಅಲ್ಲಿ ನಿಲ್ಲುವುದಿಲ್ಲ. ಒಂದು ಸಾರಿ ರೋಡ್ ಕೆಟ್ಟರೆ ಅಲ್ಲಿ ಲಾರಿಗಳು ಓಡಾಡುವುದಕ್ಕೆ ಆಗುವುದಿಲ್ಲ. ಟ್ರ್ಯಾಕ್ಟರ್‌ಗಳು ಓಡಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಮಣ್ಣು ಮೆತ್ತಿಕೊಳ್ಳುತ್ತವೆ. ಹೀಗಾಗಿ ಅಲ್ಲಿ ಸಂಚಾರವೇ ಕಟ್ ಆಗುತ್ತದೆ.

ಈಗ ಎಲ್ಲಿ ಸಂಚಾರ ಕಟ್ ಆಗಿದೆ. ನಾನು ಹೇಳುವುದೇನೆಂದರೆ, ಈ ಡಿ-ಲಿಮಿಟೇಶ್‌ನ ಆದಮೇಲೆ ಶಹಾಪುರ ಸೇರಿದಂತೆ ಇಪ್ಪತ್ತು ಮೂವತ್ತು ಹಳ್ಳಿಗಳು ಹೆಚ್ಚಾಗಿ ಸೇರಿರುವುದರಿಂದ ಅಲ್ಲಿ ಎರೆಭೂಮಿಯೇ ಹೆಚ್ಚಾಗಿರುವುದರಿಂದ ಆ ಹಳ್ಳಿಗಳಿಗೆ ಹೋಗುವುದಕ್ಕೇ ಆಗುತ್ತಿಲ್ಲ. ಈ ಬಗ್ಗೆ ಸಾಕಷ್ಟು ಬಾರಿ ಹೇಳಿದರೂ, ಪತ್ರ ಬರೆದರೂ ಕ್ರಮ ತೆಗೆದುಕೊಂಡಿಲ್ಲ. ಮಾನ್ಯ ಉಪಾಧ್ಯಕ್ಷರೆ, 67 ಕಿಮೀ ರಸ್ತೆಗೆ 43 ಕೋಟಿ ರೂ.ಗಳ ಹಣವನ್ನು ಮಂಜೂರು ಮಾಡಿದ್ದಾರೆ. ಅದಕ್ಕೆ Administrative approval ಕೂಡ ಸಿಕ್ಕಿದೆ. ಈಗಾಗಲೇ ಒಂದು ವರ್ಷವಾಗಿದೆ. ಇನ್ನೂ ಟೆಂಡರ್ ಕರೆದಿಲ್ಲ. ಎಲ್ಲಿ Administrative approval ಸಿಕ್ಕಿದೆಯೋ ಅಲ್ಲಿ ಹಣವನ್ನು ಬಳಸುವುದಿಲ್ಲ. ಅದನ್ನು ಉಳಿಸುವುದು, ಅದನ್ನು ಬೇರೆ ಕಡೆಗೆ ಖರ್ಚು ಮಾಡುವುದು ಆಗಿದೆ. Administrative approval ಸಿಕ್ಕಿ ಈಗಾಗಲೇ ಒಂದು ವರ್ಷವಾಗಿದೆ. ನಿನ್ನೆ ಕೂಡ ಇದರ ಬಗ್ಗೆ ಮಾತನಾಡಿದ್ದೇನೆ. ಇನ್ನೂ ಕೂಡ ಈ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಏಕೆ ಡಿಲೇ ಮಾಡುತ್ತಿದ್ದೀರಿ ? ಎಷ್ಟು ಸಾಧ್ಯವಿದೆಯೋ ಅಷ್ಟು ಕೆಲಸವನ್ನು ಮಾಡಿ. ಈಗ ಅವರು ಇನ್ನೂ ಸ್ವಲ್ಪ ಹಣ ಬೇಕೆಂದು ಹೇಳಿ ನೂರು ಕೋಟಿ ರೂ.ಗಳು ಬೇಕಾಗುತ್ತದೆ ಎಂದು ಹೇಳಿದರು. ಆಯಿತು, ನೂರು ಕೋಟಿ ಹಣವನ್ನು ಒಂದೇ ವರ್ಷದಲ್ಲಿ ಖರ್ಚು ಮಾಡುತ್ತೀರೇನು ? 67 ಕೋಟಿ ರೂ.ಗಳನ್ನೇ ಒಂದು ವರ್ಷದಲ್ಲಿ ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಈಗ ಕೆಲಸವನ್ನು ಮುಂದುವರೆಸಿ ಮುಂದೆ ಹೆಚ್ಚು ಹಣವನ್ನು ಇದಕ್ಕಾಗಿ ಅಲಾಟ್ ಮಾಡಿ. ಈಗೇನು 67 ಕೋಟಿ ರೂ.ಗಳನ್ನು ಕೊಡಲಾಗಿದೆ ಅದನ್ನು ಉಪಯೋಗಿಸಿಕೊಂಡು ಕೆಲಸವನ್ನು ಪ್ರಾರಂಭ ಮಾಡಿ ಮುಂದಕ್ಕೆ ಇನ್ನೂ ಹೆಚ್ಚು ಹಣವನ್ನು ಇದಕ್ಕಾಗಿ ಅಲಾಟ್ ಮಾಡಿ. ಇದುವರೆಗೂ ಇನ್ನೂ ಕೆಲಸ ಮಾಡದಿರುವುದರಿಂದ ಆ ರಸ್ತೆಯ ಮೇಲೆ ವಾಹನಗಳು ಓಡಾಡುವ ಕಂಡೀಶನ್ ಇಲ್ಲವಾಗಿದೆ. ನೀವೂ ಚೆನ್ನಾಗಿ ಕೆಲಸ ಮಾಡುವವರೆ ಆಗಿದ್ದೀರಿ. ಆದರೆ ಯಾರೋ ನಿಮಗೆ ದಾರಿ ತಪ್ಪಿಸುತ್ತಿದ್ದಾರೆ. ಅದಕ್ಕಾಗಿ ನಿಮಗೆ ಈ ವಿಷಯವನ್ನು ಹೇಳುತ್ತಿದ್ದೇನೆ. ಈಗ ನೋಡಿ, ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಯಡಿಯೂರಪ್ಪನವರು 300 ಕೋಟಿ ರೂ.ಗಳ ಸ್ಪೆಷಲ್ ಪ್ಯಾಕೇಜ್‌ನ್ನು ಕೊಟ್ಟರು. ಆದರಲ್ಲಿ ಮೂವತ್ತು ಪೈಸೆಯಷ್ಟು ಕೂಡ ಖರ್ಚು ಮಾಡಲಿಲ್ಲ. ಏಕೆ ಖರ್ಚು ಮಾಡಲಿಲ್ಲ ? ಮತ್ತೆ ನೀವು ಹೇಳುತ್ತೀರಿ. ನಂಜುಂಡಪ್ಪ ವರದಿ ಆಧಾರದ ಮೇಲೆ ಲೆಕ್ಕಾಚಾರ ಮಾಡಿ ಹಣವನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳುತ್ತೀರಿ. ಆದರೆ ಹಣವನ್ನು ಎಲ್ಲಿ ಬಿಡುಗಡೆ ಮಾಡಿದ್ದೀರಿ ? ಹಿಂದೆ

ವಿರೇಂದ್ರ ಪಾಟೀಲರು ಒಂದು ಮಾತನ್ನು ಹೇಳುತ್ತಿದ್ದರು. ಅಭಿವೃದ್ಧಿ ವಿಚಾರದಲ್ಲಿ ನೀವು ಉತ್ತರ ಕರ್ನಾಟಕವನ್ನು ಆಲಕ್ಷ್ಯ ಮಾಡಿದರೆ ಅವರು ಪ್ರತ್ಯೇಕ ರಾಜ್ಯವಾಗಬೇಕೆಂದು ಕೇಳುತ್ತಾರೆಂದು ಅವರು ಎರಡ್ಮೂರು ಬಾರಿ ಭಾಷಣ ಮಾಡುವಾಗ ಹೇಳಿದ್ದರು. ಆದಾದ ಮೇಲೆ ಅವರು ಮುಖ್ಯಮಂತ್ರಿಗಳಾದರು, ಸ್ವಲ್ಪ ದಿನದಲ್ಲಿಯೇ ದುರ್ದೈವದಿಂದ ಅವರ ಆರೋಗ್ಯ ಕೆಟ್ಟಿತು. ಇವರು ಈ ಸಲ ಏನು ಮಾಡಿದರೆಂದರೆ, ಮುಖ್ಯಮಂತ್ರಿಯಾದ ಕೂಡಲೇ 50 ಕೋಟಿ ರೂ.ಗಳ ಒಂದು ಪ್ಯಾಕೇಜ್‌ನ್ನು ಕೊಟ್ಟರು. ಆಮೇಲೆ ಅದು ಹಾಗೆಯೇ ಮುಗಿದುಹೋಯಿತು. ಅನೇಕ ಯೋಜನೆಗಳು ಬರುತ್ತದೆ. ಒಂದು ವರ್ಷ ಮಾಡುತ್ತಾರೆ, ನಂಜುಂಡಪ್ಪ ವರದಿ ಆಧಾರದ ಮೇಲೆ ಒಂದು ಕೆಲಸವನ್ನು ತೆಗೆದುಕೊಂಡು ಒಂದೆರಡು ಕೋಟಿ ರೂ.ಗಳನ್ನು ಇಟ್ಟಿದ್ದೇವೆಂದು ಹೇಳಿದರು. ಆಯಿತು, ಮೆಟೀರಿಯಲ್‌ಗಳೆಲ್ಲವನ್ನೂ ತಂದು ಹಾಕಿದ್ದು ಆಯಿತು, ಮರಳನ್ನು ತಂದು ಹಾಕಿದ್ದೂ ಆಯಿತು, ಆಮೇಲೆ ಆ ಕೆಲಸ ಸ್ಥಗಿತವಾಯಿತು. ನಾನು ಏಕೆ ನಿಂತು ಹೋಯಿತು ಎಂದು ಕೇಳಿದೆ. ಅದಕ್ಕೆ ಮುಂದಿನ ಹಣ ಬಂದಿಲ್ಲ ಎಂದು ಹೇಳಿದರು. ಅಲ್ಲಿ ಹಾಕಿದಂತಹ materials 2-3 ಸಲ ಮಳೆ ಬಂತು. ಎಲ್ಲಾ ಮಳೆಗೆ ಹರಿದುಕೊಂಡು ಹೋಯಿತು. ಏನು ಮಾಡಿದ ಹಾಗೆ ಆಯಿತು ? ನೀವು ಹೈದರಾಬಾದ್ ಕರ್ನಾಟಕ ಏರಿಯಾ ಮತ್ತು ನಾರ್ತ್ ಕರ್ನಾಟಕ ಏರಿಯಾಗೆ ಏನು ಮಾಡಿದ್ದು ? ಜಿಲ್ಲೆ ಘೋಷಣೆಯಾಯಿತು. ಘೋಷಣೆ ಏಕೆ ಮಾಡಿದಿರಿ ? ಅಲ್ಲಿ equitable development ಆಗಲಿ, ಆ ಏರಿಯಾ geographically ಒಂದು biggest destiny ಅಲ್ಲಿ ಜಿಲ್ಲಾಧಿಕಾರಿಗಳು ವಿಸಿಟ್ ಮಾಡಿ ಸೂಪರ್‌ವಿಷನ್ ಮಾಡುವುದಕ್ಕಾಗುವುದಿಲ್ಲ ಎಂದು ತಿಳಿದುಕೊಂಡು ಮಾಡಿದಿರಿ. ನೀವು ಮಾಡಿ ಕುಳಿತಿರಿ. ಆಮೇಲೆ ಏನಾಯಿತು ? ಈ ಜಿಲ್ಲೆಯಾಗಿ ಮೂರು ವರ್ಷವಾಯಿತು. ಆ ಕಟ್ಟಡ ನಿರ್ಮಾಣ ಮಾಡುವುದಕ್ಕೆ 16 ಕೋಟಿ ರೂಪಾಯಿ MRF ನಿಂದ ಕೇಂದ್ರ ಸರ್ಕಾರ ಕೊಡುತ್ತದೆ. ನೀವು ಈ ಹಣವನ್ನು ವಸೂಲು ಮಾಡುತ್ತಿಲ್ಲವಲ್ಲಾ. ಆದರೆ ಕೇಂದ್ರ ಸರ್ಕಾರ ಕೊಟ್ಟಿರುವ ದುಡ್ಡನ್ನು ಏನು ಮಾಡಿದರು ? ಮಾನ್ಯ ಉಪಾಧ್ಯಕ್ಷರೆ, ನಮ್ಮ ಆರೋಗ್ಯ ಸಚಿವರು ಎಲ್ಲಿದ್ದಾರೆ. ದಯವಿಟ್ಟು ಕರೆಸಿರಿ. ನಾನು ವೈದ್ಯನಾಗಿ ಕೆಲಸ ಮಾಡಿದ್ದೇನೆ ಮತ್ತು ಈ ಇಲಾಖೆಯ ಸಚಿವನಾಗಿ ಕೆಲಸ ಮಾಡಿದ್ದೇನೆ. ದಯಮಾಡಿ ಆ ಇಲಾಖೆಯ ಮಂತ್ರಿಗಳನ್ನು ಕರೆಸಿರಿ. ಇಲ್ಲಿ ಆ ಇಲಾಖೆಯ ಸಚಿವರು ಕೂಡ ಇಲ್ಲ.

**ಉಪಾಧ್ಯಕ್ಷರು** : – ಆರೋಗ್ಯ ಸಚಿವರು ವಿಧಾನ ಪರಿಷತ್ತಿನಲ್ಲಿದ್ದರೆ ಇಲ್ಲಿಗೆ ಬರುವುದಕ್ಕೆ ಹೇಳಿ.

**ಶ್ರೀ ಎ.ಬಿ. ಮಲಕಾರೆಡ್ಡಿ** : – ಮಾನ್ಯ ಉಪಾಧ್ಯಕ್ಷರೆ, ಸಾಕಷ್ಟು ಸಮಸ್ಯೆಗಳು ಇವೆ. ಆದರೆ ಮೊದಲು ನಿಮ್ಮ Executive Engineer ಅನ್ನು ಚೇಂಜ್ ಮಾಡಿ. ನಾನು ಶಾಸಕಾಂಗದಲ್ಲಿ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿ 35–40 ವರ್ಷವಾಯಿತು. ನಾನು ಅನುಭವದಿಂದ ಹೇಳುತ್ತಿದ್ದೇನೆ. ಮೊದಲು ಅವರನ್ನು ಅಲ್ಲಿಗೆ ಶಿಫ್ಟ್ ಮಾಡಿ. ಅವರಿಗೆ ಅಲ್ಲಿ ಎರಡು ವರ್ಷ complete ಆಗಿದೆ ಅವರನ್ನು ಅಲ್ಲಿಗೆ ಶಿಫ್ಟ್ ಮಾಡಿ. ಬೇರೆ ಯಾರನ್ನಾದರೂ ಹಾಕಿ, ನಾವು ಕೆಲಸ ತೆಗೆದುಕೊಳ್ಳುತ್ತೇವೆ. ಇಂತಹವರನ್ನೇ ಹಾಕಿ ಎಂದು ಹೇಳುವುದು ಬೇಡ. ನೀವು ಯಾರನ್ನಾದರೂ ಹಾಕಿ. ಅದರೆ ಅಲ್ಲಿ ಲಕ್ಷ್ಯ ಕೊಟ್ಟು ಆಸ್ಥೆವಹಿಸಿ ಕೆಲಸ ಮಾಡುವಂಥಹವರನ್ನು ಮಾಡಿ ಅಲ್ಲಿ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಯಾರಾದರೂ ಒಬ್ಬ ಸಣ್ಣ ಕಾರ್ಯಕರ್ತ. youngster ಸಾಕು. ಮಾನ್ಯ ಆರೋಗ್ಯ ಸಚಿವರು ಬಂದರು. ಅವರು ಮೊನ್ನೆ ಇಲಾಖೆ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಶೇಕ್ಸ್‌ಪಿಯರ್ ಹ್ಯಾಮ್ಲೆಟ್ ಮೇಲೆ ಒಂದು ಮಾತು ಹೇಳಿದ್ದಾನೆ. ದಯಮಾಡಿ ಅದನ್ನು ಬರೆದುಕೊಳ್ಳಿ. ನಿಮಗೆ ಅದು guidelines ದಿನಾ ರೀತಿ ಇರುತ್ತದೆ. 'There is something wrong in the state of Denmark' ಎಂದು ಶೇಕ್ಸ್‌ಪಿಯರ್ ಹ್ಯಾಮ್ಲೆಟ್ ಮೇಲೆ ಒಂದು ಮಾತು ಹೇಳುತ್ತಾರೆ. ಅದರಂತೆ there is something ಅಲ್ಲ. completely wrong in the department of Health. ನೀವು ಈ 8–10 ತಿಂಗಳಿನಲ್ಲಿ ಏನು ಮಾಡುತ್ತೀರೋ ನನಗಂತೂ ಗೊತ್ತಿಲ್ಲ. ದಯಮಾಡಿ ನನಗೆ ಏನು ಅನಿಸುತ್ತದೆ ಎಂದರೆ ಅರಾಮವಾಗಿ ಮಜಾ ಮಾಡುವುದಕ್ಕೆ ಸಚಿವ ಸ್ಥಾನ ತೆಗೆದುಕೊಳ್ಳುತ್ತೀವೇನೋ ಎಂದು ನನಗೆ ಭಾಸವಾಗುತ್ತದೆ. ನಿಮಗೆ ಏನೆನಿಸುತ್ತದೆ ಎಂದು ನನಗಂತೂ ಗೊತ್ತಾಗುತ್ತಿಲ್ಲ. ನಾನು ಕಾರ್ಯವೈಖರಿ ನೋಡಿದೆ. ಕೆಲವು ಇಲಾಖೆಯವರು ಚೆನ್ನಾಗಿ ಮಾಡುತ್ತಿದ್ದಾರೆ. ಅಭ್ಯಂತರವಿಲ್ಲ. ಕೆಲವು ಮಂದಿ ಇದ್ದಾರೆ. ಇದ್ದುದ್ದರಲ್ಲಿ ಚೆನ್ನಾಗಿ ನಿರ್ವಹಣೆ ಮಾಡುತ್ತಿದ್ದಾರೆ. ಇಲ್ಲವೆಂದು ಹೇಳುವುದಿಲ್ಲ. ಆದರೆ ಆರೋಗ್ಯ ಇಲಾಖೆ ಬಗ್ಗೆ ನಾವು ಏನು ಹೇಳಬೇಕು ಹೇಳಿ ? ಈಗ ಕಿದ್ವಾಯ್ ಆಸ್ಪತ್ರೆ ಇದೆ. ಅದಕ್ಕೆ ನೀವೇ ಅಧ್ಯಕ್ಷರು ಎಂದು ನಾನು ತಿಳಿದುಕೊಂಡು ಹೇಳುತ್ತಿರುವುದು. ಆದರೆ ನಾನು ಆರೋಗ್ಯ ಸಚಿವನಾಗಿದ್ದಾಗ ನಾನೇ ಅಲ್ಲಿ ಅಧ್ಯಕ್ಷನಾಗಿದ್ದೆನು.

**ಮಾನ್ಯ ಸದಸ್ಯರು :** – ಈಗ Medical Education Minister ಇದ್ದಾರೆ.

**ಶ್ರೀ ಎ.ಬಿ. ಮಲಕಾರೆಡ್ಡಿ :** – ಏನೇನು ಮಾಡುತ್ತಾರೋ ನನಗಂತೂ ಅರ್ಥವಾಗುತ್ತಿಲ್ಲ. ನನಗೆ ಈ ವಿಚಾರದಲ್ಲಿ ಬಹಳಷ್ಟು ಮಾತನಾಡುವುದಿದೆ. ಅವರನ್ನು ಕರೆಸಿ, ಅವರು ಇಲ್ಲಿ ಇಲ್ಲ.

**ಉಪಾಧ್ಯಕ್ಷರು :** – ಅವರು ಅನುಮತಿ ಕೇಳಿ ಹೋಗಿದ್ದಾರೆ.

**ಶ್ರೀ ಎ.ಬಿ. ಮಾಲಕರೆಡ್ಡಿ :** – ಜೆನರಿಕ್ ಡ್ರಗ್, ಬ್ರಾಂಡೆಡ್ ಡ್ರಗ್ ಎಂದು ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆಯಾಯಿತು. ಇದನ್ನು ಕೇಳುವುದಕ್ಕೆ ಬಹಳ ಚಂದ ಅನಿಸುತ್ತದೆ. ನಾವು ಕುತಂತ್ರ ಮಾಡುವುದರಲ್ಲಿ ಬಹಳ ಹಲವಾರು ಇದ್ದೇವೆ. ಯಾರೇ ಅಧಿಕಾರಕ್ಕೆ ಬಂದ ಕೂಡಲೇ ಎಷ್ಟು exploit ಮಾಡಬೇಕು ಎಂದು ಆಲೋಚನೆ ಮಾಡುತ್ತೇವೆ. ಎಷ್ಟು ಪ್ರಮಾಣದಲ್ಲಿ ನಾವು ಸೇವೆ ಮಾಡಬೇಕೆಂದು ಇತ್ತೀಚಿನ ದಿನಗಳಲ್ಲಿ ಯಾರೂ ಆಲೋಚನೆ ಮಾಡುವುದಿಲ್ಲ. ನೀವು ಜೆನರಿಕ್‌ನಿಂದ ಹಣ ಉಳಿಸಿದ್ದೇವೆ ಎಂದು ಹೇಳುತ್ತೀರಿ. ಕಿದ್ವಾಯ್ ಆಸ್ಪತ್ರೆಯಲ್ಲಿ ಒಂದು Foundation ಇದೆ. ಅಲ್ಲಿ ಕ್ಯಾನ್ಸರ್ ಇರಬಹುದು ಯಾವುದೇ ರೋಗ ಇರಬಹುದು. ಬಡವರಿಗೆ ಹೆಚ್ಚು ಬರುತ್ತವೆ. ಏಕೆಂದರೆ ಅವರಿಗೆ ತತ್‌ಕ್ಷಣ ತೋರಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಪೂರ್ತಿ ರೋಗ ಉಲ್ಬಣವಾದ ಮೇಲೆ ದವಾಖಾನೆ ಹಾದಿ ಹಿಡಿಯುತ್ತಾರೆ. ಕ್ಯಾನ್ಸರ್‌ಗೆ ಕೂಡ ಬಡವರು ಶ್ರೀಮಂತರು ಎಂದಿಲ್ಲ. ಆದರೆ ಶ್ರೀಮಂತರಿಗಿಂತ ಬಡವರಿಗೆ ಕ್ಯಾನ್ಸರ್ ರೋಗ ಹೆಚ್ಚು ಬರುತ್ತದೆ. ಅದಕ್ಕೆ ಕಾರಣ ಇದೆ. ಇಲ್ಲವೆಂದು ಇಲ್ಲ. ಏಕೆಂದರೆ issue ಗಳ ಸ್ವಲ್ಪ ವೀಕ್ ಇರುತ್ತವೆ. Cancer is caused by virus ಆ ಕ್ರಿಮಿಗಳಿಂದ ಕ್ಯಾನ್ಸರ್ ಅಂದರೆ ಅದು ಜನರಲ್ ಆಸ್ಪತ್ರೆ ಇದ್ದ ಹಾಗೆ. Speciality Hospital ಇದ್ದರೂ ಕೂಡ ನೀವು ಹೋದರೆ ಜನರಲ್ ಆಸ್ಪತ್ರೆಗಿಂತಲೂ ಹೆಚ್ಚು ಜನಸಂದಣಿ ಇರುತ್ತದೆ. ಅಲ್ಲಿ ನೋಡಿದಾಗ ಇದು ಜನರಲ್ ಆಸ್ಪತ್ರೆಯೋ ಅಥವಾ Speciality ಆಸ್ಪತ್ರೆಯೋ ಎಂದು ಸಂಶಯ ಬರುತ್ತದೆ. ಆ ಪ್ರಮಾಣದಲ್ಲಿ ಅಲ್ಲಿ ಜನರು ಇರುತ್ತಾರೆ. ಹಾಗಿದ್ದ ಮೇಲೆ ನಾವು ಎಷ್ಟು ಜಾಗ್ರತೆಯಿಂದ ಅಲ್ಲಿ ಕೆಲಸ ಮಾಡಬೇಕು. ಅಲ್ಲಿ Cancer Drug Foundation ಎಂದು ಇದೆ. ಅದು ಆರೋಗ್ಯ ಸಚಿವರಿಗೆ ಗೊತ್ತು. ಮೊದಮೊದಲು ಅಲ್ಲಿ ಅಷ್ಟು turn over ಇರಲಿಲ್ಲ. ಈಗ 20 ಕೋಟಿ turn over ಇದೆ. Completely loot. ಇದೇನು loot ಮಾಡುವ

ಡಿಪಾರ್ಟ್‌ಮೆಂಟ್ ಆಗಿದೆಯೇ ಅಥವಾ ಜನರಿಗೆ ಸೇವೆ ನೀಡುವಂತಹ ಡಿಪಾರ್ಟ್‌ಮೆಂಟ್ ಆಗಿದೆಯೇ ಎಂದು ನನಗಂತೂ ಅರ್ಥವಾಗುತ್ತಿಲ್ಲ. ಅಲ್ಲಿಗೆ ಸಾವಿರಾರು ಪೇಷೆಂಟ್ಸ್ ಬರುತ್ತಾರೆ. ಮೆಡಿಸಿನ್‌ಗೆ ಎಲ್ಲಾ ಕಡೆ ಟೆಂಡರ್ ಪ್ರೊಸಿಜರ್ ಇದೆ. ಅಲ್ಲಿ ಏಕೆ ಟೆಂಡರ್ ಪ್ರೊಸಿಜರ್ ಇಲ್ಲ. ನೀವು ಇರುವ ಕಾಲಕ್ಕೆ ಅಷ್ಟು turn over ಇತ್ತೋ ನನಗೆ ಗೊತ್ತಿಲ್ಲ. ಅಷ್ಟೊಂದು ಇರಲಿಲ್ಲ. ನಾನು ಇದ್ದಾಗ ಎರಡು ಕೋಟಿ turn over ಇರಲಿಲ್ಲ. ಈಗ 20 ಕೋಟಿ turn over ಇದೆ. ಏಕೆಂದರೆ ಅಲ್ಲಿ specialist ಇರುತ್ತಾರೆ. ತಜ್ಞರು ಇರುತ್ತಾರೆ. ಜನರು ದೊಡ್ಡ ಪ್ರಮಾಣದಲ್ಲಿ ಬರುತ್ತಾರೆ. ಆದರೆ ಅಲ್ಲಿ ಟೆಂಡರ್ ಪ್ರೊಸಿಜರ್ ಇಲ್ಲ. ಕೊಟೇಷನ್ ಸಿಸ್ಟಂ ಅಂತೆ. ಅಲ್ಲಿ Pernicious doctors are persisting in this department and no one is there to care. ಡೈರೆಕ್ಟರ್ ಆರ್‌ಎಂಒ ಇವರೇ ಮಾಡುವವರು. ಆಯಿತು ವಿಧಾನಸೌಧದ ಸಂಪರ್ಕ ಬೆಳೆಸಿರುತ್ತಾರೆ. 20 ಕೋಟಿ ಎಂದು ಹಾಕಿರುತ್ತಾರೆ. ಜೆನರಿಕ್ ಬಗ್ಗೆ ಕೇಳುವುದಕ್ಕೆ ಹೋಗುತ್ತಾರೆ. ಈ ಕೊಟೇಷನ್ ಸಿಸ್ಟಂನಲ್ಲಿ ಉಳಿದ ಹಣದಿಂದಲೇ ವರ್ಷ ಆರವತ್ತು ಲಕ್ಷ ರೂಪಾಯಿಯಷ್ಟು ಬಡ ರೋಗಿಗಳಿಗೆ ಕೊಡುತ್ತಿದ್ದಾರೆ. ನೀವು ಇಲ್ಲಿ ಟೆಂಡರ್ ಮಾಡಿ ಮಾಡಿದರೆ ನೀವು 70% ಹಣ ಉಳಿಸುವುದಕ್ಕೆ ಸಾಧ್ಯವಾಗುತ್ತದೆ. 20 ಕೋಟಿಯಲ್ಲಿ 70% ಹಣ ಉಳಿಸಿದರೆ ಎಷ್ಟು ಮಂದಿ ಬಡವರಿಗೆ ಚಿಕಿತ್ಸೆ ಮಾಡಬಹುದಾಗಿತ್ತು. free treatment ಕೊಡಬಹುದಾಗಿತ್ತಲ್ಲ. ಅಲ್ಲಿ ಬಿಪಿಎಲ್ ಪೇಮೆಂಟ್ಸ್‌ಗೆ ಕೊಡಬಹುದಾಗಿತ್ತು. ನಮಗೆ ನಾಚಿಕೆ ಆಗುವುದಿಲ್ಲವೇ ? BPL patient ಗೆ prescription ಕೊಡುತ್ತೇವೆ. ಕ್ಯಾನ್ಸರ್ ಡ್ರಗ್ಸ್ ಬಹಳ costly drugs. ಒಂದೊಂದು ಇಂಜೆಕ್ಷನ್ ನಾಲ್ಕು ಲಕ್ಷ ರೂಪಾಯಿ ಇರುತ್ತದೆ. ಆದರೆ ಅದನ್ನು ನಮ್ಮ ಆಸ್ಪತ್ರೆಗಳಲ್ಲಿ ಕೊಡುತ್ತಿಲ್ಲ. ಆ ಮಾತು ಬೇರೆ. ಈಗ ನಂತರ Cyclophosphamide ಔಷಧಿ. ನಾನು ವೈದ್ಯನಿದ್ದಾಗ ಅದನ್ನೇ ಕೊಡುತ್ತಿದ್ದೆನು. ಅಂತಹ ಹಳೇ ಡ್ರಗ್ ಅಷ್ಟು costly ಇಲ್ಲ ಮೊದಲು ಲೋಕಲ್‌ನಲ್ಲಿ ಇರಲಿಲ್ಲ. import ಆಗುತ್ತಿತ್ತು. ಈಗ locally it is being manufactured. ಆಗ ಸಹಜವಾಗಿ ಸಾಕಷ್ಟು ಕಡಿಮೆ ದರದಲ್ಲಿ ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಕೂಡ ಕೊಂಡುಕೊಳ್ಳಬೇಕು. ಒಟ್ಟು 5 medicines ನಮ್ಮ ಬಳಿ ಇವೆ. Cyclophosphamide, Vincristine, 5FU ಮತ್ತು Methotrexate, ಆಮೇಲೆ ಇನ್ನೊಂದು

ಬರುತ್ತದೆ. ಇವು ಐದನ್ನಾದರೂ ನೀವು free ಕೊಡುವ ಹಾಗೆ ಮಾಡಿ. ಒಂದು ಕಡೆ ವಾಜಪೇಯಿ ಆರೋಗ್ಯಶ್ರೀ ಪ್ರೋಗ್ರಾಮ್ ಮಾಡಿ ಬಡವರಿಗೆ ಔಷಧ ಕೊಡುತ್ತೀರಿ. ಈ ಪ್ರೋಗ್ರಾಮ್ ಬಗ್ಗೆ ಎಷ್ಟು ಜನರಿಗೆ awareness ಇದೆ ? ನಮ್ಮಲ್ಲಿರುವಂತಹ 70% ಜನ ಮುಗ್ಧರು. ಆದರ ಬಗ್ಗೆ ಯಾರಿಗೆ awareness ಇದೆ. ಅವರು ಅದರ ಪ್ರಯೋಜನ ಪಡೆದುಕೊಳ್ಳುತ್ತಾರ. ಇಲ್ಲದಿರುವವರು ಏನು ಮಾಡಬೇಕು ? ಅವರು ದವಾಖಾನೆಗೆ ಹೋಗುತ್ತಾರೆ. ನಾವು prescription ಕೊಡುತ್ತೇವೆ. ಪ್ರತಿಯೊಬ್ಬರಿಗೂ ವಾಜಪೇಯಿ ಯೋಜನೆಯಲ್ಲಿ ಏಕೆ ಕಳುಹಿಸುತ್ತೀರಿ ? ಇಲ್ಲಿಯೇ ಆಸ್ಪತ್ರೆಯಲ್ಲಿ ಕೊಡಬಹುದಲ್ಲ. ನಾವು. Tomorrow itself you must issue on order. Immediately it should come under tender. ಏಕೆ ನಾವು ಜನರಲ್ ಡಿಪಾರ್ಟ್‌ಮೆಂಟ್‌ನಲ್ಲಿ ಟೆಂಡರ್ ಮಾಡುತ್ತಿಲ್ಲವೇ ? ಬೇಡ, ಆ ಟೆಂಡರ್ ಮಾಡುವುದೇ ಬೇಕಿಲ್ಲ. ಇದೇ ಟೆಂಡರ್ ಉಪಯೋಗ ಮಾಡಿಕೊಂಡು purchase ಮಾಡುವುದಕ್ಕೆ ಬರುವುದಿಲ್ಲವೇ ? ಒಂದು ಸಲ ಸರ್ಕಾರ ಚೇಂಜ್ ಆಯಿತು. ಮೊದಲು ಬೇರೆಯವರು ಇದ್ದರು. ಆಮೇಲೆ ನಾನು ಬಂದೆ. ಡಿಲೇ ಆಯಿತು. ಆಗ ನಾನು ಇದ್ದಾಗ purchase ಮಾಡುವುದಕ್ಕೆ Central Government tender ಉಪಯೋಗ ಮಾಡಿದೆ. You cannot allow the patients to suffer. There is nothing wrong in using the Central Government tender. There is nothing wrong in using the Health Department tender. ಅವರೇ ಮಾಡಬೇಕೆಂದು ಏನಿಲ್ಲ. ಮಾಡಿದರೆ ಒಳ್ಳೆಯದು. ಏಕೆಂದರೆ ಅವರು ವಿಶಿಷ್ಟವಾದ ಮಾಡಿದಂತಹ ಮೆಡಿಸಿನ್ಸ್ ಇರುತ್ತದೆ. ಆದರೆ ಎಲ್ಲಾ ಮಾಡವುದಕ್ಕೆ ಆಗುವುದಿಲ್ಲ. arrange ಮಾಡುವುದಕ್ಕಾಗವುದಿಲ್ಲ. ಆದರೆ ಇವರು ಮಾಡಬಹುದು. ಏಕೆ ಮಾಡುವುದಿಲ್ಲ. ಕಾರಣವೇನು ? what is the difficulty ? ನಿಮ್ಮ Health Secretary ಯವರು ನಾನು ಯಾರನ್ನು ಟೀಕೆ ಮಾಡುವುದಿಲ್ಲ. ಅದು ಕೆಟ್ಟದೆನಿಸುತ್ತದೆ. ಇಲಾಖೆಗಳನ್ನು ಸುಧಾರಿಸಬೇಕಾದರೆ ಮಂತ್ರಿಗಳು ಏಕೆ ಬೇಕಾಗುತ್ತದೆ. ? Bureaucracy ಬಗ್ಗೆ ನನ್ನದು ಒಂದು ದೊಡ್ಡ complaint ಇದೆ. ಈ ದೇಶದ ಕಷ್ಟಕ್ಕೆ bureaucracy ಯೇ ಕಾರಣವಾಗಿದೆ. Failure of administration in this country is the failure of bureaucracy. ಪ್ರತಿಯೊಂದು ಸಚಿವರು public representatives we give

direction, we give programme, we give money. This House sanctions money. This House sanctions programme and we give to the improvement. ನಾನು ಹೇಳುವುದೇನೆಂದರೆ, ಒಬ್ಬ PDO ಇವತ್ತಿಗೂ ಫೋನ್ ಎತ್ತುವುದಿಲ್ಲ. ಇವನೊಬ್ಬನೇ ಅಲ್ಲ, ಎಲ್ಲರೂ ಹಾಗೆ ಮಾಡುತ್ತಾರೆ. ಇಲ್ಲಿ ಚರ್ಚೆಯಾಗಿದ್ದಾಗ ಶ್ರೀಮತಿ ಶೋಧ ಕರಂದ್ಲಾಜೆಯವರು RDPR Minister ಆಗಿದ್ದಾಗ. ಇವರು ಒಂದು ಉತ್ತಮವಾದಂಥ decision ತೆಗೆದುಕೊಂಡರು. ಅದು ಏನೆಂದರೆ, ಆಗ ಇನ್ನು PDO ಗಳು ಇರಲಿಲ್ಲ. ಸೆಕ್ರೆಟರಿಗಳು ಇದ್ದರು. ಅವರಿಗೆ ಫೋನ್ ಮಾಡಿ ಎಂದು ಹೇಳಿದಾಗ, ಎಲ್ಲರಿಗೂ ಫೋನ್ ಕೊಟ್ಟರು. ಆದರೂ ಕೂಡ ಆವರು ನಮ್ಮ ಫೋನ್‌ಗಳನ್ನು ತೆಗೆದುಕೊಳ್ಳುವುದಿಲ್ಲ. ಆದರೆ ಈಗ ನಾನು ಫೋನ್ ಮಾಡಿದೇನೆಂದರೆ, ನಿಮ್ಮ PDO ಗಳಿಗೆ ಹೇಳಿ ಸೆಕ್ರೆಟರಿಗಳು ಇದ್ದರು. ಅವರಿಗೆ ಫೋನ್ ಕೊಡಿ ಎಂದು ಹೇಳಿದಾಗ, ಎಲ್ಲರಿಗೂ ಫೋನ್ ಕೊಟ್ಟರು. ಆದರೂ ಕೂಡ ಅವರು ನಮ್ಮ ಫೋನ್‌ಗಳನ್ನು ತೆಗೆದುಕೊಳ್ಳುವುದಿಲ್ಲ. ಆದರೆ ಈಗ ನಾನು ಫೋನ್ ಮಾಡಿದೆನೆಂದರೆ. ನಿಮ್ಮ PDO ಗಳಿಗೆ ಹೇಳಿ ಎಂದು ಕೇಳಿದರೆ, ತತ್ ತಕ್ಷಣ ಫೋನ್ ಕಟ್ ಮಾಡುತ್ತಾರೆ. ಇದು ಏಕೆ ? Confidential Report ಬರೆಯುವಂಥ ಅಧಿಕಾರ ಅವರಿಗೆ ಇರುತ್ತದೆ. Constitution 'People are the sovereign' ಎಂದು ಹೇಳುತ್ತದೆ. But most of the officers themselves require education ಇದಕ್ಕೆ ನಾನು Health Minister ಆಗಿದ್ದಾಗ ಈ ರೀತಿ ಆಯಿತು. Constitution ಏನೆಂದು ಹೇಳುತ್ತದೆ ? We the people of India, i.e., Bhatath give ourselves to this Constitution. Amongst many things the soveriegnty vest with the people' ಎಂದು ಹೇಳುತ್ತಾರೆ. ಜನರು ಸಾರ್ವಭೌಮರೆಂದು ಹೇಳುತ್ತಾರೆ. ಇವರು ಸಾರ್ವಭೌಮರೆಂದ ಮೇಲೆ ಜನರಲ್ಲಿ involvement ಎಲ್ಲಿಂದ ಬರುತ್ತಿದೆ ? ಎಲ್ಲಿಗೆ ಬರುತ್ತಿದೆಯೆಂದರೆ, through their chosen representatives, they administer themselves. ಅಂದರೆ ಪ್ರತಿಯೊಂದಕ್ಕು ಜನ ಪ್ರತಿನಿಧಿಗಳೇ ಪ್ರಮುಖರೆಂದು ಅರ್ಥ. ಅದರೆ ಅಧಿಕಾರಿಗಳು ಉಲ್ಟಾ with supplication we have to go to them. Constitution has never given power to the officers. Constitution has given

powerto the Cabinet. It is never mentioned that bureaucracy is entrusted with this and that. It is the cabinet which has all powers. Whatever power is exercised by the officers, it is a delegated power. For the administrative convenience. The Cabinet delegates power to the officers. ಅನೇಕ ಕಡೆ ಸುಪ್ರೀಂ ಕೋರ್ಟ್ ರೂಲಿಂಗ್ ಇದೆ. ಒಬ್ಬ peon ಅನ್ನು dismiss ಮಾಡಬೇಕೆಂದರೆ, officer dismiss ಮಾಡಿದರೆ ಅದನ್ನು restore ಮಾಡಿದ್ದಾರೆ. The Government appoints and the Government only can dismiss Government means Cabinet or officers. Yes officers can also exercise provided the Cabinet delegates power or concerned minister delegates power to the bureaucracy. ಆದರೆ ಇವತ್ತು ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂದರೆ, ಸಾರ್, ಸಾರ್ ಎಂದು Officers supplication ಮಾಡಬೇಕು. MLA ಹತ್ತಿರ ಸಾರ್, ಸಾರ್ ಎಂದು ಆಫೀಸರ್‌ಗಳ ಬೆನ್ನು ಹತ್ತುತ್ತಾರೆ. ಈ ರೀತಿ ಪರಿಸ್ಥಿತಿಯಾಗಿದೆ. ಇದು ಏಕೆ ? ನಾವು ನಮ್ಮ ನಮ್ಮದರಲ್ಲಿ ನಾವಿರುತ್ತೇವೆ. ಅವರು ಆವರದಲ್ಲಿ ಅವರಿರುತ್ತಾರೆ. This is principle, MLAs are also very important. Because, it is they, who give existence to the Cabinet. Whether the MLAs of this side or that side ಆ principle ಇಲ್ಲ ಮತ್ತೆ ನಾವು ಜೀ ಹುಜೂರ್ ಎಂದು ಹೋಗಬೇಕು. ಆ ವ್ಯವಸ್ಥೆ ಯಾವಾಗ ಸರಿಯಾಗುತ್ತದೆಂಬುದು ನನಗೆ ಅರ್ಥವಾಗುತ್ತಿಲ್ಲ. ಇಲ್ಲದಿದ್ದರೆ ಈ ಪರಿಸ್ಥಿತಿ ಹೀಗೆ ಇಲ್ಲಿ ಆಗುತ್ತಿರಲಿಲ್ಲ. ಮಾನ್ಯ ಸಚಿವರೆ, 20 ಕೋಟಿ ರೂ.ಗಳ turn over ಆಗುತ್ತದೆ. ಇವರು ತೆಗೆದುಕೊಳ್ಳುತ್ತಾರೆ, ಈ quotation ನಲ್ಲಿ ದ್ರೋಹವಾಗುತ್ತದೆಂಬುದು ನನಗೆ ಗೊತ್ತಿದೆ. ಇದರಲ್ಲಿ ಏನು ಮಾಡುತ್ತಾರೆಂದರೆ, ಈಗ ನಾನು ಒಬ್ಬ ವ್ಯಾಪಾರಿ ಎಂದು ತಿಳಿದುಕೊಳ್ಳಿ, ನಾನು ಮೂರ್‍ನಾಕು fake ಕಂಪನಿಗಳನ್ನು float ಮಾಡುತ್ತೇನೆ, register ಮಾಡುತ್ತೇನೆ. ನಾಳೆ ದಿವಸ ಆ ಮೂರು ಕಂಪನಿಗಳಿಂದಲೂ quotations ಬರುತ್ತದೆ. ಅದು ಒಂದು ಕಂಪನಿಯಿಂದ 2,000 ರೂ.ಗಳ quotation ಇನ್ನೊಂದು ಕಂಪನಿಯಿಂದ 3.000 ರೂ.ಗಳ quotation, ಮತ್ತೊಂದು ಕಂಪನಿಯಿಂದ 1,000 ರೂ.ಗಳ quotation ಇರುತ್ತದೆ. ಅದರ ಕಿಮ್ಮತ್ತು

ಎಷ್ಟಿರುತ್ತದೆಂದರೆ 500 ರೂ.ಗಳು ಈ ರೀತಿ 3,000, 2000, 1,000 ಎಂದ ಏಕೆ ಮಾಡಿದಿರಿ ? ಇದರಲ್ಲಿ 1,000 ರೂ.ಗಳ quotation ಅನ್ನು clear ಮಾಡಿ ಎಂದು ಹೇಳುತ್ತೇವೆ. ಅದು 500 ರೂ.ಗಳಾದ್ದಾಗಿರುತ್ತದೆ. ಈ ರೀತಿ quotation ಆಗುವಂಥದ್ದು, ಅದು ಕಿದ್ವಾಯಿಯಲ್ಲಿ ಮೋಸವಾಗುವಂಥದ್ದು. ಇದು ಬಡವರು ಕೊಂಡುಕೊಳ್ಳುವುದಕ್ಕೆ ಕೊಡುತ್ತೀರಾ ? Tender ಮಾಡಿ, ನಾನೇನು ಪ್ರಪೋಸಲ್ ಇಟ್ಟಿದ್ದೇವೆ. free medicine ಕೊಡಿ. ಎಲ್ಲವೂ ಬೇಡ, ಕೆಲವು costly ಇದೆ. ಅದು ಬೇಡ. Atleast 70% of the cancer patients should be treated with these tablets only. 5–10 ವರ್ಷದವರೆಗೆಅವರ ಜೀವನ ಇರುತ್ತದೆ. ಕುಟುಂಬವಿರುತ್ತದೆ. ಬಡವರು ಉದ್ಧಾರವಾಗುತ್ತದೆ. Medical Secretary transfer ಆಗಿದ್ದಾರೆ. ಅವರು ಬಹಳ ತಪ್ಪು ಮಾಡುತ್ತಾರೆಂದು ಕ್ಯಾಬಿನೆಟ್‌ನಲ್ಲಿ ಒಂದು ನಿರ್ಣಯ ಮಾಡಿ ಎಂದು ಹೇಳಿದರೆ, ಯಾರ ಮೇಲಾದರೂ ಕ್ರಮ ತೆಗೆದುಕೊಳ್ಳಬೇಕೆಂದರೆ ಈ ಬಿ.ಜೆ.ಪಿ. ಸರ್ಕಾರದಲ್ಲಿ ಪ್ರಭಾವಿಗಳ ಕೆಲಸಗಳು ಬಹಳ ನಡೆಯುತ್ತಿವೆ. ಆ ರೀತಿ system ಅನ್ನು ಕೆಡಿಸಬಾರದು. ಇದು ಒಳ್ಳೆಯದಲ್ಲ. ನಾನಂತೂ ಮಾಡಿಲ್ಲ. ನಾನು ಮಾನ್ಯ ದೇವರಾಜ ಅರಸುರವರ ಕಾಲದಿಂದಲೂ ಶಾಸಕನಾಗಿ, ಸಚಿವನಾಗಿ ಕೆಲಸ ಮಾಡಿದ್ದೇನೆ. ಈ ರೀತಿ ಜನಗಳಿಗೆ ಬೇಕು ಎಂದು ಕೊಡುತ್ತಾರೆ, ಬೇಡವೆಂದರೆ ಬಿಡುತ್ತಾರೆ. ಇದನ್ನು ಖಂಡನೆ ಮಾಡುತ್ತೇನೆ. ಜನರು ಅಧಿಕಾರ ಕೊಟ್ಟರೆಂದು ಮನಸ್ಸು ಬಂದ ಹಾಗೆ ಮಾಡುವುದಿಲ್ಲ. ನಮಗೆ ಬಡವರು ಮತವನ್ನು ಕೊಟ್ಟಿಲ್ಲವೇ ? ಇವರು ನಮಗೆ ಹಕ್ಕು ಇದೆಯೆಂದು voters ನಮಗೆ vote ಕೊಟ್ಟಿಲ್ಲವೇ ? ನಾವು ಹೇಗೆ ಬಂದಿರುವುದು. ಇಲ್ಲಿ ಈ ರೀತಿ ತಾರತಮ್ಯ ಏಕೆ ಮಾಡುತ್ತೀರೆಂಬುದು ಅರ್ಥವಾಗುತ್ತಿಲ್ಲ. ನನಗೆ ಪಕ್ಕದಲ್ಲಿರುವವರಿಗೆ 20–30 ಓಟು ಕೊಡುತ್ತಾರೆ. ನನಗೆ ಏನೂ ಕೊಡುವುದಿಲ್ಲ. ನಾನು ಒಂದು ಸಾರಿ ಫೋನ್ ಮಾಡಿ ಹೇಳುತ್ತೇನೆ, ಇಲ್ಲವೆಂದರೆ ಲೆಟರ್ ಬರೆಯುತ್ತೇನೆ. ನಾವು ಸಣ್ಣ ಮಕ್ಕಳ ಹಾಗೆ ರೂಮ್ ರೂಮ್‌ಗಳಿಗೆ ಅಡ್ಡಾಡುವುದಕ್ಕೆ ಆಗುತ್ತದೆಯೇ ? is it dignified ? You declare the MLA. No it is your responsibility to take care of the people, to take care of the state. ಮಾಮೂಲಿ ಎಂಎಲ್‌ಎ ಆ ತರಹ ಮಾಡುವುದಕ್ಕಾಗುವುದಿಲ್ಲ. But you are responsible for the entire state. Everybody should participate in the declare

here. ನಮ್ಮನ್ನು ಬಿಡಿ, ಮುತ್ಸದ್ದಿಯಿಂದ ಕೆಲಸ ಮಾಡಿ, 28%, 40% ಹೆಚ್ಚಿಗೆ ಕೊಡಿ ಬೇಡವೆಂದು ಹೇಳುವುದಿಲ್ಲ. ಅದು ಶೇ. 100, ಶೇ. 200 ಮಾಡುವುದಾ ? ಒಂದು ಕಡೆ 200% ವ್ಯತ್ಯಾಸ ಬಂದಿದೆ. ಆ ರೀತಿ ಆಗಬಾರದು, ಅದು ಒಳ್ಳೆಯದಲ್ಲ. ಸಚಿವನಾಗಿದ್ದಾಗ ನಾನಂತೂ ಹಾಗೆ ಮಾಡುವುದಕ್ಕೆ ಹೋಗಿಲ್ಲ. ನಮ್ಮ ಕಾಂಗ್ರೆಸ್ ಎಂ.ಎಲ್.ಎ.ಗಳಿಗೆ Primary Health Centre ಕೊಟ್ಟಿದ್ದರೆ, ಎರಡರಲ್ಲಿ ಉಳಿದವರಿಗೂ ಒಂದು ಕೊಟ್ಟಿದ್ದೇನೆ. ನಾನು ಎರಡು ಬಾರಿ ಆರೋಗ್ಯ ಸಚಿವನಾಗಿ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು oppose ಮಾಡಿದರೂ ಕೂಡ ನಾನು ಮಾತ್ರ ಮಾನ್ಯ ಮುಖ್ಯಮಂತ್ರಿಯವರಿಗೆ convince ಮಾಡಿ opposition ಎಂ.ಎಲ್.ಎ. ಆಗಿದ್ದರೂ ಅವರಿಗೆ ಕೊಡಿಸಿದ್ದೇನೆ. 25 ಜನಸಂಖ್ಯೆಗೆ Primary Health Centre ಇರಬೇಕು. ಆದರೆ ಅಲ್ಲಿ ಇರಲಿಲ್ಲ. ಅದಕ್ಕಾಗಿ ನಾವು ಮುತ್ಸದ್ದಿಯಿಂದ ಕೆಲಸ ಮಾಡಬೇಕಾಗುತ್ತದೆ. 5 ಡ್ರಗ್ಸ್‌ಗಳನ್ನು ಫ್ರೀಯಾಗಿ ಕೊಡಬೇಕು.

**ಉಪಾಧ್ಯಕ್ಷರು** :– ಮಾನ್ಯ ಮಾಲಕರೆಡ್ಡಿಯವರೆ ಒಂದು ನಿಮಿಷ, ತಾವು ವಿಷಯದ ಬಗ್ಗೆ ಒಳ್ಳೆಯ ಬೆಳಕನ್ನು ಚೆಲ್ಲುತ್ತಿದ್ದೀರಿ. ಇನ್ನೊಂದು ಸಮಸ್ಯೆ ಏನಾಗುತ್ತಿದೆಯೆಂದರೆ, ಕ್ಯಾನ್ಸರ್ ಬಗ್ಗೆ ನಮ್ಮ ಎಲ್ಲಾ ಎಂ.ಎಲ್.ಎ.ಗಳಿಗೆ ಅನುಭವವಿದೆ. ಕ್ಯಾನ್ಸರ್ ಪೀಡಿತರಿರಬಹುದು. ಹೃದಯಕ್ಕೆ ಸಂಬಂಧಪಟ್ಟ ಶಸ್ತ್ರಚಿಕಿತ್ಸೆ ಇರಬಹುದು. ಇಂಥ ಎಲ್ಲವೂ BPL Card holders ಗೆ ಮಾತ್ರ ಯಾವುದೇ ಪರಿಹಾರದ ರೀತಿಯಲ್ಲಿ ಮುಖ್ಯಮಂತ್ರಿಯವರ ನಿಧಿಯಿಂದ ಸಿಗುತ್ತದೆ. ಅದರೆ ಬಡತನ ಮತ್ತು ಮಧ್ಯಮ ವರ್ಗದವರ ಗತಿ ಏನು ? ಇವರು ಯಾವ ರೀತಿಯಲ್ಲಿ ತೊಂದರೆಗೆ ಒಳಗಾಗುತ್ತಾರೆಂದರೆ. ಮುಂಗಡ ಪತ್ರವನ್ನು ಸಹ ಅಡವಿಡವಂಥ ದುಃಸ್ಥಿತಿ ಇದೆ. ಇಂಥ ಒಂದು ದುಃಸ್ಥಿತಿಯಲ್ಲಿ ಇವರು ನಮ್ಮ ಹತ್ತಿರ ಕಣ್ಣೀರು ಹಾಕಿಕೊಂಡು ಬರುವಂಥ ಸ್ಥಿತಿಯಲ್ಲಿ. ನಾನು ರಾಜ್ಯ ಸರ್ಕಾರವನ್ನು ವಿನಂತಿ ಮಾಡುತ್ತಿರುವಂಥದ್ದು, ಪ್ರಭಾವಿಗಳಾದಂಥ ಮಾಜಿ ಮುಖ್ಯಮಂತ್ರಿಯವರಾದಂಥ ಮಾನ್ಯ ಯಡಿಯೂರಪ್ಪನವರಂಥವರು ಇಲ್ಲಿ ಇದ್ದಾರೆ. ಇಡೀ ರಾಜ್ಯದ 5 ಕೋಟಿ ಜನರಿಗೆ ಆರೋಗ್ಯ ವಿಮೆ ತರುವಂಥ ನಿಟ್ಟಿನಲ್ಲಿ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ರೈತರಿಗೆ ಯಾವ ರೀತಿ ಪರಿಹಾರಧನವನ್ನು ಕೊಟ್ಟಿರೋ ಅಂಥಹುದೇ ದೃಢವಾದ ಹೆಜ್ಜೆಯನ್ನು ಈ ವಿಷಯದಲ್ಲೂ ಇಡಬೇಕು. ತಮಿಳುನಾಡು, ಮಹಾರಾಷ್ಟ್ರ, ಆಂಧ್ರ ಪ್ರದೇಶ ಮುಂತಾದ ಬೇರೆ ಬೇರೆ ರಾಜ್ಯಗಳಲ್ಲಿ ಯೋಜನೆಗಳು ಯೋಜನೆಗಳಾಗುತ್ತಿವೆ. ಆರೋಗ್ಯ ಸಚಿವರು ಮತ್ತು ತಾವೆಲ್ಲ

ದಯವಿಟ್ಟು ಇದರ ಬಗ್ಗೆ ಖಂಡಿತವಾಗಿ ಯೋಚಿಸಬೇಕೆನ್ನುವುದು ನನ್ನ ಕಳಕಳಿಯ ವಿನಂತಿ.

**ಡಾ॥ ಎ.ಬಿ. ಮಾಲಕರೆಡ್ಡಿ :** – ತಮ್ಮ ಸೂಚನೆಯನ್ನು ನಾನು ಒಪ್ಪುತ್ತೇನೆ. ಅದಕ್ಕೆ ಪರಿಹಾರವಿದೆ. ನಾನು ನಿಸ್ಸಹಾಯಕರಾಗುವ ಅವಶ್ಯಕತೆಯಿಲ್ಲ.

**ಶ್ರೀ ನೆ.ಲ. ನರೇಂದ್ರಬಾಬು :** – ಡಾಕ್ಟರೇ ನೀವು ಒಳ್ಳೆಯ ವಿಚಾರವನ್ನು ಹೇಳುತ್ತಿದ್ದೀರಿ. ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಜನಸಾಮಾನ್ಯರಿಗೆ, ಮಧ್ಯಮ ವರ್ಷದವರಿಗೆ ಖಾಯಿಲೆ ಬಂದಾಗ ಎ.ಪಿ.ಎಲ್., ಬಿ.ಪಿ.ಎಲ್. ಎನ್ನುವುದು ನಿಜವಾಗಲೂ ನರಕಯಾತನೆ. ಅದನ್ನು ದಯವಿಟ್ಟು ತೆಗೆದುಹಾಕಿ.

**ಶ್ರೀ ಬಿ. ರಮಾನಾಥ ರೈ :** – ಉತ್ತರ ಕರ್ನಾಟಕ ಭಾಗದಲ್ಲಿ ಎ.ಪಿ.ಎಲ್., ಬಿ.ಪಿ.ಎಲ್ ಆಗಿ ಬಿ.ಪಿ.ಎಲ್., ಎ.ಪಿ.ಎಲ್ ಆಗಿ ವ್ಯತ್ಯಾಸವಾಗಿದೆ. ಎ.ಪಿ.ಎಲ್. ಇದ್ದವರದು ಬಿ.ಪಿ.ಎಲ್. ಆಗಿದೆ. ಬಿ.ಪಿ.ಎಲ್. ಇದ್ದವರದು ಎ.ಪಿ.ಎಲ್. ಆಗಿದೆ. ಬಡ ಎ.ಪಿ.ಎಲ್. ಕಾರ್ಡುದಾರರಿಗೆ ಯಾವ ಸವಲತ್ತೂ ಇಲ್ಲ. ಅವನಿಗೆ ರೋಗ ಬಂದಾಗ ಅದನ್ನು ಗುಣಪಡಿಸುವಂಥ ವ್ಯವಸ್ಥೆಯಿಲ್ಲ. ಕಾರಣಾಂತರದಿಂದ ಅವರು ಎ.ಪಿ.ಎಲ್. ಕಾರ್ಡ್ ಪಡೆದಿರುತ್ತಾರೆ.

**ಶ್ರೀ ಬಂಡೆಪ್ಪ ಕಾಶೆಂಪೂರ್ :** – ಮುಖ್ಯಮಂತ್ರಿಗಳು ತಮ್ಮ ನಿಧಿಯಿಂದ ಕೊಟ್ಟರೂ, ಅಧಿಕಾರಿಗಳು ನೂರೆಂಟು ಕ್ವೈರಿಗಳನ್ನು ಹಾಕಿ ಮೂರು ತಿಂಗಳಾದರೂ ಹಣವನ್ನು ಬಿಡುಗಡೆ ಮಾಡುವುದಿಲ್ಲ. ಇಂಥ ಕಾಲವನ್ನು ನಾವು ಹಿಂದೆ ಎಂದೂ ನೋಡಿರಲಿಲ್ಲ. ಬಿ.ಪಿ.ಎಲ್. ಕಾರ್ಡ್ ಇನ್‌ಕಂ ಸರ್ಟಿಫಿಕೇಟ್, ಆ ಸರ್ಟಿಫಿಕೇಟ್, ಈ ಸರ್ಟಿಫಿಕೇಟ್ ಎಂದು ಸಿಕ್ಕಾಪಟ್ಟೆ ದಾಖಲೆಗಳನ್ನು ಕೇಳುತ್ತಾರೆ. ಎಷ್ಟು ಸೈನ್ ಹಾಕಿದ್ದು ಇದೆ. ಅವುಗಳಲ್ಲಿ ಎಷ್ಟು ವಾಪಸ್ಸು ಬರುತ್ತಿದೆ ಎನ್ನುವುದನ್ನು ತಾವು ತರಿಸಿಕೊಂಡು ನೋಡಿ. ಅಷ್ಟರಲ್ಲಿ ಎಷ್ಟೋ ಪೇಷೆಂಟ್ಸ್ ಸತ್ತಿರುತ್ತಾರೆ. ಕೊಲಂಬಿಯ ಏಷ್ಯಾ ಆಸ್ಪತ್ರೆಗೆ ದಾಖಲಾಗಿದ್ದ ಪೇಷೆಂಟ್‌ಗೆ ತಿರುಗಾಡಿ ನಮಗೆ ಸಾಕಾಗಿದೆ. ಎಷ್ಟೊಂದು ಪೇಪರ್ಸ್ ಕೇಳುತ್ತಿದ್ದಾರೆ ಎಂದು ಆ ಹೆಣ್ಣುಮಗಳು ಅಳುತ್ತಿದ್ದಾಳೆ. ಸನ್ಮಾನ್ಯ ಯಡಿಯೂರಪ್ಪನವರೇ, ತಮ್ಮ ಲೆಟರ್ ಮೇಲೆ ರೆಕಮೆಂಡ್ ಮಾಡಿದ್ದು ಇದು. ಸಂಬಂಧಪಟ್ಟ ಅಧಿಕಾರಿಗಳಿಗೆ ತಾವು ತಕ್ಷಣ ಹೇಳಿ. ಹಿಂದುಗಡೆ ಕುಳಿತಾದ್ದರಲ್ಲ (ಯಡಿಯೂರಪ್ಪನವರು), ಅವರು ಹೇಳಿದರೆ ಮುಗಿದೇ ಹೋಗುತ್ತದೆ. ಒಂದು ಮೌಖಿಕ ಆದೇಶ ಕೊಟ್ಟುಬಿಡಿ. ಸಂಬಂಧಪಟ್ಟ ಗವರ್ನಮೆಂಟ್ ಡಾಕ್ಟರ್ ಅದಕ್ಕೆ ಎಸ್ಟಿಮೇಟ್ ಕೊಡುತ್ತಾರೆ. ಆ ಎಸ್ಟಿಮೇಟ್ ಮತ್ತು ಶಾಸಕರ ಲೆಟರ್ ಅಷ್ಟೇ ಸಾಕು. ಅದರ ಮೇಲೆ ನೀವು

ಕೇಳುವ ಲೆಟರ್, ದಾಖಲೆಗಳನ್ನು ಎಲ್ಲಿಂದ ತರಬೇಕು ? ಅವುಗಳನ್ನು ತರಬೇಕೆಂದರೆ ಪೇಷೆಂಟ್ ಕಥೆ ಮುಗಿಯುತ್ತದೆ.

**ಶ್ರೀ ಆರ್. ರೋಷನ್ ಬೇಗ್ :** – ಕಿದ್ವಾಯಿಗೆ ದಾಖಲಾಗಿರುವ ಒಬ್ಬ ಬಡ ಪೇಷೆಂಟ್ 15 ಸಾವಿರ ರೂಪಾಯಿ ಕೊಡಿ ಎಂದು ಕೇಳುತ್ತಿದ್ದಾರೆ. ಏಕೆಂದರೆ ಅವನಿಗೆ ಕ್ಯಾನ್ಸರ್ ಇದ್ದು ಅದಕ್ಕೆ ಕೀಮೋಥೆರಪಿ ಮಾಡಬೇಕು. ಒಂದು ಕೋರ್ಸ್ ಕಿಮೋಥೆರಪಿಗೆ 15 ಸಾವಿರ ರೂಪಾಯಿ. ನಾನು ಅವರು ಇವರನ್ನು ಸೇರಿಸಿಕೊಂಡು ಅವನಿಗೆ sponsor ಮಾಡುತ್ತಿದ್ದೇನೆ. This is the plight of a common man in the KIDWAI Hospital.

**ಉಪಾಧ್ಯಕ್ಷರು :** – ಡಾಕ್ಟರೇ, ತಾವು ಇದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಬೇಕು.

(ಈ ಹಂತದಲ್ಲಿ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

**ಡಾ॥ ಎ.ಬಿ. ಮಾಲಕರೆಡ್ಡಿ :** – ನಾವು ನಿಸ್ಸಹಾಯಕರಾಗುವುದು ಬೇಕಾಗಿಲ್ಲ. ಎಲ್ಲ ಬಡವರಿಗೆ ತೃಪ್ತಿಕರವಾದ ರೀತಿಯಲ್ಲಿ ನಾವು ಚಿಕಿತ್ಸೆಯನ್ನು ಕೊಡಬಹುದು. ಅದಕ್ಕೇ, ನಾನು ಎರಡನೇ ಬಾರಿ ಸಚಿವನಾಗಿದ್ದಾಗ 'ಯಶಸ್ವಿನಿ' ಕಾರ್ಯಕ್ರಮವನ್ನು ಇಂಟ್ರೊಡ್ಯೂಸ್ ಮಾಡಿದ್ದು ಇದೇ ಉದ್ದೇಶದಿಂದಲೇ. ಏಕೆಂದರೆ ನಾನು ಒಬ್ಬ ವೈದ್ಯನಾಗಿದ್ದೆ. Chronic Kidney Disease ಬಂತೆಂದರೆ ಅದಕ್ಕೆ ವರ್ಷಾನುಗಟ್ಟಲೆ ಟ್ರೀಟ್‌ಮೆಂಟ್ ಮಾಡಬೇಕಾಗುತ್ತದೆ. ಅದು ಬಹಳ ಕಾಸ್ಟ್ಲಿ. ಅದೇ ರೀತಿ ಕ್ಯಾನ್ಸರ್. ಇದಕ್ಕೂ ವರ್ಷಾನುಗಟ್ಟಲೆ ಟ್ರೀಟ್‌ಮೆಂಟ್ ನಡೆಯುತ್ತದೆ. ಡಯಾಬಿಟೀಸ್, ಇದಕ್ಕೂ ವರ್ಷಾನುಗಟ್ಟಲೆ ಟ್ರೀಟ್‌ಮೆಂಟ್ ನಡೆಯುತ್ತದೆ. ಇವೆಲ್ಲವೂ chronic diseases. ಇವುಗಳು ಬಂದರೆ ಬಡವರ ಬಳಿ ಹಣವಿರುವುದಿಲ್ಲ. ಅಂಥವರಿಗೆ ಟ್ರೀಟ್‌ಮೆಂಟ್ ಕೊಡಲೆಂದೇ ನಮ್ಮಲ್ಲಿ ಎರಡು ಕಾನ್ಸೆಪ್ಟ್ ಇದ್ದವು. ಒಂದು 'ಯಶಸ್ವಿನಿ' ಕಾರ್ಯಕ್ರಮ. ಅದು ಆಯಿತು. ನಾವು ಸಜೆಸ್ಟ್ ಮಾಡಿದ ಇನ್ನೊಂದು ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರು. ಆದರೆ ಅದನ್ನು follow-up ಮಾಡಲಿಲ್ಲ. ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು Corporation ಮಾಡಿ ಅದಕ್ಕೆ 500 ಕೋಟಿ ರೂಪಾಯಿಗಳನ್ನು ಇಡಬೇಕು. 500 ಕೋಟಿಯೇನೂ ದೊಡ್ಡದಲ್ಲ. ಅದರಿಂದ ಬರತಕ್ಕಂಥ ಬಡ್ಡಿಯಿಂದಲೇ ಈ ಎಲ್ಲಾ chronic ರೋಗಗಳಿಗೆ ಚಿಕಿತ್ಸೆಯನ್ನು ಮಾಡಬಹುದು. ಒಂದು ಆಪರೇಷನ್ ಮಾಡಬೇಕೆಂದರೆ ಕನಿಷ್ಠ ಡೇಢ್ (ಒಂದೂವರೆ) ಲಕ್ಷ ರೂಪಾಯಿಗಳೂ ಬೇಕು. ಎರಡು ಲಕ್ಷ ಬೇಕಾಗುತ್ತದೆ. ಅದರೆ ಮಿನಿಮಂ ಡೇಢ್ ಲಕ್ಷವಾದರೂ ಬೇಕು. ಬಡವರು ಅದನ್ನು ಎಲ್ಲಿಂದ

ತರುತ್ತಾರೆ. ಗ್ರೂಫ್-ಸಿ ಮತ್ತು ಗ್ರೂಪ್-ಡಿ ನೌಕರರಿಗೆ ಕೂಡ ಆದರಿಂದ free treatment ಆಗತಕ್ಕಂಥ ವ್ಯವಸ್ಥೆಯಾಗಬೇಕು. ಅವರು ಎರಡು ಲಕ್ಷ ರೂಪಾಯಿ ಕೊಟ್ಟು ಯಾರು ಚಿಕಿತ್ಸೆ ಮಾಡಿಸಿಕೊಳ್ಳಲು ಅಗುತ್ತದೆಯೇ ನೀವೇ ಹೇಳಿ. ಏಕೆಂದರೆ, ಅವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕು. ಅವರ ಸಂಸಾರದ ನಿರ್ವಹಣೆಯಾಗಬೇಕು. ಇಂಥ costly treatment ಬಂದಾಗ ಅವರು ಯಾವ ರೀತಿ ನಿರ್ವಹಣೆ ಮಾಡಬೇಕು ? ಅದಕ್ಕೆ ಒಂದು corporation ಮಾಡಿ, ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿಯೇ ಆ corporation ಅನ್ನು ಇಟ್ಟುಕೊಂಡು operate ಆಗುತ್ತದೆ ಎಂದರೆ ಅದಕ್ಕೆ ಹಣ ಕೊಡಲು corporate houses ಇವೆ. ಮುಖ್ಯಮಂತ್ರಿ ಮನಸ್ಸು ಮಾಡಿದರೆ ಒಂದು ತಿಂಗಳಲ್ಲಿಯೇ 500 ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಬಹುದು. ಆಂಧ್ರದಲ್ಲಿ ರಾಜಶೇಖರರೆಡ್ಡಿಯವರು ಮಾಡಿದ್ದು ಅದನ್ನೇ. ಅವರು ವಯಸ್ಸಿನಿಂದ ಸಣ್ಣವರಾದರೂ ಎಂಥೆಂಥ ಯೋಜನೆಗಳನ್ನು ಮಾಡಿದರು. 43 ಸಾವಿರ ಕೋಟಿ ರೂಪಾಯಿಗಳ Irriagation project ಗಳನ್ನು ಆತ ಕಂಪ್ಲೀಟ್ ಮಾಡಿದ್ದಾರೆ. ಇದೇನು ದಂತಕಥೆಯಲ್ಲ, ವಸ್ತುಸ್ಥಿತಿ. ಬಡವರಿಗೆ free treatment ಕೊಟ್ಟರು. ಮತ್ತೊಂದು ವಿಷಯವನ್ನು ಹೇಳಿದರು. ಬಡವರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಟ್ರೀಟ್‌ಮೆಂಟ್ ಮಾಡುವುದು ಬೇಕಾಗಿಲ್ಲ. ಕಾರ್ಪೊರೇಟ್ ಆಸ್ಪತ್ರೆಗಳಲ್ಲೇ ನೀವು ಟ್ರೀಟ್‌ಮೆಂಟ್ ಮಾಡಿಕೊಳ್ಳಿ. ಅದಕ್ಕೆ ನಾವು ರೊಕ್ಕ ತುಂಬುತ್ತೇವೆ ಎಂದು ಹೇಳಿದರು.

**ಶ್ರೀ ಬಂಡೆಪ್ಪ ಕಾಶೆಂಪೂರ್** : - ಆಸ್ಪತ್ರೆಯಿಂದ ವಾಪಸ್ಸು ಹೋಗುವಾಗ ಬಸ್ ಚಾರ್ಜನ್ನು ಆಸ್ಪತ್ರೆಯವರು ಕೊಡಬೇಕು. ಆ ರೀತಿಯ ಸ್ಕೀಂಅನ್ನು ತಂದಿದ್ದರು.

**ಡಾ॥ ಎ.ಬಿ. ಮಾಲಕರೆಡ್ಡಿ** : - ಮುಖ್ಯಮಂತ್ರಿಯಾಗಿ ನಾನು ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮಾಡಿಸಿಕೊಳ್ಳುತ್ತೇನೆ. ನೀವೂ ಸಹ ಆದೇ ಆಸ್ಪತ್ರೆಯಲ್ಲಿ ಮಾಡಿಸಿಕೊಳ್ಳಿ. ಅವರ ಬಿಲ್ಲುನ್ನು ನಾನು ಕೊಡುತ್ತೇನೆ ಎಂದು ಹೇಳಿದರು. ಇಂಥಿಂಥ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮಾಡಿಸಕೊಳ್ಳಬಹುದೆಂದು recognize ಮಾಡಿದ್ದರು. ಅವರು ಹೋದಮೇಲೆ ಅದು ಮೂಲೆಗೆ ಬಿದ್ದುಹೋಗಿದೆ. ನಮ್ಮಲ್ಲಿ ಈ ರೀತಿ ಮೂಲೆಗೆ ಬೀಳುವುದು ಬೇಡ. 500 ಕೋಟಿ ರೂಪಾಯಿಗಳನ್ನಿಟ್ಟು ಒಂದು corporation ಮಾಡಿ. If you are comforatable, if more corporate houses are coming

forward to help, you make it Rs. 1,000 crores ಅದರ ಬಡ್ಡಿಯಲ್ಲೇ ನೀವು ಎಲ್ಲರಿಗೂ ಟ್ರೀಟ್‌ಮೆಂಟ್ ಕೊಡಬಹುದು. ಅದೇನು ಇಂಥ ನಿಸ್ಸಹಾಯಕ ಸ್ಥಿತಿಯಲ್ಲ. ಅದನ್ನು ಮಾಡಬಹುದು, ಮಾಡಿ ತೋರಿಸಬಹುದು. 'Where there is a will, there is a way' ಸರ್ಕಾರಿ ಆಸ್ಪತ್ರೆಗಳ ಅಡಿಯಲ್ಲಿ ಈಗ ಜಯದೇವ ಆಸ್ಪತ್ರೆ ಬರುತ್ತದೋ, ಇಲ್ಲವೋ ಗೊತ್ತಿಲ್ಲ. ನಾನು Health Minister ಆಗಿದ್ದಾಗ ಅವೆಲ್ಲಕ್ಕೂ ನಾನೇ ಅಧ್ಯಕ್ಷನಾಗಿದ್ದೆ. ಈಗ ಏನೋ ಅಸ್ತವ್ಯಸ್ಥವಾಗಿರುವ ಹಾಗೆ ಕಾಣಿಸುತ್ತದೆ. ಉತ್ತರ ಕರ್ನಾಟಕದ ಭಾಗದಲ್ಲಿ ಹುಬ್ಬಳ್ಳಿಯಲ್ಲಿ ಜಯದೇವ ಆಸ್ಪತ್ರೆಯ ನೇತೃತ್ವದಲ್ಲಿ ಒಂದು Cardiology Department ಶಾಖೆಯನ್ನು ಹೃದಯ ಚಿಕಿತ್ಸೆಗಾಗಿ ತೆಗೆದೆವು. ನಾನು ಸಚಿವನಾಗಿದ್ದಾಗ ಅದಕ್ಕೆ ಐದು ಕೋಟಿ ರೂಪಾಯಿಗಳ ಹಣವನ್ನು ಬಜೆಟ್‌ನಲ್ಲಿ ಇಡಿಸಿದ್ದೇನು. ಅದು establish ಆಯಿತು. ಆದರೆ ಈಗ ಅಲ್ಲಿ ಏನು ಕೆಲಸವೇ ಆಗುತ್ತಿಲ್ಲ. ಹೈದರಾಬ್ರಾದ್ ಕರ್ನಾಟಕದಲ್ಲಿ ಒಪೇಕ್ ಆಸ್ಪತ್ರೆಯ ಮುಖಾಂತರ ಒಂದು Super Speciality Hospital ಅನ್ನು ಅಲ್ಲಿ ತೆಗೆಸಿದೆವು. ಪ್ರಥಮ ಸಲ ನಾನು ಆರೋಗ್ಯ ಸಚಿವನಾಗಿದ್ದಾಗ ಅದನ್ನು ಪ್ರಾರಂ ಮಾಡಿದೆ. ಎರಡನೇ ಸಲ ಸಚಿವನಾಗಿದ್ದಾಗ ಅದನ್ನು ಕಂಪ್ಲೀಟ್ ಮಾಡಿ ಪ್ರಾರಂಭ ಮಾಡಿದೆವು. It is shame on the part of this government, they have closed that. Two plates on your Houses. Super Speciality Hospital ಅನ್ನು ಅಲ್ಲಿ ನಾವು ಏಕೆ ಮಾಡಿದ್ದೆವು. ಯಾವ ಉದ್ದೇಶದಿಂದ ಮಾಡಿದ್ದವು ಅದರ concept ಏನಿತ್ತು ? ನಾನು ಅದನ್ನು ಬೀದರ್ ಅಥವಾ ಗುಲ್ಬರ್ಗಾದಲ್ಲಿ ಮಾಡಬಹುದಿತ್ತು. ನಾನು ಏಕೆ ರಾಯಚೂರಿನಲ್ಲಿಯೇ ಮಾಡಿದೆ ? ಜನರು ಬಸ್ ಚಾರ್ಜಿಗೆ ಕೊಡಲು ರೊಕ್ಕವಿಲ್ಲ. ರೈಲ್ ಚಾರ್ಜಿಗೆ ಕೊಡಲು ರೊಕ್ಕವಿಲ್ಲ. ಇನ್ನು ಅವರು ಜಯದೇವ ಅಥವಾ ಕಿದ್ವಾಯಿಗೆ ಬಂದು ಅಲ್ಲಿ ಆಡ್ಮಿಷನ್ ತೆಗೆದುಕೊಂಡು ಟ್ರೀಟ್‌ಮೆಂಟ್ ತೆಗೆದುಕೊಳ್ಳಲಿಕ್ಕೆ ರೊಕ್ಕ ಎಲ್ಲಿಂದ ಬರಬೇಕೆಂದು ತಿಳಿದುಕೊಂಡು. ಅಲ್ಲಿನ ಜನರು ಇಲ್ಲಿಗೆ ಬರಬಾರದು. ಅಲ್ಲಿಯೇ ಸೇರಬೇಕೆಂದು ಮಾಡಿ 52 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ರಾಯಚೂರಿನಲ್ಲಿ ಒಂದು Super Speciality Hospital ಅನ್ನು ಪ್ರಾರಂಭ ಮಾಡಿದೆವು. ವಿದ್ಯೆಯಲ್ಲಿ ಅತ್ಯಂತ ಹಿಂದುಳಿದಂಥ ಅರಬ್ ರಾಷ್ಟ್ರದವರಿಗೆ ಸ್ವಲ್ಪ ಕಾಮನ್ ಸೆನ್ಸ್ ಇದೆ. ನಿಮ್ಮಲ್ಲಿ ಆ ಕಾಮನ್ ಸೆನ್ಸ್ ಇಲ್ಲ. ಅವರ ಸಹಾಯದಿಂದ ಕಟ್ಟಿದ್ದು ಅದು. They loved

India. Arab Countries loved India very much. They thought that India is suffering and by raising the petrol prices we should help them. ಈ ರೀತಿ ನಮ್ಮ ಕರ್ನಾಟಕಕ್ಕೆ ಒಪೇಕ್ ಆಸ್ಪತ್ರೆಯನ್ನು ಕೊಟ್ಟರು. ಕೆಲವು Polytechnic Instituions ಕೊಟ್ಟರು. ಎಲ್ಲ ರಾಜ್ಯಗಳಿಗೂ ಅವರು ಹಣ ಕೊಟ್ಟರು. ಆ ಹಣದಿಂದ ನಾವು ಆಸ್ಪತ್ರೆಯನ್ನು ಕಟ್ಟಿದೆವು. ಆದರೆ ಇವತ್ತು ನೀವೇನು ಮಾಡಿದ್ದೀರಿ ? ಆ Super Speciality Hospital ಅನ್ನು ಕ್ಲೋಸ್ ಮಾಡಿದ್ದೀರಿ. ಎರಡು ತಿಂಗಳಾಯಿತು, ಅದು ಕೆಲಸ ಮಾಡುತ್ತಿಲ್ಲ. Shame ನಿಮ್ಮ ಒಣ ಪ್ರತಿಷ್ಠೆ.Health Department ಅಡಿಯಲ್ಲಿ ಇದ್ದ ಅದು Medical Education Department ಕೆಳಗೆ ಇದೆ. Agreement Terms and Reference ಏನಿತ್ತು ಎನ್ನುವುದು ನಿಮಗೆ ಗೊತ್ತಿರಲ್ಲವೇ ? Agreement Terms ಮೇ ತಿಂಗಳಲ್ಲಿ ಕಂಪ್ಲೀಟ್ ಆಗುತ್ತದೆ ಎನ್ನವುದು ನಿಮಗೆ ಗೊತ್ತಿರಲಿಲ್ಲವೇ ? ಮತ್ತೆ ಆ ಇಲಾಖೆಯ ಮಂತ್ರಿ ಏಕಾಗಿದ್ದೀರಿ ? ಮಂತ್ರಿಯಾಗಲು ಹಗಲು, ರಾತ್ರಿ ಗುದ್ದಾಡುತ್ತೀರಿ ? ಎಷ್ಟು ಸಲ ಮಂತ್ರಿಯಾದಿರಿ ? ಆ ಆಸ್ಪತ್ರೆಯನ್ನು ಕ್ಲೋಸ್ ಮಾಡಬೇಕೆಂದು ನಿರ್ಣಯ ಮಾಡುವವರು ಯಾರು ? 52 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆ ಭಾಗದ ಜನರಿಗೆ ಉಪಯೋಗವಾಗಲಿ ಎಂದು ನಾವು ಕಟ್ಟಿದ್ದೆವು. ನಿಮಗೆ ಹೇಳುವವರು, ಕೇಳುವವರು ಯಾರೂ ಇಲ್ಲವೆ ? ನಾವು 52 ಕೋಟಿ ರೂಪಾಯಿ ಖರ್ಚು ಮಾಡಿ ಆ ಆಸ್ಪತ್ರೆಯನ್ನು ಆ ಭಾಗದ ಜನರ ಉಪಯೋಗಕ್ಕಾಗಿ ಕಟ್ಟಿದ್ದೇವೆ. ನಿಮ್ಮನ್ನು ಕೇಳುವವರು ಹೇಳುವವರು ಯಾರೂ ಇಲ್ಲವೆ ? ಆಗ ಚೆನ್ನಾಗಿ ಕೆಲಸ ಮಾಡಿದ್ದೇವೆ ಎನ್ನುತ್ತೀರಿ, ಏನು ಮಾಡಿದ್ದೀರಿ ? ಈಗ ಜನರೇನು ಮಾಡಬೇಕು ? ಅವರು ಇಲಾಖಿ ಮಾಡಬೇಕಾದರೆ ಈಗ ಎಲ್ಲಿ ಹೋಗಬೇಕು ? ಆ ಆಸ್ಪತ್ರೆ ಒಳ್ಳೆಯ ಹೆಸರು ಗಳಿಸಿತ್ತು. ಅದರ facility ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಬಾಗಲಕೋಟ್, ಬಿಜೆಪಿಯವರು ಹುಬ್ಬಳ್ಳಿಗೆ ಹೋಗಬೇಕೆಂದು ಮಾಡಿದ್ದರು. ಈ 6–7 ಜನರ ಸಲುವಾಗಿ ನಾವು OPEC ಎಂಬ Super Speciality Hospital ತೆರೆದಿದ್ದವು. ಏಕೆಂದರೆ, luckily ನಾನು ಎರಡನೇ ಸಲವೂ ಆರೋಗ್ಯ ಸಚಿವನಾಗಿದ್ದೆ. ನಾನು ತಾಂತ್ರಿಕನಿದ್ದೇನೆ, ತಂತ್ರಜ್ಞಾನ ಗೊತ್ತಿದೆ. ನನ್ನ ಕಡೆಯಿಂದ ಒಂದು ಪುಟ್ಟ ಕಾಣಿಕೆ ಎಂದು ತಿಳಿದುಕೊಂಡು ನಾವು start ಮಾಡಿ succesful ಆಗಿ ಮಾಡಿದೆವು. ವರ್ಷಕ್ಕೆ ಒಂದು ಸಾವಿರ Angiography ಅಲ್ಲಿ ಆಗುತ್ತದೆ. ಅದು ಇವತ್ತೆಲ್ಲಿದೆ

? ಯಡಿಯೂರಪ್ಪನವರೆ, ತಾವು ಹಿರಿಯರಿದ್ದೀರಿ. ಅದನ್ನು ಕ್ಲೋಸ್ ಮಾಡಿ ಇಂಥ ಕೆಲಸ ಮಾಡಿದ್ದಾರೆ. ಮಂತ್ರಿಗಳು ಎಲ್ಲಿದ್ದಾರೆ ? ಅವರನ್ನು transfer ಮಾಡಿದ್ದೀರಾ ಎಂದು ಕೇಳಿದೆ. I was shocked, This morning I have contacted the CEO there. ಇಲ್ಲ ಸಾರ್. Government ತೆಗೆದುಕೊಂಡಿದೆ ಎಂದರು. Govenment ತೆಗೆದುಕೊಂಡಿರುವುದ ನನಗೆ ಗೊತ್ತಿಲ್ಲ. I was not in town. 2 ತಿಂಗಳಾಯಿತು. ಹಳ್ಳಿಯಲ್ಲಿ ನಾವು ಮಕ್ಕಳಿಗೆ, ಕತ್ತೆ ಕಾಯುವುದಕ್ಕೆ ಹೋಗಿದ್ದೆಯಾ ಮಗನೆ ಎಂದು ಬಯ್ಯುತ್ತೇವೆ. Agreement ಪ್ರಕಾರ ಅದಕ್ಕೆ ನೀವು ವ್ಯವಸ್ಥೆ ಮಾಡಿಕೊಳ್ಳಬೇಕಾಗಿತ್ತು. ಅಲ್ಲಿ RIMS (Raichur Institute of Medical Sciences) ಇತ್ತು. ಎಲ್ಲರನ್ನು ಮನೆಗೆ ಕಳುಹಿಸಿದ್ದಾರೆ. ಹೀಗಾದರೆ North Karnataka ವನ್ನು ಹೇಗೆ ಅಭಿವೃದ್ಧಿ ಮಾಡಬೇಕು ನೀವೇ ಹೇಳಿ ನೋಡೋಣ ? ಮತ್ತೆ ಮಾಡುತ್ತೇವೆಂದು ಹೇಳುತ್ತೀರಿ. ಏನೋ ಒಂದು ಕಾರಣ vote ಸಿಕ್ಕಿ ಬರುತ್ತೀರಿ. ನೀವು addition ಮಾಡುವುದಿರಲಿ ಇದ್ದುದ್ದನ್ನು ತಳ್ಳಿಕೊಂಡು ಹೋಗುವುದಕ್ಕೆ ಏನು ತ್ರಾಸು ? ಮತ್ತೆ ಇನ್ನೊಂದು ಹೇಳುತ್ತೇನೆ. ರಾಯಚೂರು ಹಟ್ಟಿ ಚಿನ್ನದ ಗಣಿ ಕುಂಟುತ್ತಾ ನಡೆದಿತ್ತು. ಈ ಸರ್ಕಾರ ಅಧಿಕಾರಕ್ಕೆ ಬಂದು 4 ವರ್ಷವಾಯಿತು. Once again under sale, ಒಂದು Governing Body Meeting ಕರೆದಿಲ್ಲ. Health Minister ಅಧ್ಯಕ್ಷರಾಗಿದ್ದಾರೆ. ಎಸ್.ಎಂ. ಕೃಷ್ಣರವರು No. 1 ಮುಖ್ಯಮಂತ್ರಿ ಎಂದು ಹೇಗೆ ಹೆಸರು ಗಳಿಸಿಕೊಂಡರು ? Because he used to listen to his Ministers. ಒಳ್ಳೆಯ ಕೆಲಸಕ್ಕೆ ಬೆನ್ನು ತಟ್ಟಿ, go ahead, go ahead ಎಂದು ಹೇಳುತ್ತಿದ್ದರು. ಎಲ್ಲರೂ ಕೂಡ ಕೇಳಬೇಕು. Team spirit ಮಾಡಿದ್ದೀವಿ. ಅದಕ್ಕಾದರೂ as a team leader ಎಂಬು ಬಿರುದು ಬಂದಿತು. ಇಲ್ಲಿ ಆದಿಲ್ಲ. ಇಲ್ಲಿ ಮುಂಜಾನೆಯಿಂದ ಸಂಜೆ ತನಕ ಇಲ್ಲಿ ಬರೀ ಗೊಂದಲ ಗೊಂದಲ. ನಿಮ್ಮಲ್ಲಿ ಕೂಡ ಇಬ್ಬರು ಮೂವರು ಮಾಡಿದ್ದೀರಿ ನಾನು ಇಲ್ಲವೆಂದು ಹೇಳವುದಿಲ್ಲ. ಹಾಗಾದರೆ ಉಳಿದವರು ಏಕೆ ಮಾಡಲಿಲ್ಲವೆಂದು ನಾನು ಕೇಳುತ್ತೇನೆ. ಜಗತ್ತು ಅಭಿವೃದ್ಧಿಯಾಗಬೇಕಾದರೆ ಮಾನವ ಸಂಪನ್ಮೂಲ ಬೆಳೆಯಬೇಕು. ಮಾನವ ಸಂಪನ್ಮೂಲ ಶ್ರೀಮಂತವಾಗಬೇಕಾದರೆ ಎರಡೇ Departments ಕಾರಣ ಮತ್ತೊಂದು ಸಲ ನೆನಪಿಡೋಣ. ಅವಾವುವೆಂದರೆ Health and Education

Departments. Karl Marx, 'Man is the root of mankind' ಎಂದು ಹೇಳಿದ್ದಾನೆ. ಎಲ್ಲ system ಅನ್ನು ಎಲ್ಲ ಕಡೆಯಿಂದ analysis ಮಾಡಿ, man is the root of the man kind, without man there is nothing. Anything that he does must be with reference to man, must be with reference to his welfare. ಆ welfare ಗೆ ಆ ಎರಡೇ ಎರಡು departments ಕಾರಣ, Education and Health. ಅವುಗಳನ್ನು ನೀವು ಇವತ್ತು ಯಾವ ಸ್ಥಿತಿಗೆ ತಂದಿದ್ದೀರಿ ? ಅವರಿಗೆ Education ವಿಷಯದಲ್ಲಿ ಕಳಕಳಿ ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ, wrong direction ನಲ್ಲಿ ನಡೆದ ಹಾಗೆ ಕಾಣಿಸುತ್ತದೆ. ಪ್ರತಿ ಸಲ ನೀನೊಬ್ಬ academic ಮನುಷ್ಯ ಇದ್ದೀಯಾ, technical ಮನುಷ್ಯ ಇದ್ದೀಯಾ. ನನ್ನ brother-in-law ಗೆ ನನಗೆ phone ಮಾಡಿ, ಡಾಕ್ಟರೇ ನಿಮಗೆ ನಾಚಿಕೆ ಇಲ್ಲವೇ ಎನ್ನುತ್ತಿದ್ದ. ನಾಚಿಕೆಪಡುವಂಥ ಕೆಲಸವನ್ನು ನಾನೇನು ಮಾಡಿದೆ ಎಂದು ನಾನು ಅವನನ್ನು ಕೇಳಿದೆ. ನಿಮ್ಮ ಯಾದಗಿರಿ Development Index ನಲ್ಲಿ ನೀವು 30ನೇ ನಂಬರ್‌ನಲ್ಲಿದೆ ನೋಡಿ ಎಂದು ಹೇಳಿದೆ. Education Minister ರವರು ಎಲ್ಲಿಯೇ ಹೋದರು. ಯಾದಗಿರಿ ಜಿಲ್ಲೆಯ ನನ್ನ ಮತಕ್ಷೇತ್ರ ಒಂದರಲ್ಲೇ ಒಂದು ಸಾವಿರ Primary School Teachers ಕೊರತೆ ಇದೆ. ನಿಮಗೆ public life ನಲ್ಲಿ ದಯೆ, ಅಂತಃಕರಣವಿಲ್ಲ; ಮುಂದಿನ ಸಲ ಅರಿಸಿ ಬರಬೇಕೆಷ್ಟೇ. ಏನಾಗಿದೆ ? General Merit ಮೇಲೆ ಅರಿಸಿದ್ದಾರೆ. Teachers selection ಅನ್ನು ಕೂಡ ನಾವು ಹಾಗೇ ಮಾಡುತ್ತಿದ್ದೇವೆ. ಎಲ್ಲರೂ ಇಲ್ಲಿಂದ ಬಂದುಬಿಡುತ್ತಾರೆ. 2 ವರ್ಷಗಳ probation period declare ಆದ ಮರುದಿನವೇ transfer ಮಾಡಿ ಎನ್ನುತ್ತಾರೆ. ಯಾರದೋ MLA letter ತರುತ್ತಾರೆ. ನಾನು ಬಹಳ ವರ್ಷಗಳಿಂದ MLA ಆಗಿದ್ದೇನೆ. 1978ರಲ್ಲಿ ಈ ಪದ್ಧತಿ ಇರಲಿಲ್ಲ. ಆಗ ಯಾರೂ ಕೂಡ transfer ಸಲುವಾಗಿ MLA, ಮಂತ್ರಿಗಳ ಬಳಿ ಹೋಗುತ್ತಿರಲಿಲ್ಲ. No, ಈ ದರಿದ್ರ ಚಾಳಿ 1980ನೇ ಇಸವಿಯಿಂದ ಶುರುವಾಯಿತು. MLA ಗಳಿಂದ ಲೆಟರ್ ತೆಗೆದುಕೊಂಡು ಹೋಗುವುದು ಅಲ್ಲಿಂದ ಶುರುವಾಯಿತು. ವೀರೇಂದ್ರ ಪಾಟೀಲ್‌ರವರ ಆರೋಗ್ಯ ಕೆಟ್ಟಿದ್ದೇ ಈ transfer ಸಲುವಾಗಿ He told my health is going down because

of this transfer. ಅವರು Transfer ಮಾಡುವುದಕ್ಕೆ May 30th last date ಮಾಡಿದರೆ. he is in tender tent. Then he has been harassing this one. ಅವರು ಬಹಳ ಸೂಕ್ಷ್ಮ ಸ್ವಭಾವದವರಿದ್ದರು. ಎಲ್ಲರೂ transfer ತೆಗೆದುಕೊಂಡು ಬರುತ್ತಾರೆ. ಕೇವಲ ಯಾದಗಿರಿ ತಾಲ್ಲೂಕಿನಲ್ಲಿ ಅದು ನನ್ನ ಮತಕ್ಷೇತ್ರ ಆ ಜಿಲ್ಲೆಯಲ್ಲಿ 4 ಜನ ಎಂಎಲ್‌ಎ ಇದ್ದಾರೆ. ಅವರು ಏಕೆ ಬಯ್ಯುತ್ತಾರೆಂದರೆ, ನೀವು ಸರ್ಕಾರದ ಗಮನಕ್ಕೆ ತರಬೇಕೆಂದು ಹೇಳುತ್ತಾರೆ. MLA is not an executive, after all he is only a representative. He carries people problem to the Govenment, he is not an executive. He has to play the role of assistant to remind the Government, bringing to the notice of the Govenment. Beyond that what he can do. ಒಂದು ಸಲ ಹೇಳಬಹುದು. ಎರಡು ಸಲ ಹೇಳಬಹುದು. ಮೂರು ಸಲ ಹೇಳಬಹುದು. ಅದಕ್ಕೆ ನಾನು ನಿಮ್ಮ executive transfer ಆದರೂ ಮಾಡಿ ಎಂದಾದರೂ ಹೇಳಬಹುದು. ಪುಣ್ಯಾತ್ಮ ಹೋದ ಎಂದಾದರೂ ತಿಳಿದುಕೊಳ್ಳಬಹುದು. ಬದುಕಬೇಕು. ನಾನು ಅಲ್ಲಿ ನಿಲ್ಲುವುದಕ್ಕೆ ಬರುವುದಿಲ್ಲ ಎಂದರೆ ಏನು ಮಾಡುವುದಕ್ಕಾಗುತ್ತದೆ ? ನೀವು ಬೇಕಾದಷ್ಟು ಕೊಟ್ಟಿರುತ್ತೀರಿ. ಈಗ ಸರ್ಕಾರದವರು ನೀವು pay scale ಹೆಚ್ಚಿಗೆ ಮಾಡಿದ್ದೀರಿ Per kilometer ಗೆ ಎಷ್ಟೋ ಹಣ ಅಂದರೆ, 30 ಸಾವಿರ ರೂಪಾಯಿ, 40 ಸಾವಿರ ರೂಪಾಯಿ ಎಂದೇನೋ ಮಾಡಿದ್ದೀರಿ. ನೀವು ಎಲ್ಲ MLA ಗಳಿಗೆ ಒಂದು ಲೆಟರ್ ಬರೆಯಿರಿ. ಹಾಗಾದರೆ, ಇಷ್ಟು MLA ಗಳು ಒಮ್ಮೆಲೆ ಹೇಗೆ ಗೆದ್ದರು ? ಎಲ್ಲ ಕಡೆ ಆಲಕ್ಷ್ಯ ಆಗಿದೆ ಎಂದು ಎಲ್ಲರೂ ಎದ್ದು ಬರುತ್ತಾರೆ. ಅಭಿವೃದ್ಧಿ ದೃಷ್ಟಿಯಿಂದ ನೀವು ಪಕ್ಷಪಾತ ಮಾಡುವುದಕ್ಕೆ ಹೋಗಬೇಡಿ. Recruitment ಮಾಡಿ 50% of the Government servants are working in the Education Department, Statistics ತೆಗೆದು ನೋಡಿ. ಅಂದ ಮೇಲೆ ವರ್ಷ ವರ್ಷವೂ retire ಆಗುತ್ತಾರೆ. ನಿಮ್ಮ planning department ಅಧಿಕಾರಿಗಳು ನಿಮ್ಮ ಹತ್ತಿರ ಬಂದು ಹೇಳುತ್ತಾರೆ. ಅಂದಮೇಲೆ 50% ನನಗೆ ತಿಳಿದ ಮಟ್ಟಿಗೆ ಸುಮಾರು 15 ಸಾವಿರ ಟೀಚರ್ಸ್ every year retire ಆಗುತ್ತಾರೆ. ನಾವು ready ಇರಬೇಕೋ, ಬೇಡವೋ ? ಮತ್ತೆ ಮಾನವ ಸಂಪನ್ಮೂಲ ಹೇಗೆ ಬರುತ್ತದೆ ? ಹರಿಜನ ಗಿರಿಜನರು, ಬಡವರು ಉದ್ಧಾರ ಆಗಿ

ಎಂದರೆ ಹೇಗೆ ಆಗುತ್ತಾರೆ ? 1 ಸಾವಿರ ಕಿ.ಮೀ. ಇರುವ ನಾವೇ ಉದ್ಧಾರವಾಗಿಲ್ಲ. ಇನ್ನು ಅವರೆಲ್ಲಿ ಉದ್ಧಾರವಾಗುತ್ತಾರೆ ? ಅಲ್ಲಿ ಟೀಚರ್ಸ್ ಇಲ್ಲ. ಪ್ರಧಾನ ಮಂತ್ರಿಯಾಗಿ ಡಾ॥ ಮನಮೋಹನ ಸಿಂಗ್‌ರವರು ಬಂದಿದ್ದಾರೆ. Education Department ಗೆ ಸುಮಾರು 34 ಸಾವಿರ ಕೋಟಿ ರೂಪಾಯಿಗಳನ್ನು allot ಮಾಡಿದ್ದಾರೆ. ಮೊದಲು 5–6 ಸಾವಿರ ಕೋಟಿ ರೂಪಾಯಿ ಮೀಸಲಿತ್ತು. State subject ಎಂದು ತಿಳಿದುಕೊಂಡು ಯಾವ ಕೇಂದ್ರ ಸರ್ಕಾರವೂ ಮಾಡುತ್ತಿರಲಿಲ್ಲ. ನಾನು 1952 ರಿಂದ ಹೇಳುತ್ತಿದ್ದೇನೆ. ಮಾಡುತ್ತಿರಲಿಲ್ಲ, ಡಾ॥ ಮನಮೋಹನ ಸಿಂಗ್‌ರವರು ಬಂದು 34 ಸಾವಿರ ಕೋಟಿ ರೂಪಾಯಿಗಳನ್ನು ಕೇವಲ Primary Education ಗೋಸ್ಕರ ಇಟ್ಟರು. NRHM ನಲ್ಲಿ 16 ಸಾವಿರ ಕೋಟಿ ರೂಪಾಯಿಗಳನ್ನು allot ಮಾಡಿದ್ದಾರೆ. ಮೊದಲು ಎಷ್ಟಿತ್ತು ? Underdeveloped country ಗಳಲ್ಲಿ ನಾನು ಮೊದಲೇ ಹೇಳಿದ ಹಾಗೆ, ಮಾನವ ಸಂಪನ್ಮೂಲ ಸಲುವಾಗಿ ಇಲ್ಲಿ ಹೆಚ್ಚು ಇರಬೇಕು. ಶ್ರೀಲಂಕಾದಲ್ಲಿ ಆರೋಗ್ಯದ ಸಲುವಾಗಿ 9% ಅನ್ನು National Budget ನಲ್ಲಿ ಮೀಸಲಿಡುತ್ತಾರೆ. ನಾವು ಆರೋಗ್ಯಕ್ಕೆ ಕೇವಲ 0.9% ಮಾತ್ರ ಬಜೆಟ್‌ನಲ್ಲಿ ಮೀಸಲಿಡುತ್ತೇವೆ. Not even 1% Communicable diseases ತಡೆಗಟ್ಟಬೇಕೆಂದರೆ, ಪಾಪ Health Minister ಏನು ಮಾಡಬೇಕು ? ಸುಮ್ಮನೆ ಟೀಕೆ ಮಾಡುತ್ತೇವಷ್ಟೇ. ಆದ್ವಾನಿಯವರು Deputy Prime Minister ಆಗಿದ್ದರು. ಅವರಿಗೆ ನಾನು ಅದೇ ಹೇಳಿದೆ. I was Ex-officio Chairman of NIMHANS, Sir, this mighty Indian Government allots 0.9% for the health department whereas Government of Sri Lanka allots 0%. Do you know how strong and steady Sri Lanka's people are ? Because they never get communicable diseases. The communicable diseases. they swab the vitality of man, most of the men are poor, because they are under nourished and they are further undernourished by the diseases. ಹೆಚ್ಚಿಗೆ ಮಾಡಿ. ಆರೋಗ್ಯ ಇಲಾಖೆಗೆ ಹೆಚ್ಚಿಗೆ ಕೊಡಿ. ಅವರು ತಮ್ಮ ಇಲಾಖೆಗೆ ಕೊಡುವುದಿಲ್ಲವೆಂದು ತಿಳಿದುಕೊಂಡು ಈ ವರ್ಷ average Rs. 500-600 crores bonus ಅನ್ನು NRHM ನಲ್ಲಿ ಅವರೇ

ಕೊಡುತ್ತಿದ್ದಾರೆ. ಜಿಲ್ಲಾ ಆಸ್ಪತ್ರೆ ಕಟ್ಟಿದಾಗ ಅವರೇ ಕೊಡುತ್ತಾರೆಂದು 16 ಸಾವಿರ ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಅವರೇ ಮುಂದೆ ಬಂದಿದ್ದಾರೆ.

ಇನ್ನು Minor Irrigation ಬಗ್ಗೆ ಹೇಳುವುದಾದರೆ, Minor Irrigation also comes under Human Resources Development ಏಕೆಂದರೆ ಜನರಿಗೆ ಆಹಾರ ಬೇಕು. ಗೋವಿಂದ ಕಾರಜೋಳರವರು, he was like a permanent fixture here. But today he is not seen. I don't know where he is ಅವರು ಯಾವಾಗಲೂ ನನಗೆ ಹೇಳುತ್ತಿದ್ದರು. ಈಗ ಅವರೇ ಇಲ್ಲ. Minor Irrigation Department ನಲ್ಲಿ Schumacher ಎನ್ನುವ ದೊಡ್ಡ ಆರ್ಥಿಕ ತಜ್ಞನಿದ್ದ German ಹೆಸರೂ ಇದ್ದರೂ ಕೂಡ. he is an American ಅವನು The small is beautiful ಎನ್ನುವ ಪುಸ್ತಕ ಬರೆದಿದ್ದನೆ. It attracted the world attention ಅದರಲ್ಲಿ ಏನೆಂದು ಬರೆದಿದ್ದಾನೆಂದರೆ, ಮನುಷ್ಯರಲ್ಲಿ ದೊಡ್ಡ ದೊಡ್ಡ ಕಲ್ಪನೆ, ಭವ್ಯತೆ ಇರುವುದು ನಿಜ. ಅವನು ಮೊದಲು ನಿಮ್ಮ ತಲೆಯಿಂದ ಆ ಹುಚ್ಚು ಬಿಡಬೇಕೆಂದು ಹೇಳಿದ್ದಾನೆ. ಅದಕ್ಕೆ ಮಾರ್ಕ್ಸ್ ಹೇಳಿದ್ದು. 'Man is root of Mankind' ಎಂದು ಮೊದಲು ಮನುಷ್ಯನ welfare ಗೆ ಏನು ಅವಶ್ಯಕತೆ ಇದೆ ಅದನ್ನು ಮೊದಲು ಮಾಡಿ. ದಯಮಾಡಿ ಅವನಿಗೆ don't cause further misery to man ಎನ್ನುವುದು concept ಆತ America ದಲ್ಲಿ study ಮಾಡಿದ್ದ ದೊಡ್ಡ ದೊಡ್ಡ projects ನಿಂದ ಸಾವಿರಾರು ಜನರು distress ಆಗುತ್ತಾರೆ. villages were distressed, uprooted ಒಂದು ಸಲ uproot ಆದರು ಎಂದರೆ ಅವರು ಬೇರೆ ಸ್ಥಳದಲ್ಲಿ settle ಆಗಬೇಕು. Re-settlement and then their progress ಎಂದು ಅವರು ಹೇಳಿದ. ಅದಕ್ಕೆ ನೀರಾವರಿಯಲ್ಲೂ ಕೂಡ ದೊಡ್ಡ ದೊಡ್ಡ projects ಮಾಡಬೇಡಿ ಎಂದು ಹೇಳಿದ್ದಾರೆ. Don't go after big projects. Go for small projects. How beautiful it is. America ದಲ್ಲೂ ಕೂಡ all big projects are abandoned. ಈ ದಿಕ್ಕಿನಲ್ಲಿ Minor Irrigation is very important. ನೀವು ಮೊದಲೇ ಬಜೆಟ್ ಕೊಡುವುದೇ ಕಡಿಮೆ. ಕೊಟ್ಟ ಮೇಲೆ ಸರಿಯಾದ ಕ್ರಮಾಂಕದಲ್ಲಿ ಕೊಡಬೇಕು. ನನ್ನ ಮತ ಕ್ಷೇತ್ರದಲ್ಲಿ If at all there is one Constituency where we can eliminate poverty, it is Yadgir

Constituency. Certainly we can eliminate poverty. ಅದಕ್ಕಾಗಿಯೇ ನಾನು ಸಚಿವನಾಗಿದ್ದಾಗ ಎಸ್.ಎಂ. ಕೃಷ್ಣರವರ ಕಾಲದಲ್ಲಿ ಅವರ ಮನ ಒಲಿಸಿ ಆರು bridge cum barrages ಮಾಡಿಸಿದೆ. Though it costed nearly 300 crores He is a great man. I call him great man because he was able to understand, He said, "I can understand Doctor." ನಮಗಂತೂ ಬಚಾವತ್ ಅವಾರ್ಡ್ ಮೇರೆಗೆ ಎಲ್ಲ ನೀರನ್ನು ಉಪಯೋಗ ಮಾಡುವುದಕ್ಕಾಗುವುದಿಲ್ಲ. ಇದನ್ನಾದರೂ ಮಾಡಿಕೊಡಿ ಎಂದು ಹೇಳಿದೆ. Because he could understand. Because he is a highly educated man, he could understand. He could understand things ಮಾಡುತ್ತೇನಪ್ಪ ಎಂದರು. ಇವತ್ತು ನೋಡಿ 12 ತಿಂಗಳಿಂದ ನನ್ನನ್ನು ಬೈಯುತ್ತಿದ್ದಾರೆ. ನನ್ನ ಮತಕ್ಷೇತ್ರದಲ್ಲಿ ನಾನು ಒಂದು ಸಲ MLC ಆಗಿದ್ದೆ. ಈಗ 4ನೇ ಸಾಲ MLA ಆಗಿದ್ದೇನೆ. ಈ 20 ವರ್ಷಗಳ ಅವಧಿಯಲ್ಲಿ ನಾನು 12 Lift Irrigation schemes ಮಾಡಿಸಿದ್ದೆ. ನಾನು ಏಕೆ ಮಾಡಿದೆ ಎಂದರೆ, ನಾನು ವೈದ್ಯನಿದ್ದಾಗ ಜನರಿಗೆ ನಾನು ಔಷಧಿ ಬರೆದುಕೊಟ್ಟರೆ ಅವನು ದುಖಾನಿಗೆ ಹೋಗಿ ಕೇಳಿದಾಗ ಅದು 400–500 ರೂಪಾಯಿ ಆಗುತ್ತಿತ್ತು. ಈಗ ನನಗೆ 75 ವರ್ಷವಾಗಿದೆ. ನಾನು practice ಮಾಡಿದ್ದು 40 ವರ್ಷಗಳ ಹಿಂದೆ ಆಗ 200, 300 ರೂಪಾಯಿ ಇತ್ತು. ನಾನು ಇಷ್ಟು ರೊಕ್ಕ ತಂದಿಲ್ಲ ಎನ್ನುತ್ತಿದ್ದರು. ರೊಕ್ಕ ಎಷ್ಟಿದೆ ಎಂದರೆ 100 ರೂಪಾಯಿ ಇದೆ ಎನ್ನುತ್ತಿದ್ದರು. Patients ಜೊತೆಗೆ Doctor ಕೂಡ ಅಳಬೇಕಷ್ಟೆ. ಕಣ್ಣಿನಲ್ಲಿ ನೀರು ತೆಗೆಯಬೇಕು. ಈ ವೈದ್ಯಕೀಯ ವೃತ್ತಿ ಬಿಟ್ಟು ರಾಜಕೀಯ ಕ್ಷೇತ್ರಕ್ಕೆ ಬಂದರೆ ಒಳ್ಳೆಯದೆಂದು ಆಗ ನಾನು ತಿಳಿದುಕೊಂಡಿದ್ದೆ. ಏಕೆಂದರೆ, Professors, Principal ಹೇಳುತ್ತಿದ್ದರು. ಸರ್ಕಾರ ಗ್ರಾಂಟ್ ಕೊಡುತ್ತಿಲ್ಲ. grants ಹೆಚ್ಚಿಗೆ ಮಾಡುತ್ತಿಲ್ಲ. ನಾನೇ ಸರ್ಕಾರದಲ್ಲಿದ್ದರೆ ಏನಾದರೂ ಹೆಚ್ಚಿಗೆ ಮಾಡಬಹುದೆಂದು ತಿಳಿದುಕೊಂಡು ನಾನು public field ಗೆ ಬಂದೆ. ನಾನು ವೈದ್ಯಕೀಯ ಕ್ಷೇತ್ರದಲ್ಲಿ ದೊಡ್ಡ ಸ್ಥಾನದಲ್ಲಿದ್ದೆ. Professor ಆಗಿದ್ದೆ. ತಿಂಗಳಿಗೆ ಒಂದು ಲಕ್ಷ ರೂಪಾಯಿ ಪಗಾರ ಇದೆ. ಆಗ ಅಷ್ಟು ಪಗಾರ ಇರಲಿಲ್ಲ. ಆಗ 20 ಸಾವಿರ ರೂಪಾಯಿ ಇತ್ತು. ನಾನು ಆ ಹುದ್ದೆಗೆ ರಾಜಿನಾಮೆ ಕೊಟ್ಟು ಬಂದೆ. ಮೊದಲು ತಾಲ್ಲೂಕು ಆಸ್ಪತ್ರೆಗಳು pig sheds ಇದ್ದ ಹಾಗಿದ್ದವು. Primary Health Centres,

ಆಸ್ಪತ್ರೆಗಳನ್ನು ನಾನು German aid ನಿಂದ Upgrade ಮಾಡಿದೆ. ನಾನು ಅಧಿಕಾರದಲ್ಲಿದ್ದಾಗ ಸುಮಾರು 800 ಕೋಟಿ ರೂಪಾಯಿಗಳ foreign aid ತಂದಿದ್ದೆ. ಆ ಹಣ ನಮ್ಮಲ್ಲಿಯೇ ಇರುತ್ತಿತ್ತು. ಸರ್ಕಾರದವರು ಕೊಡುತ್ತಾರೆ ಬಿಡಿ. ಆದರೆ, ಒಮ್ಮೆಲೇ ಖರ್ಚು ಮಾಡಬೇಕೆಂದರೆ ಆಗುವುದಿಲ್ಲ. Installment ನಲ್ಲಿ ಇವತ್ತು ಸರ್ಕಾರದವರು ದುಡ್ಡು ಕಟ್ಟುತ್ತಿದ್ದೀರಿ. ಹೈದರಾಬಾದ್ ಕರ್ನಾಟಕದ I upgrade all District Hospitals and Taluk Hospitals in Hyderabad Karnataka area. ಈ ಒಂದು ವಿಚಾರದ ಬಗ್ಗೆ ನನ್ನ conscience clear ಇದೆ. I was able to do something ನಾನು ಎಲ್ಲವನ್ನೂ upgrade ಮಾಡಿದೆ. 50 bed end 100 bed sub-division Head Quarters ಆದರೆ ಅಲ್ಲಿ ಸಿಗತಕ್ಕಂಥ ಸೇವೆಯಲ್ಲಿ ಏನೂ improve ಆಗಿಲ್ಲ. ನಾನು ಹಿಂದೆ ಇದ್ದಾಗ ಯಾವ ರೀತಿ ಇತ್ತೋ, ಈಗಲೂ ಅದೇ ಪರಿಸ್ಥಿತಿ ಇದೆ. Contract appointments ಗೆ ಅವಕಾಶವಿದೆ. ಬೇಗ ಬೇಗ ನೀವು ಅವರಿಗೆ ಅಧಿಕಾರ ಕೊಟ್ಟು first service come first serve ಎಂದು ನೀವು cabinet ನಲ್ಲಿ decision ತೆಗೆದುಕೊಳ್ಳಬಹುದು. ಅವರನ್ನೇನೂ permanent ಮಾಡಿಕೊಳ್ಳುವುದಿಲ್ಲ. ಯಾರು ಬರುತ್ತಾರೆ ಅವರಿಗೆ appointment ಕೊಡಿ. NRHM ನಲ್ಲೂ ಕೂಡ ನನ್ನ ಯಾದಗಿರಿಯಲ್ಲಿ ನಾನೇ appoint ಮಾಡಿದೆ 70 ಸಾವಿರ ರೂಪಾಯಿ ಕೊಟ್ಟು ಅದು temporary. ಅದು Gynecologist ಹುದ್ದೆ ಆಮೇಲೆ, ಎಲ್ಲರ ಸಹಕಾರವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. Doctors ಪಗಾರ ಹೆಚ್ಚು ಮಾಡಿ. ಸಂಬಳ ಹೆಚ್ಚು ಮಾಡಿ. ನಮ್ಮ ಭಾಗದಲ್ಲಿ ಸಂಬಳವನ್ನು ಪಗಾರ ಎನ್ನುತ್ತೇವೆ. ದಯಮಾಡಿ, ಸಂಬಳ ಹೆಚ್ಚು ಮಾಡಿ. ಕೇರಳ ಆದೇನೂ industrialized state ಅಲ್ಲ Whereas Karnataka is a highly industrialized State in the Country. ಅದಕ್ಕೆ ಈ ಲಕ್ಷಣ. ಇಲ್ಲಿ ಎಲ್ಲಾ ಬಹಳ costly ಆಗುತ್ತಿದೆ. Kerala is a poorer state though they are well-off it is a poorer state. One of the poorer state. ಅಲ್ಲಿ 60 ಸಾವಿರ ರೂಪಾಯಿ ಕೊಡುತ್ತಾರೆ. ನಮ್ಮ ಬ್ರದರ್ ಮಗ ಒಬ್ಬ ಅಲ್ಲಿ Medical Officer ಆಗಿದ್ದಾನೆ. ನಿಮ್ಮಲ್ಲಿ 15 ಸಾವಿರ ರೂಪಾಯಿಗಳನ್ನು ಕೊಡುವುದಿಲ್ಲ. ಅಲ್ಲಿ ಎಲ್ಲಾ emoluments ಸೇರಿ 60 ಸಾವಿರ ರೂಪಾಯಿ

ಪಗಾರವಿದೆ ಎನ್ನುತ್ತಾರೆ. ಸ್ವಲ್ಪ ಹೆಚ್ಚಿಗೆ ಮಾಡಿ. ಡಾಕ್ಟರ್ಸ್ ಏಕೆ ಬರುವುದಿಲ್ಲ ? ನಿಮ್ಮ ಸರ್ಕಾರ ಅಧಿಕಾರಕ್ಕೆ ಸಂಬಳ ಮಾಡಿದ್ದೀರಿ. I compliment, But that is not enough. ಅದು ಸಾಕಾಗುವುದಿಲ್ಲ. ಎಲ್ಲಾ ಸೇರಿ minimum 50 ಸಾವಿರ ರೂಪಾಯಿ ಬರುವ ಹಾಗಾದರೂ ಮಾಡಿ. UGC ಯವರು Lecturers ಗೆ ಹೆಚ್ಚು ಮಾಡಿದ್ದಾರೆ. ನಮ್ಮ Brother-in-law ಸೇರಿದಂತೆ ಜಮಖಂಡಿಯಲ್ಲಿ 4–5 ಜನ teachers ಇದ್ದಾರೆ. ಅವರು ನಮ್ಮನ್ನು ನಿಮ್ಮ ಸರ್ಕಾರ ಎಷ್ಟು ಹೆಚ್ಚಿದೆ ಎಂದು ಕೇಳುತ್ತಾರೆ. ಏಕೆಂದರೆ ನಮಗೆ 80 ಸಾವಿರ ರೂಪಾಯಿ ಪಗಾರ ಇದೆ, ನಾವು ಪ್ರತಿ ದಿನ 1–2 ಕ್ಲಾಸ್ ತೆಗೆದುಕೊಳ್ಳತ್ತೇವೆ, ವರ್ಷದಲ್ಲಿ 6 ತಿಂಗಳು ಮಾತ್ರ ನಾವು ಕಲಿಸುವುದು. Saturday, Sunday Holiday and Mid Term Holidays, Annual Holidays ಇದೆ. ನಾವು ಕಲಿಸುವುದೇ 6 ತಿಂಗಳು. ನಮಗೆ 60 ಸಾವರಿ ರೂಪಾಯಿ ಪಗಾರ ಕೊಡುತ್ತಾರೆ. ಏಕೆ ಇದು ಎಂದು ಕೇಳುತ್ತಾರೆ. ಅಲ್ಲ, ಏನು system ಇದೆಯೋ ನನಗೆ ಗೊತ್ತಿಲ್ಲ. ಅದೇನೋ Parkinson Law ಪ್ರಕಾರ ಒಬ್ಬರಿಗೆ ಹೆಚ್ಚು ಮಾಡಿದರೆ peon ಗೆ ಹೆಚ್ಚು ಮಾಡಿದರಾಯಿತು. Chief Secretary ಯವರೆಗೆ ಹೆಚ್ಚಾಗುತ್ತದೆ. ಸರ್ಕಾರದಲ್ಲಿ ಈ system ಇದೆ. ಇರಲಿ, Whatever it is. But everyone is well paid, why can't you pay little more to the Doctors ಕೊರತೆ ಇದೆ ಎನ್ನುತ್ತೀರಿ, ಆ ಕೊರತೆ ನೀಗುತ್ತದೆ. Teachers ಅನ್ನು temporary ಯಾಗಿ ನೇಮಕ ಮಾಡಿಕೊಳ್ಳಿ. ಏಕೆಂದರೆ reservations system ನಲ್ಲಿ ಸ್ವಲ್ಪ late ಆಗುತ್ತದೆ. ಏಕೆಂದರೆ ಸಿಂಧುತ್ವ ತರಬೇಕು ಅದು ತರಬೇಕು ಎನ್ನುವುದರಲ್ಲಿ ಬಹಳ ಲೇಟಾಗುತ್ತದೆ. Minor Irrigation department ನಲ್ಲಿ ಸರ್ಕಾರ ಬಹಳಷ್ಟು ಬಡತನ ನಿವಾರಣೆಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಬಡತನ ನಿವಾರಣೆ ಎಂದರೆ, ನಾವಷ್ಟೆ ಅಲ್ಲ ಕೇವಲ ಶಾಸಕರು, ಅಧಿಕಾರಿಗಳ ಬಡತನ ನಿವಾರಣೆ ಅಲ್ಲ. ಬಡತನ ನಿವಾರಣೆ ಎಂದರೆ ಕಡು ಬಡವನ ಬಡತನ ನಿವಾರಣೆ. ಇದು ಆಗಬೇಕಾದರೆ, ನೀರಾವರಿಗೆ ನಾವು ಬಹಳ ಮಹತ್ವ ಕೊಡಬೇಕಾಗುತ್ತದೆ. ಅದಕ್ಕಾಗಿಯೇ ರಾಜಶೇಖರ ರೆಡ್ಡಿಯವರು 33 ಸಾವಿರ ಕೋಟಿ ರೂಪಾಯಿ Canal Barrages complete ಮಾಡಿದ್ದಾರೆ. ಅದಕ್ಕೆ ಕೇಂದ್ರ ಸರ್ಕಾರ ಸಹಾಯ ಮಾಡಿದೆ ಎಂದು ನಾನು ತಿಳಿದುಕೊಂಡಿದ್ದೆ.. ಆದರೆ ಅದಕ್ಕೆ ಕೇಂದ್ರ

ಸರ್ಕಾರ ಸಹಾಯ ಮಾಡುವುದಕ್ಕೆ ಬರಲ್ಲವಂತೆ. Maximum 500 crores ತೆಗೆದುಕೊಂಡಿದ್ದಾರೆ ಅಷ್ಟೆ. Where there is a will there is a way. State Resources ನಿಂದ ಐದು ವರ್ಷದಲ್ಲಿ ನಮ್ಮಲ್ಲಿ 12 Lift Irrigation ಇವೆ. ನೀವು ನಂಬುತ್ತೀರೋ ಇಲ್ಲವೋ 12 ಸಾವಿರ ಎಕೆರೆ ನೀರಾವರಿ ಭೂಮಿ ಇಲ್ಲ. Capital Investment Waste ಇದು ರಾಜ್ಯ ಸರ್ಕಾರದ ಕಾರ್ಯವೈಖರಿಯ ದೊಡ್ಡ ಕನ್ನಡಿ. 12 ಎಕೆರೆ ನೀರಾವರಿ ಭೂಮಿ ಇಲ್ಲ. ಏಕೆಂದು ನೀವು ಕೇಳಬಹುದು. ಒಂದು ಪಂಪ್‌ಸೆಟ್ ಕೆಡುತ್ತದೆ. ಅದನ್ನು ಕೊಂಡುಕೊಳ್ಳುವುದಕ್ಕೆ ಪಾಪ Engineer ಹತ್ತಿರ ರೊಕ್ಕ ಇಲ್ಲ. ರಿಪೇರಿ ಮಾಡಸಲಿಕ್ಕೆ ಅವನ ಬಳಿ ಹಣವಿಲ್ಲ. Lift ಇದ್ದಲ್ಲಿ ಒಬ್ಬ ಪಂಪ್ ಆಪರೇಟರ್ ಬೇಕಾಗುತ್ತಾನೆ. ಪಂಪ್ ಆಪರೇಟರ್ ಇಲ್ಲ. ಇದೇ Lift Irrigation Scheme ಬಳ್ಳಾರಿಯಲ್ಲಿ ಏಕೆ 100% successful ಆಗಿದೆ. ನಮ್ಮ ಮಿತ್ರರೊಬ್ಬರು ಹೇಳಿದರು ಬಳ್ಳಾರಿಯಲ್ಲಿ Lift Irrigation Scheme ಬಹಳ ಚೆನ್ನಾಗಿ ಕೆಲಸ ಮಾಡುತ್ತೇವೆಮದು ಹೇಳಿದರು. ಮತ್ತೆ ನಮ್ಮ ಯಾದಗಿರಿಯಲ್ಲಿ ಏಕೆ ಆಗುತ್ತಿಲ್ಲ ? Atleast ಒಂದು ಜಿಲ್ಲೆಯಲ್ಲಾದರೂ ಗಣನೀಯವಾಗಿ ಬಡತನ ಕಡಿಮೆ ಮಾಡಬಹುದಲ್ಲ. ಬೇಕಾದರೆ ನೀವು ಯಾದಗಿರಿಗೆ ಬಂದು ರೈಲ್ವೆ ಸ್ಟೇಷನ್‌ನಲ್ಲಿ ಬಂದು ಕುಳಿತು ನೋಡಿ ಪ್ರತಿ ದಿನ ಸುಮಾರು 200 ಜನ ಬೆಂಗಳೂರಿಗೆ ಹೊಟ್ಟೆ ಪಾಡಿಗೆ ಬದುಕಲಿಕ್ಕೆ ಬರುತ್ತಾರೆ. ಏಕೆಂದರೆ, ಕೂಲಿ ಇಲ್ಲ, ಕೆಲಸ ಇಲ್ಲ, ಬರಗಾಲ. ಬರಗಾಲ ಎಂದರೆ ವಿಪರೀತ ಬರಗಾಲವಿದೆ. ನನ್ನ 76 ವರ್ಷ ವಯಸ್ಸಿನಲ್ಲಿ ಇಂಥ ಬರಗಾಲವನ್ನು ನೋಡಿಲ್ಲ. ಹಿಂದೆ 1973 ರಲ್ಲಿ ಬಂದರೂ ಕೂಡ ಈ ರೀತಿಯಾಗಿ ಇಷ್ಟೊಂದು ಇರಲಿಲ್ಲ. ಲಿಂಗನಮಕಿಕಯೂ ಕೂಡ ಖಾಲಿ ಇದೆ. ನೀರೇ ಇಲ್ಲ ಎಂದು ಯಾರೋ ಹೇಳಿದರು. ಕಾಗೆ ಗುಬ್ಬಿಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ನಾರಾಯಣಪುರ ಡ್ಯಾಂ ಕೂಡ ಪೂರ್ತಿ ಖಾಲಿಯಾಗಿದೆ. ಏನೂ ಇಲ್ಲ. I don't know ನಮ್ಮ ವಿದ್ಯುತ್ತಿನ ಮಂತ್ರಿಗಳು ಮುಂದೆ ಯಾವ ರೀತಿ ನಿರ್ವಹಣೆ ಮಾಡುತ್ತಾರೋ ನನಗಂತೂ ಗೊತ್ತಿಲ್ಲ. ದೇವರು ಅವರಿಗೆ ಶಕ್ತಿ ಕೊಡಲಿ. ಸದ್ಯ ಅಂತು ಗಂಭೀರದ ಪರಿಸ್ಥಿತಿ ಇದೆ. ಜನರಿಗೆ ನಿಮ್ಮ ಪರವಾಗಿ ನಾನೇ ತಿಳಿಸಿ ಹೇಳುತ್ತೇನೆ. ಏಕೆಂದರೆ, ನಾವು ಕಣ್ಣಾರೆ ನೋಡಿದವರು, ತಿಳಿದವರು ತಪ್ಪು ಮಾಡಬಾರದು. ಎಲ್ಲಿಂದ ತರುತ್ತಾರೆ ಕರೆಂಟ್‌ನ್ನು ಅವರ ಮನೆಯಿಂದ ಉತ್ಪತ್ತಿ ಮಾಡುತ್ತಾರೆಯೆ, ಪರಿಸ್ಥಿತಿ ಹೀಗಿದೆ ನಾವು ಹೊಂದಿ ಕೊಂಡು ಹೋಗಬೇಕು. ನಾವು ಏನು ಮಾಡುವುದಕ್ಕಾಗುತ್ತದೆ,

ನಾಳೆ ಕಂದೀಲು ಉಪಯೋಗಿಸುವ ಪರಿಸ್ಥಿತಿ ಬಂದರೂ ಬರಬಹುದು. ಪ್ರತಿಯೊಂದಕ್ಕೂ ನಾವು ರೆಡಿ ಇರಬೇಕಾಗುತ್ತದೆ. ಪರಿಸ್ಥಿತಿ ಈ ರೀತಿ ಇದೆ. ಅದನ್ನು ತಾವು ಯಾವ ರೀತಿ ನಿರ್ವಹಣೆ ಮಾಡುತ್ತೀರೊ ಗೊತ್ತಿಲ್ಲ. ಮಾನ್ಯ ಅಧ್ಯಕ್ಷರೆ, ನನಗೆ ತಾವು ಸಾಕಷ್ಟು ಸಮಯ ಕೊಟ್ಟಿದ್ದೀರಿ ನನಗೆ ಏಕೋ ಬಾಯಿ ಬತ್ತಲಿಕ್ಕೆ ಹತ್ತಿದೆ. ನಾನು ಈಗ ಸೂಕ್ಷ್ಮ ರೀತಿಯಿಂದ ಹೇಳಿದ್ದೇನೆ. ಮಾನ್ಯ ಲಿಂಬಾವಳಿಯವರೆ, ನನ್ನ ಹುಟ್ಟಿದೂರಿನಲ್ಲಿ ಒಂದು Community Health Centre ಮಾಡಿಸಿದ್ದೆ ಅಲ್ಲಿ ಈಗ ಒಬ್ಬ ಡಾಕ್ಟರ್ ಇಲ್ಲ. ಯಾರೊ ಇನ್‌ಚಾರ್ಜ್ ಇಟ್ಟಿದ್ದಾರೆ ಅವರು ಒಂದು ತಾಸು ಎರಡು ತಾಸು ಬಂದು ಹೋಗುತ್ತಾರೆ. ಎಲ್ಲಾ ಕಡೆ ಇದೇ ಪರಿಸ್ಥಿತಿ. Community Health Centre ನಲ್ಲಿ ಕನಿಷ್ಠ 9 ಜನ ಡಾಕ್ಟರ್ಸ್ ಇರಬೇಕೆಂದು ಇದೆ. 4 Specialist ಇರಬೇಕೆಂದು ಇದೆ. ಜನರಲ್ ರೋಗ ಆಗಿ ಹೋಗತಕ್ಕಂಥ patient ನೋಡುವುದಕ್ಕೂ ಒಬ್ಬ ಡಾಕ್ಟರ್ ಇಲ್ಲ. ನೀವು DHO ಗೆ Powers ಕೊಟ್ಟುಬಿಡಿ District Commissioner ಗೂ ಕೂಡ ಬೇಡ. ಇವರಿಗೂ ಕೊಟ್ಟರೂ ಕೂಡ first come first serve ಎನ್ನುವ ರೀತಿಯಲ್ಲಿ ಯಾರು ಬರುತ್ತಾರೆ ಅವರಿಗೆ appointment ಕೊಡಲಿಕ್ಕೆ ಹೇಳಿ. ಸ್ವಲ್ಪ ಪಗಾರ ಹೆಚ್ಚಿಗೆ ಮಾಡಿದರೆ ಏಕೆ ಬರುವುದಿಲ್ಲ, ಬರುತ್ತಾರೆ. ದಯಮಾಡಿ contract basis ಮೇಲೆ appointment ಮಾಡಬೇಕು. NRHM ನಲ್ಲಿ scope ಇತ್ತು ನಾನು ಮಾಡಿಲ್ಲವೆ ? 70 ಸಾವಿರ ಕೊಟ್ಟು ಒಬ್ಬ ಡಾಕ್ಟರ್ ತೆಗೆದುಕೊಂಡು ಬಂದಿದ್ದೇನೆ. ಏಕೆಂದರೆ, Health Committee ಗೆ ನಾನು Chairman. ನಾನು ಅಲ್ಲಿ ಒಬ್ಬ ಡಾಕ್ಟರ್‌ನ್ನು ರೆಡಿ ಮಾಡಿದೆ. 70 ಸಾವಿರ ಕೊಟ್ಟು ತಂದು ಇಟ್ಟಿದ್ದೇನೆ. ನಿಮಗೆ ಸರ್ಕಾರಕ್ಕೆ ಏಕೆ ಆಗುವುದಿಲ್ಲ. ಕೇಂದ್ರ ಸರ್ಕಾರದಿಂದ ರೊಕ್ಕ ಇದೆ ಅದನ್ನು ತೆಗೆದುಕೊಂಡು ಮಾಡಿದ್ದೇನೆ. ಅದೇ ರೀತಿ ನಿಮಗೆ ಎಲ್ಲೆಲ್ಲಿ ಅವಕಾಶವಿದೆ ಅಲ್ಲಲ್ಲಿ ನೀವು ಮಾಡಿ. ಏಕೆಂದರೆ ನೀವು ಆ ಕಮಿಟಿಗೆ ಚೇರ್‌ಮನ್ ಇದ್ದು ನಿಮಗೆ ಪವರ್ಸ್ ಇರುತ್ತದೆ. NRHM ಸ್ಕೀಂ ನಲ್ಲಿ ಹಣವಿದೆ ನೀವು ಅಲ್ಲಿ ಮಾಡಬಹುದು. ಇದು ಬಹಳ ಜನರಿಗೆ ಗೊತ್ತಿರಲಿಕ್ಕಿಲ್ಲ. ದಯಮಾಡಿ ನೀವು ಕೂಡ ಅದನು ಆ ರೀತಿ ಮಾಡಿ 7–8 ತಿಂಗಳುಗಳಲ್ಲಿಯೂ ಕೂಡ ನೀವು ಒಳ್ಳೆಯ ಹೆಸರು ತೆಗೆದುಕೊಳ್ಳಬಹುದು. ನಿಮ್ಮನ್ನು ಟೀಕೆ ಮಾಡಡುವ ಪರಿಸ್ಥಿತಿಯಲ್ಲಿ ನಾನಿಲ್ಲ. ಏಕೆಂದರೆ ನೀವು ಮೊನ್ನೆ ಮೊನ್ನೆ ಚಾರ್ಜ್ ತೆಗೆದುಕೊಂಡಿದ್ದೀರಿ. ಆದರೆ, ನೀವು ರಿವ್ಯೂ ಮಾಡಬೇಕು. A review is one of the very good systems in enforcing the

efficiency. ಮತ್ತ ಮತ್ತೆ ರಿವ್ಯೂ ಮಾಡುತ್ತಾ ಹೋದರೆ. ಅಧಿಕಾರಿಗಳು ಮಾಡುತ್ತಾರೆ ಮಾಡುವುದಿಲ್ಲವೆಂದು ಹೇಳುವುದಿಲ್ಲ. ನೀವು ಕೇಳಲ್ಲ ಎಂದರೆ ಅವರು ಕೂಡ holiday mood ನಲ್ಲಿ ಇರುತ್ತಾರೆ. ದಯಮಾಡಿ ಸಾಕಷ್ಟು ವಿಚಾರಗಳನ್ನು ಹೇಳುವುದಕ್ಕೆ ಸನ್ಮಾನ್ಯ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಾರೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಅಧ್ಯಕ್ಷರು** : – ದೊಡ್ಡನಗೌಡ ಪಾಟೀಲ್ ಅವರು ಇಲ್ಲ. ಸಂಜಯ ಪಾಟೀಲ್ ಅವರು ಇಲ್ಲ. ಹಾಲಪ್ಪ ಅವರು ಇಲ್ಲ. ಯಾರಾದರೊಬ್ಬರು ಮಾತನಾಡಿ ನೀವು ವಿಠಲ ಧೋಂಡಿಬಾ ಕಟಕಧೋಂಡರವರು ಮಾತನಾಡಿ. ಹದಿನೈದು ನಿಮಿಷದಲ್ಲಿ ಮುಗಿಸಿ.

**ಶ್ರೀ ಕಟಕಧೊಂಡ ವಿಠಲ ಧೊಂಡಿಬಾ (ನಾಗಠಾಣ)** : – ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಪ್ರಪ್ರಥಮದಲ್ಲಿ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ನಾನು ಬೆಂಗಳೂರಿನಿಂದ 600 ಕಿ.ಮೀ. ಅಂತರದಲ್ಲಿರುವ ಕರ್ನಾಟಕದ ಕಟ್ಟ ಕಡೆಯ ಮಹಾರಾಷ್ಟ್ರದ ಮೊದಲನೆಯ ಹಳ್ಳಿಯಿಂದ ಬಂದವರು. ಬಿಜಾಪುರ ಜಿಲ್ಲೆ. ಬಿಜಾಪುರ ಜಿಲ್ಲೆಯ ಬಗ್ಗೆ ತಮಗೆ ಈಗಾಗಲೇ ಗೊತ್ತಿರಬಹುದು. ಬಿಜಾಪುರ ಏಕೆ ಪ್ರಸಿದ್ಧವೆಂದರೆ, ಮೊದಲನೆಯದು ಗೋಳಗುಮ್ಮಟ, ಒಮ್ಮೆ ನಾವು ಮಾತನಾಡಿದರೆ ಏಳು ಬಾರಿ ಪ್ರತಿಧ್ವನಿ ಕೊಡುವ ಗೋಳಗುಮ್ಮಟ ಇದು ಎಂಟನೆಯ ಅದ್ಭುತ. ಅಷ್ಟೆ ಅದ್ಭುತ ಬಿಜಾಪುರ ಜಿಲ್ಲೆ ಯಾವುದಕ್ಕೆ ಎಂದರೆ ಬರ. ಬರದ ಪರ್ಯಾಯ ಹೆಸರೇ ಬಿಜಾಪುರ, ಅದಕ್ಕೆ ನಾನು ಬಿಜಾಪುರ ಜಿಲ್ಲೆಯ ಬರ ಮತ್ತು ಅದಕ್ಕೆ ಕೈಕೊಳ್ಳಬೇಕಾದ ಕ್ರಮಗಳ ಬಗ್ಗೆ ಮಾತನಾಡಬೇಕೆಂದು ಯೋಚಿಸಿ ತಮ್ಮ ಹತ್ತಿರ ನಿಂತಿದ್ದೇನೆ. ಇವತ್ತು ಬಿಜಾಪುರ ಜಿಲ್ಲೆಯಲ್ಲಿ ಸರಾಸರಿ ಮಳೆ ವಾಡಿಕೆಯಾಗುವ ಮಳೆ ಎಷ್ಟು ಅಂದರೆ 630 ಮಿ.ಮೀ. ಆದರೆ, 100 ವರ್ಷಗಳ ಈ ಮಳೆ ಬಿದ್ದಂಥ ಇತಿಹಾಸ ತೆಗೆದುಕೊಂಡರೆ ಬಿಜಾಪುರ ಜಿಲ್ಲೆಯಲ್ಲಿ 77 ವರ್ಷ ವಾಡಿಕೆಗಿಂತ ಸರಾಸರಿಗಿಂತ ಕಡಿಮೆ ಮಳೆ. ಕೇವಲ 23 ವರ್ಷ ವಾಡಿಕೆಗಿಂತ ಸರಾಸರಿಗಿಂತ ಹೆಚ್ಚು ಮಳೆ. ಅಂದರೆ, ನಮ್ಮ ಬಿಜಾಪುರ ಜಿಲ್ಲೆಯ ಪರಿಸ್ಥಿತಿ ಹೇಗಿದೆ ಎಂದರೆ, ಮಳೆ ಬಾರದೆ ಒಣ ಬರ, ಒಮ್ಮೆ ಮಳೆ ಬಂತು ಎಂದರೆ ಹಸಿ ಬರ. ಮಳೆ ಹೆಚ್ಚಾಗಿ ಅತಿವೃಷ್ಟಿ. 77 ವರ್ಷ ಅನಾವೃಷ್ಟಿಯಿಂದ ತೊಂದರೆಗೊಳಗಾದರೆ 23 ವರ್ಷ ಅತಿವೃಷ್ಟಿಯಿಂದ ತೊಂದರೆಯಾಗಿದೆ. ಈ ತರಹ ನಮ್ಮ ಬಿಜಾಪುರ ಜಿಲ್ಲೆಯ ಪರಿಸ್ಥಿತಿ ಇದೆ. ಆದರೆ, ಇಂಥ ಪರಿಸ್ಥಿತಿಯಲ್ಲಿದ್ದರೂ ಸಹ ನಾವು ಸ್ವಾತಂತ್ರ ಪಡೆದು 65 ವರ್ಷಗಳಾದವು. ನಾವು ಈ ಖಾಯಂ ಬರವನ್ನು ಹೊಡೆದೊಡಿಸಬೇಕಾದರೆ ಅದಕ್ಕೆ ದೂರದೃಷ್ಟಿವುಳ್ಳಂಥ ಕಾರ್ಯಕ್ರಮಗಳನ್ನು

ಯಾವುದೇ ಸರ್ಕಾರ ಹಮ್ಮಿಕೊಳ್ಳಲಿಲ್ಲ ಎಂಬುದು ನನ್ನ ವೇದನೆ. ತಮಗೆ ಗೊತ್ತಿದೆ. ಬಿಜಾಪುರ ಜಿಲ್ಲೆಯಲ್ಲಿ ಬರವನ್ನು ಖಾಯಂ ಆಗಿ ಹೊಡೆದೊಡಿಸಲಿಕ್ಕೆ ಸಾಕಷ್ಟು ನೈಸರ್ಗಿಕ ಸಂಪತ್ತು ಇದೆ. ಬರವನ್ನು ಹೊಡೆದೊಡಿಸಬೇಕಾದರೆ ಮೊದಲು ನೀರಿನ ಅವಶ್ಯಕತೆ ಬೇಕು. ನಮ್ಮ ಅಖಂಡ ಬಿಜಾಪುರ ಜಿಲ್ಲೆಯಲ್ಲಿ 5 ನದಿಗಳು ಅಂದರೆ, ಕೃಷ್ಣಾ, ಭೀಮಾ, ಡೋಣಿ, ಘಟಪ್ರಭಾ, ಮಲ್ಲಪ್ರಭಾ ಈ ಐದು ನದಿಗಳು ಹರಿದರು ಸಹ ಇವತ್ತ ನಾವು ಯಾವ ಮಟ್ಟಕ್ಕೆ ಬಂದು ನಿಂತಿದ್ದೇವೆಂದರೆ, ನನ್ನ ಕ್ಷೇತ್ರದಲ್ಲಿ 1 ಸಾವಿರ ಅಡಿವರೆಗೆ ಕೊಳವೆ ಬಾವಿ ಕೊರೆದರೂ ಸಹ ಒಂದು ಹನಿ ನೀರು ಬಾರದೆ ಇರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ದೂರದೃಷ್ಟಿಯಲ್ಲಿ ಹೇಳುವುದಾದರೆ, ಬರಪೀಡಿತವೇ ಇದಕ್ಕೆ ಕಾರಣ ಎಂದು ನನ್ನ ಭಾವನೆಯಾಗಿದೆ. ತಮಗೆಲ್ಲ ಗೊತ್ತಿರವಂತೆ ಹಿಂದೆ ಬ್ರಿಟಿಷ್ ಸರ್ಕಾರ ಸಹ ಬರದ ಇತಿಹಾಸ ಹೊಂದಿರುವ ಬಿಜಾಪುರ ಜಿಲ್ಲೆಯನ್ನು ಅಭಿವೃದ್ಧಿಪಡಿಸಬೇಕೆಂದು 1927ರಲ್ಲಿ ಬರ ನಿವಾರಣ ಸಂಸ್ಥೆಯೊಂದನ್ನು ಸ್ಥಾಪಿಸಿ ರೈತರ ಹೊಲಕ್ಕೆ ನೀರು ಕೊಡುವ ಒಂದು ಯೋಜನೆ ಮತ್ತು ಇದ ಜೊತೆಗೆ ಬರವನ್ನು ಹೊಡೆದೊಡಿಸಬೇಕಾದರೆ ಏನು ಮಾಡಬೇಕೆಂದು ಚಿಂತನೆ ಮಾಡಿ 8 ಬ್ಯಾಂಚ್‌ಗಳನ್ನು ಸ್ಥಾಪನೆ ಮಾಡಿತ್ತು. ಆದರೆ, 1965 ರಲ್ಲಿ ನಮ್ಮನ್ನು ಆಳಿದಂಥ ನಮ್ಮ ಸರ್ಕಾರಗಳೇ ಈ ಬರ ನಿವಾರಣ ಸಂಸ್ಥೆಯನ್ನು ರದ್ದು ಮಾಡಿದರು. ಇಷ್ಟೊಂದು ಕೆಟ್ಟ ಪರಿಸ್ಥಿತಿಯಲ್ಲಿ ಇವತ್ತಿನ ದಿವಸ ಬಿಜಾಪುರ ಜಿಲ್ಲೆಯಲ್ಲಿ ಎಲ್ಲದಕ್ಕೂ ಸಹ ಬರ ಬಂದಿದೆ. ಇದರ ಬಗ್ಗೆ ಹೇಳುವುದಾದರೆ, ಶಾಸಕರಾದ ನಾವು ನಮ್ಮ ಕ್ಷೇತ್ರಕ್ಕೆ ಒಂದು ಬಸ್ ಬೇಕೆಂದರೆ ಆ ಜಿಲ್ಲೆಯ 8 ಜನ ಸದಸ್ಯರು ಕುಳಿತು ನಮ್ಮ ಸಾರಿಗೆ ಸಚಿವರ ಹತ್ತಿರ ಹೋಗಿ ಒಂದು ಬಸ್ ಕೊಡಿ ಎಂದು ಕೇಳುವಂತಾಗಿದೆ. ಅಂದರೆ, ನಮ್ಮಲ್ಲಿ ಬಸ್‌ಗೂ ಸಹ ಬರ ಬಂದಿದೆ. ಒಟ್ಟಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಬರದ ಪ್ರಭಾವ ಎಷ್ಟೊಂದು ಭೀಕರವಾಗಿದೆ ಎಂದರೆ ಈ ಸದನದಲ್ಲಿರುವವರಿಗೆ ನಮ್ಮ ಬಿಜಾಪುರ ಜಿಲ್ಲೆಯ ಕೂಗು ಕೇಳಿಸುತ್ತದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಏಕೆಂದರೆ, ಎಲ್ಲದಕ್ಕೂ ನಮ್ಮಗೆ ಬರಬಂದಿದೆ. ಇಂಥ ಸ್ಥಿತಿಯಲ್ಲಿ ನಾವು ಇರುವಾಗ ಇವತ್ತು ನನ್ನ ಎರಡು-ಮೂರು ಅನಿಸಿಕೆಗಳನ್ನು ತಮ್ಮ ಮುಂದೆ ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ, ಬರ ನಿವಾರಣೆಗೋಸ್ಕರ ನಮ್ಮ ಕೃಷ್ಣಾ ಕೊಳದ ಯೋಜನೆಗಳನ್ನು ಸಂಪೂರ್ಣವಾಗಿ, ಶೀಘ್ರಗತಿಯಲ್ಲಿ ತಾವು ಕೈಗೊಳ್ಳಬೇಕು. ಅಲ್ಲಿ ಸಾಕಷ್ಟು ನೀರು ಇದ್ದರು ಸಹಿತ ನಮಗೆ ಕುಡಿಯುವುದಕ್ಕೆ ನೀರು ಸಿಗುತ್ತಿಲ್ಲ. ಇಂಥ ಒಂದು ಸ್ಥಿತಿಯನ್ನು ನಾವು ನಿವಾರಣೆಗೊಳಿಸಬೇಕಾದರೆ ಕೃಷ್ಣಾ ಕೊಳದ ಯೋಜನೆಗಳನ್ನು ಮೂಲ ನಕ್ಷೆಯ ಪ್ರಕಾರ ಮಾಡಬೇಕು. ಅದರೆ, ಇವತ್ತಿನ

ದಿವಸ ಏನಾಗಿದೆ ಎಂದರೆ, ಕೃಷ್ಣಾ ಕೊಳದ ಯೋಜನೆಯಲ್ಲಿರುವ ಮೂಲ ನಕ್ಷೆಯನ್ನು ಬದಲಾವಣೆ ಮಾಡಿ ಇವತ್ತು ನೀರಿನ ಆಲೋಕೇಷನ್ ಅನು ಕಡಿಮೆ ಕಡಿಮೆ ಮಾಡಿ ಬೇರೆ ಜಿಲ್ಲೆಗಳಿಗೆ ಕೊಟ್ಟಿದ್ದಾರೆ. ಅಲ್ಲಿ ಆಲಮಟ್ಟಿ ಡ್ಯಾಂ ಕಟ್ಟುವುದಕ್ಕೆ ಸುಮಾರು 2 ಲಕ್ಷ ಹೆಕ್ಟೇರ್ ಜಮೀನನ್ನು ನಾವು ಕಳೆದುಕೊಂಡಿದ್ದೇವೆ. ಆದರೆ, ವಾಸ್ತವ ಸ್ಥಿತಿ ನೋಡಿದರೆ ಇವತ್ತು ನಮ್ಮ ಜಿಲ್ಲೆಯಲ್ಲಿ ಇದುವರೆಗೆ 2 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಆಗಿಲ್ಲ. ಆದರೆ, ನಾವು 2 ಲಕ್ಷ ಹೆಕ್ಟೇರ್ ಭೂಮಿಯನ್ನು ಕಳೆದುಕೊಂಡಿದ್ದೇವೆ. ಇಂಥ ಸ್ಥಿತಿಯಲ್ಲಿರುವಾಗ ನಮ್ಮ ಸರ್ಕಾರ ಬಂದ ಮೇಲೆ 17,265 ಕೋಟಿ ರೂಪಾಯಿ ವೆಚ್ಚದಲ್ಲಿ ಕೃಷ್ಣಾ ಕೊಳದ ಯೋಜನೆಗಳನ್ನು 5 ವರ್ಷಗಳಲ್ಲಿ ಸಂಪೂರ್ಣ ಮಾಡುತ್ತೇವೆಂದು ಅದಕ್ಕೆ ಕ್ರಿಯಾ ಯೋಜನೆ ಮಾಡಿ ನಮಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಆದ್ದರಿಂದ, ಈ ಸದನದ ಮೂಲಕ ನಾನು ಪ್ರಥಮದಲ್ಲಿ ಇವರಿಗೆ ಕೃತಜ್ಞತೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ಆದರೆ, ಆ ಕೆಲಸವನ್ನು ಗ್ಲೋಬಲ್ ಟೆಂಡರ್ ಕರೆದು ಶೀಘ್ರಗತಿಯಲ್ಲಿ ಆ ಕೆಲಸ ಮಾಡಿದರೆ ತುಂಬಾ ಒಳ್ಳೆಯದಾಗುತ್ತದೆಂಬುದು ನನ್ನ ಭಾವನೆ, ಇಷ್ಟೆಲ್ಲ ಕೆಟ್ಟ ಪರಿಸ್ಥಿತಿ ಇದ್ದರೂ ಸಹ ಬೇರೆ ಕಡೆಗಿಂಥ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆಂದರೆ ಅದು ಬಿಜಾಪುರ ಜಿಲ್ಲೆಯಲ್ಲಿ ಮಾತ್ರ, ಅದಕ್ಕೆ ಕಾರಣ ಏನೆಂದರೆ, ಬಿಜಾಪುರ ಜಿಲ್ಲೆಯಲ್ಲಿ ಅತ್ಯಂತ ಭೀಕರ ಬರಗಾಲ ಇದ್ದರೂ ಸಹ ಅಲ್ಲಿನ ರೈತರು ಪರಿಶ್ರಮಪಟ್ಟು ಇವತ್ತು ದ್ರಾಕ್ಷಿ, ದಾಳಿಂಬೆ, ನಿಂಬೆ ಈ ರೀತಿಯಾಗಿ ತೋಟಗಾರಿಕೆ ಬೆಳೆಯನ್ನು ಬೆಳೆಯುತ್ತಿರುವ ಪರಿಣಾಮ ಇವತ್ತಿನ ದಿವಸ ಜಗತ್ತಿನಲ್ಲಿ ಭಾರತ ದೇಶ ಹಣ್ಣು, ತರಕಾರಿ ಬೆಳೆಯುವುದರಲ್ಲಿ ಪ್ರಥಮ ಸ್ಥಾನದಲ್ಲಿ ಇದ್ದರೆ ಕರ್ನಾಟಕ ರಾಜ್ಯ ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿದೆ. ಕರ್ನಾಟಕ ರಾಜ್ಯದಲ್ಲಿ ಹಣ್ಣು, ಹಂಪಲು ಬೆಳೆಯುವುದರಲ್ಲಿ ಬಿಜಾಪುರ ಜಿಲ್ಲೆ ಮೊದಲನೇ ಸ್ಥಾನದಲ್ಲಿದೆ. ಇಂಥ ಒಂದು ಬಿಜಾಪುರ ಜಿಲ್ಲೆಯಲ್ಲಿ ಇವತ್ತಿನ ದಿವಸ 42 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದೇವೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಾನ್ಯ ತೋಟಗಾರಿಕೆ ಇಲಾಖೆ ಸಚಿವರು ಇಲ್ಲಿರುವುದರಿಂದ ಅವರ ಗಮನಕ್ಕೆ ಈ ವಿಷಯ ತರಬೇಕೆಂಬ ಉದ್ದೇಶದಿಂದ ಮಾತನಾಡುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಯನ್ನು ಹೆಚ್ಚು ಬೆಳೆಯುತ್ತಿದ್ದು ಇದರಲ್ಲಿ ವಿಶೇಷವಾಗಿ 35 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ದ್ರಾಕ್ಷಿ ಬೆಳೆಯುತ್ತಿದ್ದೇವೆ. ದ್ರಾಕ್ಷಿ ಬೆಳೆಯನ್ನು ಬೆಳೆಯಬೇಕಾದರೆ ಎಂಥಾ ಕೆಟ್ಟ ಪರಿಸ್ಥಿತಿ ಇದೆ ಎಂದರೆ. ಇವತ್ತಿನ ದಿವಸ ಒಂದು ಎಕರೆ ಭೂಮಿಯಲ್ಲಿ ದ್ರಾಕ್ಷಿ ಬೆಳೆಯಬೇಕಾದರೆ ಸುಮಾರು 3 ರಿಂದ 4 ಲಕ್ಷ ರೂಪಾಯಿ ಖರ್ಚು ಬರುತ್ತಿದೆ.

ಇವತ್ತು ದ್ರಾಕ್ಷಿ ಬೆಳೆ ಬೆಳೆಯತಕ್ಕಂಥ ಬೆಳೆಗಾರರ ಪರಿಸ್ಥಿತಿ ಯಾವ ಪರಿಸ್ಥಿಗೆ ಬಂದು ನಿಂತಿದೆ ಎಂದರೆ ದ್ರಾಕ್ಷಿ ಬೆಳೆದಂಥ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂಥ ಸ್ಥಿತಿಗೆ ಬಂದಿದ್ದಾರೆ. ಏಕೆಂದರೆ, ಇವತ್ತಿನದಿವಸ ದ್ರಾಕ್ಷಿ ಬೆಳೆಯತಕ್ಕಂಥ ರೈತರಿಗೆ ಯಾವುದೇ ರೀತಿಯ ಸೌಲಭ್ಯಗಳು ಸರ್ಕಾರದಿಂದ ಸಿಗುತ್ತಿಲ್ಲ. ಒಣ ದ್ರಾಕ್ಷಿ ಬೆಲೆ ಯಾವ ರೀತಿಯಾಗಿದೆ ಎಂದರೆ ಒಮದು ಕೆ.ಜಿ. ಒಣ ದ್ರಾಕ್ಷಿಗೆ ಕೇವಲ 60 ರೂಪಾಯಿ ಇದೆ. ಅಂದರೆ, 1 ಕೆ.ಜಿ.ಗೆ 60 ರೂಪಾಯಿಯಂತೆ ಮಾರಾಟವಾಗುತ್ತಿದೆ. ಆದರೆ, 1 ಕೆ.ಜಿ. ದ್ರಾಕ್ಷಿಯನ್ನು ಉತ್ಪಾದನೆ ಮಾಡುವುದಕ್ಕೆ ಕನಿಷ್ಠ 150 ರೂಪಾಯಿ ಆಗುತ್ತದೆ. ಆದರೆ, ರೈತ ಒಂದು ಕೆ.ಜಿ. ದ್ರಾಕ್ಷಿಯನ್ನು ಕೇವಲ 60 ರೂಪಾಯಿಗೆ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಪರಿಸ್ಥಿತಿ ಬಂದಿದೆ. ದ್ರಾಕ್ಷಿ ಬೆಳೆದಂಥ ಬೆಳೆಗಾರರೆಲ್ಲರು ಸೇರಿಕೊಂಡು ಹಿಂದೆ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಅಟಲ್ ಬಿಹಾರಿ ವಾಜಪೇಯಿರವರ ಹತ್ತಿರ ಹೋಗಿ ದ್ರಾಕ್ಷಿ ಬೆಳೆಗಾರರಿಗೆ ವಿಶೇಷ ಸ್ಕೀಂಗಳನ್ನು ಕೊಡಬೇಕೆಂಬ ಬೇಡಿಕೆಯನ್ನು ಇಟ್ಟಿದ್ದರು. ಆ ಸಮಯದಲ್ಲಿ ಕರ್ನಾಟಕ ರಾಜ್ಯದಿಂದ ಮತ್ತು ಕೇಂದ್ರ ಸರ್ಕಾರದಿಂದ ಆಯೋಗ ಬಂದು ಯಾವ್ಯಾವ ರೀತಿಯ ಸೌಲಭ್ಯವನ್ನು ಕೊಡಬೇಕೆಂದು ಮತ್ತು ಅದರ ಬಗ್ಗೆ ಏನು ಮಾಡಬೇಕೆಂದು ಯೋಚನೆ ಮಾಡಿ ಇದನ್ನು ಖಂಡಿತ ಮಾಡುತ್ತೇವೆಂದು ಹೇಳಿ ಹೋದರು. ಆದರೆ, ಇವತ್ತಿನ ದಿವಸ ಯಾವುದೇ ಸರ್ಕಾರ ಇರಲಿ. ಆದರೆ, ಇದುವರೆಗೂ ಸಹ ಅವರು ನೀಡಿದ ವರದಿ ಜಾರಿಯಾಗಿಲ್ಲ. 2002 ರಿಂದ 2008 ರವರೆಗೆ ಒಂದು ಹನಿ ಮಳೆ ಆಗದ ಪರಿಸ್ಥಿತಿಯೊಳಗೆ ದ್ರಾಕ್ಷಿ ಬೆಳೆಯನ್ನು ಬೆಳೆದಂಥ ರೈತರಿಗೆ ಸರ್ಕಾರದ ಕಡೆಯಿಂದ ವಿಶೇಷವಾದಂಥ ಪ್ಯಾಕೇಜ್ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ. ಇವತ್ತಿನ ದಿವಸ ಕೇಂದ್ರ ಸರ್ಕಾರದ ನೆವಿಸ ಜೊತೆಗೆ ರಾಜ್ಯ ಸರ್ಕಾರ ಕೇವಲ 10% ರಷ್ಟು ದುಡ್ಡನ್ನು ಕೊಟ್ಟರೆ ಉಳಿದ 90% ಹಣವನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಈ ಒಂದು ಲಾಭವನ್ನು ನಮ್ಮ ರಾಜ್ಯ ಸರ್ಕಾರ ಪಡೆದುಕೊಂಡು ವಿಶೇಷ ಸೌಲಭ್ಯವನ್ನು ಬಿಜಾಪುರ ಜಿಲ್ಲೆಯ ದ್ರಾಕ್ಷಿ ಬೆಳೆಗಾರರಿಗೆ ಕೊಡಬೇಕೆಂದು ನಾನು ಅಗ್ರಹ ಮಾಡುತ್ತೇನೆ. ಇದರ ಜೊತೆಗೆ ಇನ್ನೊಂದು ವಿಷಯ ಏನೆಂದರೆ, ನಮ್ಮಲ್ಲಿ ವೈನ್‌ಗೆ ಬೇಕಾಗಿರುವ ದ್ರಾಕ್ಷಿಯನ್ನು ಸಹ ಬೆಳೆಯುತ್ತೇವೆ. ಆದ್ದರಿಂದ, ವೈನ್‌ಗೆ ಬೇಕಾಗುವ ದ್ರಾಕ್ಷಿ ಬೆಳೆಯ ಬೆಳೆಗಾರರಿಗೆ ವಿಶೇಷವಾಗಿ ಅಬ್ಕಾರಿ ಇಲಾಖೆಗೆ ಅಟ್ಯಾಚ್ ಮಾಡಿ ಮದ್ಯ ಮಾರಾಟಗಾರರ ಜೊತೆಯಲ್ಲಿ 10% ವೈನ್ ಅನ್ನು ಬಳಸಲೇಬೇಕೆಂದು ನಿಗದಿಪಡಿಸಿದರೆ ಅವರಿಗೊಂದು ವಿಶೇಷವಾದ ಆದ್ಯತೆ ಸಿಕ್ಕಿ ವೈನ್‌ಗೆ ಬೇಕಾಗುವ ದ್ರಾಕ್ಷಿ ಬೆಳೆಯುವ ಬೆಳೆಗಾರರಿಗೆ ಅನುಕೂಲವಾಗುತ್ತದೆ ಎಂಬ ಮಾತನ್ನು ಇಲ್ಲಿ

ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಹಾಗೆಯೇ ದ್ರಾಕ್ಷಿ ಬೆಳೆಯನ್ನು ವಿಶೇಷ ವಿಮಾ ಯೋಜನಾ ಅಡಿಯಲ್ಲಿ ತರಬೇಕೆಂದು ಮಾನ್ಯ ಸಚಿವರಲ್ಲಿ ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಹವಾಮಾನ ಮುನ್ಸೂಚನಾ ಕೇಂದ್ರಗಳನ್ನು ಪ್ರತಿ ಹೋಬಳಿ ಮಟ್ಟದಲ್ಲಿ ಸ್ಥಾಪಿಸಿದ್ದೆ ಆದರೆ ರಾತ್ರಿ ಬೆಳೆಗಾರರಿಗೆ ಒಂದು ಒಳ್ಳೆಯ ಅವಕಾಶ ಸಿಗುತ್ತದೆ. ಈಗ ನಮ್ಮ ಸರ್ಕಾರ 25,000 ರೂಪಾಯಿವರೆಗೆ ಸಾಲವನ್ನು ಮನ್ನಾ ಮಾಡಿದೆ. ಆದರೆ ನನಗನ್ನಿಸುವುದೇನೆಂದರೆ. ಈ 25,000 ರೂಪಾಯಿವರೆಗೆ ಸಾಲವನ್ನು ಮನ್ನಾ ಮಾಡಿರುವುದು ಸಾಮಾನ್ಯ ಬೆಳೆ ಸಾಲ ತೆಗೆದುಕೊಂಡಿರುವ ರೈತರಿಗೆ ಮಾತ್ರ ಅನುಕೂಲವಾಗುತ್ತದೆ. ಆದರೆ, ಈ ದ್ರಾಕ್ಷಿ ಬೆಳೆ ಬೆಳೆಯುವವರ ಪರಿಸ್ಥಿತಿ ಹೇಗಿದೆ ಎಂದರೆ, ಇವತ್ತು ಮಳೆ ಇಲ್ಲದೆ ಇರುವುದರಿಂದ ದ್ರಾಕ್ಷಿ ಬೆಳೆಯನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕೆಂದು ತೀರ್ಮಾನ ಮಾಡಿಕೊಂಡು ರೈತರು ಮನೆಯಲ್ಲಿರುವ ಎಲ್ಲ ಒಡವೆ ವಸ್ತ್ರಗಳನ್ನು ಮಾರಾಟ ಮಾಡಿ ಬೋರ್‌ವೆಲ್ ಕೊರೆದರು ನೀರು ಸಿಗಲಾರದೆ ದ್ರಾಕ್ಷಿ ಬೆಳೆ ಸಂಪೂರ್ಣವಾಗಿ ಒಣಗಿ ಹೋಗಿವೆ. ಆದ್ದರಿಂದ, ಇಂಥವರಿಗೋಸ್ಕರ ಅಂದರೆ, ಈಗ 25,000 ರೂಪಾಯಿ ಸಾಲ ಮನ್ನಾ ಮಾಡಿರುವುದು ಸರಿಯಾಗುವುದಿಲ್ಲ. ಇವತ್ತಿನ ದಿವಸ ರೈತ ಆತ್ಮಹತ್ಯೆ ಸ್ಥಿತಿಗೆ ಬಂದು ನಿಂತಿದ್ದಾನೆ. ಆದ್ದರಿಂದ ದ್ರಾಕ್ಷಿ ಬೆಳೆದಿರುವವರಿಗೆ ವಿಶೇಷ ಸಾಲವನ್ನು ಅಂದರೆ, 25,00 ರೂಪಾಯಿ ಸಾಲದ ಬದಲಿಗೆ ದ್ರಾಕ್ಷಿ ಬೆಳೆಗಾಗಿ ತೆಗೆದುಕೊಂಡಿರುವ ಸಾಲದಲ್ಲಿ ಸುಮಾರು 25% ನಷ್ಟು ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಂದರೆ, ಇದಕ್ಕಾಗಿ 1 ಲಕ್ಷ ರೂಪಾಯಿ ಸಾಲ ತೆಗೆದುಕೊಂಡರೆ ಕೇವಲ 25,000 ರೂಪಾಯಿ ಮನ್ನಾ ಮಾಡಲಿ. 2 ಲಕ್ಷ ರೂಪಾಯಿ ಸಾಲ ತೆಗೆದುಕೊಂಡಿದ್ದರೆ 50 ಸಾವಿರ ರೂಪಾಯಿ ಮತ್ತು 3 ಲಕ್ಷ ಸಾಲ ತೆಗೆದುಕೊಂಡಿದ್ದರೆ 75 ಸಾವಿರ ರೂಪಾಯಿ ಮನ್ನಾ ಮಾಡಬೇಕು. ಅಂದರೆ, ಆತ ತೆಗೆದುಕೊಂಡಿರುವ ಸಾಲದಲ್ಲಿ 25%ನಷ್ಟು ಸಾಲವನ್ನು ಮನ್ನಾ ಮಾಡಿದರೆ ಮಾತ್ರ ದ್ರಾಕ್ಷಿ ಬೆಳೆದಂಥ ರೈತ ಆತ್ಮಹತ್ಯೆ ಮಾಡಿಕೊಳ್ಳಲಾರದೆ ಸಮಾಜದಲ್ಲಿ ಮತ್ತೆ ತಲೆ ಎತ್ತಿ ತಿರುಗಾಡುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದರ ಜೊತೆಗೆ ಒಣ ದ್ರಾಕ್ಷಿ ಬೆಳೆದಿರುವಂಥ ರೈತರು ಕೇವಲ 60 ರೂಪಾಯಿಗೆ ಒಂದು ಕೆ.ಜಿ ಒಣ ದ್ರಾಕ್ಷಿ ಮಾರಾಟ ಮಾಡುತ್ತಿದ್ದಾನೆ. ಆದ್ದರಿಂದ ನಾನು ಹೇಳುವುದೇನೆಂದರೆ, ಕನಿಷ್ಠ ಒಂದು ಕೆ.ಜಿ.ಗೆ 150 ರೂಪಾಯಿ ದರದಲ್ಲಿ ಒಣ ದ್ರಾಕ್ಷಿಯನ್ನು ಸರ್ಕಾರವೇ ಖರೀದಿ ಮಾಡಿ ಸ್ಕೂಲ್‌ಗಳಲ್ಲಿ ಮಕ್ಕಳಿಗೆ ಊಟ ಕೊಡುತ್ತಿದ್ದು. ಇದರ ಜೊತೆಗೆ ಮಕ್ಕಳಿಗೆ ಒಣ ದ್ರಾಕ್ಷಿಯನ್ನು ಹಂಚಿಕೆ ಮಾಡಿದರೆ ಮಕ್ಕಳಿಗೆ ಪೌಷ್ಠಿಕ ಆಹಾರದ ಕೊರತೆ ಆಗಲಾರದೆ ಒಳ್ಳೆಯ ಆಹಾರ ಕೂಡ

ಸಿಗುತ್ತದೆ. ಇದರ ಜೊತೆಗೆ ದ್ರಾಕ್ಷಿ ಬೆಳೆಗಾರರಿಗೆ ಸಹಕಾರ ಕೂಡ ಸಿಗುತ್ತದೆ. ನಮ್ಮ ಸರ್ಕಾರ ಇವತ್ತು ಪಂಪ್ ಸೆಟ್‌ಗಳಿಗೆ ಕರೆಂಟ್ ಫ್ರೀಯಾಗಿ ಕೊಡಬೇಕೆಂದು ನಾನು ಇಂಧನ ಸಚಿವರಲ್ಲಿ ಆಗ್ರಹ ಮಾಡುತ್ತೇನೆ. ಅದೇ ರೀತಿಯಾಗಿ ಒಣದ್ರಾಕ್ಷಿ ಮಾಡುವಾಗ ಗ್ರೇಡ್ ಮೆಷಿನ್ ಉಪಯೋಗ ಮಾಡುತ್ತಾರೆ. ಜೊತೆ ಜೊತೆಗೆ ಔಷಧಿ, ಹೊಡಯುವುದಕ್ಕೆ ಆ ಮೆಷಿನ್ ಉಪಯೋಗಿಸುತ್ತಾರೆ. ಆದ್ದರಿಂದ ಫ್ರೀಯಾಗಿ ಕರೆಂಟ್ ಉಪಯೋಗಿಸಲು ಅನುಕೂಲ ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದು ದ್ರಾಕ್ಷಿ ಬೆಳೆಗಾರರ ಪರಿಸ್ಥಿತಿ. ಇನ್ನು ನಮ್ಮ ಬಿಜಾಪುರ ಜಿಲ್ಲೆಯಲ್ಲಿ 5 ನದಿಗಳು ಹರಿದ್ದಾವೆಂದು ಈಗಾಗಲೇ ನಾನು ಕೇಳಿದೆ. 5 ರಲ್ಲಿ ಡೋಣಿ, ಡೋಣಿ ಬೆಳೆದರೆ ಓಣಿ ಎಲ್ಲಾ ಜೋಳವೆಂದು ನಮ್ಮಲ್ಲಿ ಡೋಣಿ ಬಗ್ಗೆ ಒಂದು ನಾನ್ನುಡಿ ಇದೆ. ಆದರೆ ಇವತ್ತು ಎಂಥ ಕೆಟ್ಟ ಪರಿಸ್ಥಿತಿಗೆ ಬಂದು ನಿಂತಿದ್ದೇವೆಂದರೆ, ಡೋಣಿ ಬೆಳೆದರೆ ಓಣಿ ಎಲ್ಲಾ ಹಾಳ, ಯಾವ ಡೋಣಿ ನದಿ ಮಹಾರಾಷ್ಟ್ರದಲ್ಲಿ ಹುಟ್ಟಿ, ಜೆಗ್ ತಾಲ್ಲೂಕಿನ ಕೊಜಲವಾಡಿಯಲ್ಲಿ ಹುಟ್ಟಿ ಇವತ್ತು ಅಥಣಿ ತಾಲ್ಲೂಕಿನ ಬನ್ನೂರಿನಲ್ಲಿ ಕರ್ನಾಟಕವನ್ನು ಪ್ರವೇಶಿಸಿ, ಕರ್ನಾಟಕದಲ್ಲಿ 179 ಕಿ.ಮೀ. ಅದರ ಹರಿವು. ವಿಶೇಷವಾಗಿ ಬಿಜಾಪುರ ಜಿಲ್ಲೆಯಲ್ಲಿ 140 ಕಿ.ಮೀ. ಹರಿಯುತ್ತದೆ. ಆದರೆ ಇವತ್ತು ಹೇಗಾಗಿದೆ ಎಂದರೆ, ಆ ಡೋಣಿ ಸುತ್ತಮುತ್ತ ಎರೆಮಣ್ಣಿನ ಭೂಮಿ, ಆ ಭೂಮಿ ಎಷ್ಟೊಂದು ಫಲವತ್ತಾಗಿದೆ ಬಹುಶಃ ನಮ್ಮಲ್ಲಿ ಮನುಷ್ಯ ಹೂತರೆ ಮನುಷ್ಯ ನಾಡುತ್ತದೆ ಎಂದು ನಾನ್ನುಡಿ ಇದೆ. ಅಂದರೆ ಅಂಥ ಫಲವತ್ತಾದ ಜಮೀನು. ಸುಮಾರು 25–30 ಅಡಿ ಕೆಳಗೆ ಹೋದರು ಕೂಡ ಅಂಥ ಮಣ್ಣು ಇವತ್ತು loose soil ಆಗಿ ಆ ಡೋಣಿಯಲ್ಲಿ ಹರಿದು ಬರುತ್ತದೆ. ಹರಿದು ಬಂದು ಹೂಳು ತುಂಬಿ ಇವತ್ತು ನದಿ ಹೇಗೆ ಹರಿಯುತ್ತಿದೆ ಎಂದರೆ, ಡೋಣಿ ನದಿಯ ಪಕ್ಕದಲ್ಲಿರುವ ಗ್ರಾಮಗಳನ್ನು ಹಾಳು ಮಾಡುವಂಥ ಪರಿಸ್ಥಿತಿ ಇದೆ. ಕಾರಣವೇನೆಂದರೆ, ಮೊದಲನೆಯದಾಗಿ ಬಹುಶಃ ಇಷ್ಟೊಂದು ರೀತಿಯಲ್ಲಿ ಆ ಡೋಣಿ ನದಿ ಹಾಳು ಮಾಡುವುದಕ್ಕೆ ಕಾರಣವೇನೆಂದರೆ, ಮೊದಲು ನದಿಯಲ್ಲಿ ಎರೆಹುಳು ಮಣ್ಣಿರುವುದರಿಂದ, ಆ ಮಣ್ಣು ಹರಿದು ಬಂದು ನದಿಗೆ ಸೇರಿ ನೀರಿನ ವೇಗ ಕಡಿಮೆ ಇರುವುದರಿಂದ ಮಣ್ಣು ನದಿಯಲ್ಲಿ ಶೇಖರಣೆಯಾಗಿ ಹಾಳಾಗುತ್ತದೆ. ಅದಕ್ಕೆ ಎಲ್ಲಾ ಕಡೆ ಹರಿಯುತ್ತದೆ. ಎರಡನೆಯದಾಗಿ ಆ ನದಿಯಲ್ಲಿ ಹುಲ್ಲು, ಬಳ್ಳಾರಿ ಜಾಲಿ ಹಾಗೂ ಇನ್ನಿತರ ಮರಗಳು ಬೆಳೆದು ನೀರಿನ ಸ್ವಾಭಾವಿಕ ಹರಿವಿಗೆ ತಡೆವುಂಟಾಗಿ ನೀರು ಅಡ್ಡಾದಿಡ್ಡಿ ಹರಿಯುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವು ಕಡೆ ಈ ರೀತಿ ಹರಿದು ಯು ಟರ್ನ್ ತೆಗೆದುಕೊಳ್ಳುತ್ತದೆ. ಬಹುಶಃ ಈ ನದಿಯಿಂದ ನಮಗೆ

ಕುಡಿಯುವುದಕ್ಕೆ ನೀರು ಸಿಗುವುದಿಲ್ಲವೆಂದು ಹೇಳಿದೆ. ಈ ನದಿಯನ್ನು ನಾವು ಸರಿಯಾಗಿ ಸದುಪಯೋಗಪಡಿಸಿಕೊಂಡರೆ, ಇವತ್ತು ಬಿಜಾಪುರ ತಾಲ್ಲೂಕಿನ ತಿಕೋಟ ಹೊನವಾಡು ಮುಖ್ಯರಸ್ತೆಯಲ್ಲಿ 16 ಮೀಟರ್ depth 10 ಕಿ.ಮೀ. ಕೆನಾಲ್ ಅನ್ನು ಮಾಡಿದರೆ ಇವತ್ತು ಈ ನದಿ ಚಡಚಣ ಮುಖಾಂತರ ನಿಮುರಗಿ ಹತ್ತಿರ ಭೀಮಾ ನದಿಗೆ ಕೂಡಿಸಬೇಕು. ಆ ಭೀಮಾ ನದಿಯನ್ನು ಕೂಡಿಸುವುದರ ಜೊತೆಗೆ, ಈಗ ನಾವು ಯೋಜನೆ ಮಾಡಿದ್ದೇವೆ. ಕೆರೆ ನೀರು ತುಂಬುವಂಥ ಯೋಜನೆ ನಮಗೇನು ಬೇಕಾಗಿದೆ. ಎತ್ತರ ಪ್ರದೇಶದಲ್ಲಿ ಬಿಜಾಪುರ ಜಿಲ್ಲೆ ಇದೆ. ಅತ್ಯಂತ ಎತ್ತರದ ಪ್ರದೇಶ ಎಲ್ಲಿದೆ ಅಲ್ಲಿ ಆ ನೀರನ್ನು ನಾವು ಬಳಸಿಕೊಂಡರೆ ಅಲ್ಲಿ ಕುಡಿಯುವುದಕ್ಕೆ ನೀರು ಕೊಟ್ಟಾಂತಾಗುತ್ತದೆ. ಜೊತೆ ಜೊತೆಗೆ ಅಲ್ಲಿ ನೀರಾವರಿಗೂ ಕೆರೆಗಳು ತುಂಬುದಕ್ಕೂ ಅವಕಾಶ ಸಿಗುತ್ತದೆ. ಇವತ್ತು ಜೊತೆಗೆ ಅಲ್ಲಿ ಹಾಳಾಗುವಂಥ ಭೂಮಿಯನ್ನು ನಾವು ಉಳಿಸಿದಂತಾಗುತ್ತದೆ. ಅದಕ್ಕೆ ನನ್ನ ವಿಶೇಷ ವಿನಂತಿ ಏನೆಂದರೆ, ರಾಜ್ಯ ಸರ್ಕಾರದವರು ಇವತ್ತು ನೀವು, ನೀರು ಮತ್ತು ಮಣ್ಣು ಸಂರಕ್ಷಣಾ ನೀತಿಯಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ಈ ಯೋಜನೆಯನ್ನು ಮಾಡಿದರೆ, ಕೇಂದ್ರ ಸರ್ಕಾರ 75% ಅನುದಾನ ಕೊಡುತ್ತದೆ 25% ಅನುದಾನವನ್ನು ನಮ್ಮ ರಾಜ್ಯ ಸರ್ಕಾರದವರು ತುಂಬಿದರೆ, ಇವತ್ತು ಆ ಹೂಳು ಎತ್ತಬಹುದು ಮತ್ತು ಆ ನೀರನ್ನು ಒಳ್ಳೆಯ ರೀತಿಯಲ್ಲಿ ಸದುಪಯೋಗ ಮಾಡಿಕೊಳ್ಳಬಹುದೆನ್ನುವ ಮಾತನ್ನು ಹೇಳುತ್ತೇನೆ. ಈಗಾಗಲೇ ಆದರ ಕ್ರಿಯಾ ಯೋಜನೆಯನ್ನು ಮಾಡಿದ್ದೇವೆ. ಒಟ್ಟು ರೂ. 500 ಕೋಟಿಗಳ ಯೋಜನೆ ಇದೆ. ಇದರಲ್ಲಿ ನೀರು ಮತ್ತು ಮಣ್ಣು ನಿರ್ವಹಣಾ ಅಂದಾಜು ಯೋಜನೆ, ಅಂದಾಜು ರೂ. 300 ಕೋಟಿ, ಜೊತೆಗೆ ಈ ಮೇಲ್ಕಾಣಿಸಿದ ನದಿಗೆ ಸಂಬಂಧಿಸಿದ ಪರಿಹಾರದ ಹಣ ಅಂದಾಜು ರೂ. 200 ಕೋಟಿ. ಇದರಲ್ಲಿ ನಾವು 25%, ರೂ. 100 ಕೋಟಿ ನೀರು ಮತ್ತೆ ಮಣ್ಣು ನಿರ್ವಹಣಾ ಯೋಜನೆಗೆ ರೂ. 300 ಕೋಟಿಯಲ್ಲಿ ಕೇಂದ್ರ ಸರ್ಕಾರ ನೂರಕ್ಕೆ ನೂರು ಕೇಂದ್ರ ಸರ್ಕಾರ ಭರಿಸುತ್ತದೆ. ಕೇವಲ ರೂ. 200 ಕೋಟಿಯಲ್ಲಿ ಈ ಯೋಜನೆ ಈ ಪರಿಹಾರದಲ್ಲಿ ನಾವು 25% ಕಟ್ಟಿದ್ದೆ ಆದರೆ, ಈ ರೂ. 500 ಕೋಟಿ ಯೋನೆ ಕೇಂದ್ರ ಸರ್ಕಾರದ ಸಹಯೋಗದಿಂದ ಮಾಡಿದರೆ, ನಮ್ಮ ಬಿಜಾಪೂರ ಜಿಲ್ಲೆ ಒಂದು ಒಳ್ಳೆಯ ಕುಡಿಯುವ ನೀರಿನ ಜೊತೆಗೆ ಕೆರೆಗಳು ತುಂಬುವಂಥ ಯೋಜನೆ ಅತ್ಯಂತ ಯಶಸ್ವಿಯಾಗುತ್ತದೆ. ಪ್ರತಿ ವರ್ಷ ರೂ. 200 ಕೋಟಿಗಳ ಬೆಳೆ ಏನು ಹಾನಿಯಾಗುತ್ತದೆ. ನಾವು ಡೋಣಿ ಸುತ್ತಮುತ್ತ ಜೋಳ ಬೆಳೆಯುತ್ತೇವೆ. ನಿಮಗೆ ಗೊತ್ತಿದೆ ನಮ್ಮ ಜೋಳದ ರೊಟ್ಟಿ ಬಹಳ ಪ್ರಸಿದ್ಧ. ಆ ಜೋಳವನ್ನು ಎಲ್ಲಿಯಾದರೂ ಬೆಳೆಯಬೇಕೆಂದರೆ, ಅದು ಡೋಣಿ ನದಿಯ ಇಕ್ಕೆಲಗಳಲ್ಲಿ.

ಅಂಥ ಜಮೀನನ್ನು ನಾವು ಕಾಯ್ದುಕೊಂಡಂತಾಗುತ್ತದೆ. ಮತ್ತು ಅಲ್ಲಿಯ ರೈತರಿಗೆ ಒಳ್ಳೆಯ ಅವಕಾಶ ಸಿಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಎತ್ತರದ ಪ್ರದೇಶದಲ್ಲಿ ಇವತ್ತು ನಾವು ಕೃಷ್ಣಾ ಕೊಳ್ಳದ ಯೋಜನೆಯಲ್ಲಿ ಗುತ್ತಿ ಬಸವಣ್ಣ ಏತನೀರಾವರಿ, ಚಿಮ್ಮಲಗಿ ಏತ ನೀರಾವರಿ, ಮುಳವಾಡ್ ಏತ ನೀರಾವರಿ 5 ಟಿ.ಎಂ.ಸಿ. ನೀರನ್ನು ಕಟ್ ಮಾಡಿ ಇವತ್ತು ನಮಗೇನು ತೊಂದರೆಯಾಗಿದೆ. ಟೇಲ್ ಎಂಡ್, ಅಂದರೆ ಕೊನೆಗೆ ಏನು ನೀರು ಬರುವುದಿಲ್ಲ. ಆ ನೀರು ಬರುವಲ್ಲಿ ಈ ಮಹತ್ವದ ಪಾತ್ರವನ್ನು ಈ ಡೋಣಿ ನದಿ ಮಾಡುತ್ತದೆ. ಜೊತೆಗೆ ಇವತ್ತು ಸದನದಲ್ಲಿರುವವರಲ್ಲಿ ನನ್ನ ವಿನಂತಿ ಏನೆಂದರೆ, ತಾವು ಬರುವ ದಿನಗಳಲ್ಲಿ ಈ ಯೋಜನೆಯ ವ್ಯವಸ್ಥೆಯನ್ನು ಮಾನ್ಯ ಸಚಿವರು ಮಾಡಿಕೊಟ್ಟು ನಮ್ಮ ಬಿಜಾಪುರ ಜಿಲ್ಲೆಗೆ ಬೃಹತ್ ಉಪಕಾರ ಮಾಡುತ್ತಾರೆನ್ನುವ ಮಾತನ್ನು ಸ್ಪಷ್ಟಪಡಿಸುತ್ತಾ ತಮ್ಮೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಅಧ್ಯಕ್ಷರು** : – ಈಗ ಸದನವನ್ನು ಎರಡು ಮುಕ್ಕಾಲು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಪುನಃ ಮಧ್ಯಾಹ್ನ 2 ಗಂಟೆ 45 ನಿಮಿಷಕ್ಕೆ ಸೇರುವಂತೆ ಮಧ್ಯಾಹ್ನ 2 ಗಂಟೆ 7 ನಿಮಿಷಕ್ಕೆ ಮುಂದೂಡಲಾಯಿತು)

**ಸದನವು ಪುನಃ ಮಧ್ಯಾಹ್ನ 3.20 ಗಂಟೆಗೆ ಸಮಾವೇಶಗೊಂಡಿತು.**

**(ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯನವರ ಪೀಠದಲ್ಲಿದ್ದರು).**

**ಅಧ್ಯಕ್ಷರು** : – ವಿತ್ತೀಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ. ರೇವಣ್ಣನವರೇ ನೀವು ಮಾತನಾಡಿ.

**ಶ್ರೀ ಹೆಚ್.ಡಿ. ರೇವಣ್ಣ** : – ಮಾನ್ಯ ಸಭಾಧ್ಯಕ್ಷರೆ, ಯುನೆಸ್ಕೋ ಇರುವುದರಿಂದ, ನಾನು ಅರ್ಧ ಗಂಟೆಗಳ ಕಾಲ ಮಾತನಾಡುತ್ತೇನೆ. ಅದರೆ ಯುನೆಸ್ಕೋ ತೆಗೆದುಕೊಳ್ಳುವುದಿಲ್ಲವೇ ?

**ಅಧ್ಯಕ್ಷರು** : – ಅರ್ಧ ಗಂಟೆ ಕಾಲ ಬೇಡ. ಮೊದಲು ಮಾತನಾಡಿ ಮುಗಿಸಿ.

**ಶ್ರೀ ಹೆಚ್.ಡಿ. ರೇವಣ್ಣ** : – ಮಾನ್ಯ ಮುಖ್ಯಮಂತ್ರಿಗಳಿಲ್ಲ. ಕಂದಾಯ ಮತ್ತು ಇತರೆ ಯಾವುದೇ ಮಂತ್ರಿಗಳಿಲ್ಲ. ನಾನು ಯಾರಿಗೆ ಹೇಳುವುದು. ಅಧಿಕಾರಿಗಳಿಲ್ಲ. Secretary ಗಳಿಲ್ಲ. ಮತ್ಯಾರಿಗೆ ಹೇಳುವುದು.

**ಶ್ರೀ ಬಂಡೆಪ್ಪ ಕಾಶೆಂಪೂರ** : – Front line Officers ಒಬ್ಬರೂ ಇಲ್ಲ. ಮಾನ್ಯ ಸುರೇಶ್ ಕುಮಾರ್ ರವರು ಹೇಳಬೇಕು.